ಕರ್ನಾಟಕ ವಿಧಾನ ಸಭೆ

ಶುಕ್ರವಾರ 21ನೇ ಮಾರ್ಚ್ 2003

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ : 9.35 ಗಂಟೆಗೆ ಸಮಾವೇಶಗೊಂಡಿತು.

ಸನ್ಮಾನ್ಯ ಅಧ್ಯಕ್ಷರು, ಶ್ರೀ (ಎಂ.ವಿ. ವೆಂಕಟಪ್ಪ) ಅವರು
ಪೀಠವನ್ನು ಅಲಂಕರಿಸಿದರು.

ಅಧ್ಯಕ್ಷರು:- ಇಂದಿನ ಕಾರ್ಯಕ್ರಮದ ಪಟ್ಟಿಯ ರೀತ್ಯ ಶ್ರೀಮಾನ್ ಎಸ್.ಎಂ.ಕೃಷ್ಣ, ಹಣಕಾಸು ಮಂತ್ರಿಗಳು 2003-04 ನೇ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಮಂಡಿಸುವುದು.

2003–04 ನೇ ಸಾಲಿನ ಆಯವ್ಯಯ ಅಂದಾಜು ಪತ್ರದ ಮಂಡನೆ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು ಹಾಗೂ ಹಣಕಾಸು ಸಚಿವರು) :-

ಸನ್ಮಾನ್ಯ ಸಭಾಧ್ಯಕ್ಷರೆ,

1. ನಾನು 2003-2004 ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸುತ್ತಿದ್ದೇನೆ.

2. ನನ್ನ ಸರ್ಕಾರದ ಪ್ರಥಮ ಆಯವ್ಯಯ ಪತ್ರದಲ್ಲಿ ನಾನು ನೀಡಿದ್ದ ನೋಟಗಳು ಈಗ ಕಾರ್ಯಕ್ರಮಗಳಾಗಿ ರೂಪು ತಳೆದಿವೆ. ಇವೆಲ್ಲವೂ ಸಂಪೂರ್ಣವಾಗಿ ಫಲ ನೀಡುವಂತೆ ಮಾಡುವುದು ನನ್ನ ಆಶಯ ಮತ್ತು ಪ್ರಯತ್ನವಾಗಿದೆ.

3. ಈ ಹಿಂದಿನ ಮುಂಗಡ ಪತ್ರಗಳಲ್ಲಿ ನಾನು ಚಾಲನೆ ನೀಡಿದ್ದ ಕಾರ್ಯಕ್ರಮಗಳ ಬಗ್ಗೆ ನನ್ನ ಬದ್ಧತೆ ಈಗಲೂ ಮುಂದುವರಿದಿದೆ. ಇದು ಈ ಮುಂಗಡ ಪತ್ರದಲ್ಲಿ ಪ್ರತಿಫಲಿಸುತ್ತಿದೆ. ಇದಲ್ಲದೆ ಜನರ ಅಗತ್ಯಗಳಿಗೆ ಸ್ಪಂದಿಸಿ, ಹಲವಾರು ಪ್ರಮುಖ ಕಾರ್ಯಕ್ರಮಗಳಿಗೆ ನಾವು ಚಾಲನೆ ನೀಡಿರುವುದನ್ನು ಸಹ ಮುಂಗಡಪತ್ರವು ಹೇಳುತ್ತಿದೆ.

4. ಕಳೆದ ಮೂರು ವರ್ಷಗಳಲ್ಲಿ ಎದುರಾದ ಹಲವಾರು ಸವಾಲುಗಳು ಮತ್ತು ನಿರ್ಬಂಧಗಳನ್ನು ನನ್ನ ಸರ್ಕಾರವು ದಿಟ್ಟತನದಿಂದ ಎದುರಿಸಿದೆ ಎಂದು ಈ ಸಂದರ್ಭದಲ್ಲಿ ಹೇಳಲು ನಾನು ಹೆಮ್ಮೆ ಪಡುತ್ತೇನೆ.

5. ಕಳೆದ ವರ್ಷ ರಾಜ್ಯ ಮತ್ತು ರಾಜ್ಯದ ಜನತೆಗೆ ಸಂಕಷ್ಟದ ಕಾಲವಾಗಿತ್ತು. ಕರ್ನಾಟಕವು ಸತತವಾಗಿ ಎರಡನೆ ವರ್ಷ ಬರಗಾಲಕ್ಕೆ ತುತ್ತಾಯಿತು ರಾಜ್ಯದ 24 ಜಿಲ್ಲೆಗಳ 157 ತಾಲ್ಲೂಕುಗಳು ತೀವ್ರ ತೊಂದರೆಗೆ ಒಳಗಾದವು.

6. ಈ ಗಂಭೀರ ಪರಿಸ್ಥಿತಿಯನ್ನು ನಿವಾರಿಸಲು ನನ್ನ ಸರ್ಕಾರವು ಸಿಆರ್‌ಎಫ್ ಮತ್ತು ಎನ್‌ಸಿಸಿಎಫ್ ಯೋಜನೆಗಳ ನೆರವಿನ ಜೊತೆಗೆ ಹೆಚ್ಚುವರಿಯಾಗಿ 50 ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು ಬರ ಪರಿಹಾರ ಕಾರ್ಯಾಚರಣೆಗೆ ಬಿಡುಗಡೆ ಮಾಡಿತು.

7. ಈ ಬೃಹತ್ ಬರ ಪರಿಹಾರ ಪ್ರಯತ್ನಗಳಿಗೆ ಪೂರಕವಾಗಿ ಕ್ಷೇತ್ರಾಭಿವೃದ್ಧಿ ನಿಧಿಯಿಂದ ನಾಲ್ಕನೆ ಒಂದು ಭಾಗದಷ್ಟು ಅಂದರೆ 29.10 ಕೋಟಿ ರೂ.ಗಳನ್ನು ಕೊಡುಗೆಯಾಗಿ ನೀಡಿದ ಗೌರವಾನ್ವಿತ ಸದಸ್ಯರೆಲ್ಲರಿಗೂ ನಾನು ಈ ಸಂದರ್ಭದಲ್ಲಿ ವಂದನೆಗಳನ್ನು ಸಲ್ಲಿಸುತ್ತೇನೆ. ಇನ್ನು ಮುಂದೆಯೂ ಸಹ ಬಿಕ್ಕಟ್ಟಿನ ಸಂದರ್ಭಗಳಲ್ಲಿ ತಾವೆಲ್ಲರೂ ಸರ್ಕಾರದ ಪ್ರಯತ್ನಗಳಿಗೆ ಬೆಂಬಲವಾಗಿ ನಿಲ್ಲುತ್ತೀರೆಂಬ ವಿಶ್ವಾಸ ನನಗಿದೆ.

8. ನನ್ನ ಸರ್ಕಾರವು 2002ರ ಮುಂಗಾರಿನ ಅವಧಿಯ ಅಲ್ಪಾವಧಿ ಸಹಕಾರಿ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಲು ಬದ್ಧವಾಗಿದೆ. ಆದರೆ ಭಾರತ ಸರ್ಕಾರವು ಈ ಹೊರೆಯಲ್ಲಿ ಕೇವಲ ಶೇಕಡ 20 ರಷ್ಟನ್ನು ಮಾತ್ರ ಭರಿಸಲು ಸಮ್ಮತಿಸಿದೆ. ಆದ್ದರಿಂದ ಉಳಿಕೆ ಮೊತ್ತವನ್ನು ನಾನು ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿ ಮತ್ತು ರಾಷ್ಟ್ರೀಯ ವಿಕೋಪ ಸಾದಿಲ್ವಾರು ನಿಧಿಯಿಂದ ಭರಿಸುವ ಉದ್ದೇಶ ಹೊಂದಿದ್ದೇನೆ.

9. ರಾಜ್ಯದ ಜನತೆ ಬರ ಪರಿಸ್ಥಿತಿಯಿಂದ ಸುಧಾರಿಸಿಕೊಳ್ಳುವುದಕ್ಕೆ ಮುನ್ನವೆ ಕಾವೇರಿ ಕಣಿವೆಯಲ್ಲಿ ತೀವ್ರ ನೀರಿನ ಕೊರತೆಯ ಬಿಕ್ಕಟ್ಟು ಎದುರಾಯಿತು.

10. ಇದು ಕಾವೇರಿ ನೀರನ್ನೇ ನಂಬಿರುವ ರೈತರಲ್ಲಿ ತೀವ್ರ ಹತಾಶೆಯನ್ನು ತಂದಿತು. ಕಾವೇರಿ ನೀರಿನ ಹಂಚಿಕೆಯ ವಿವಾದ ಬಗೆಹರಿಯದೆ ಮುಂದುವರಿಯುತ್ತಿರುವುದರಿಂದ ತೊಂದರೆಗೆ ಒಳಗಾಗಿರುವ ಎಲ್ಲ ರೈತಾಪಿ ಕುಟುಂಬದ ನೋವನ್ನು ನಾನು ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ.

11. ಭಾವಾವೇಶ ಮೇರೆ ಮೀರಿದ ಈ ಸಂದರ್ಭ ರಾಜ್ಯಕ್ಕೆ ಸತ್ವ ಪರೀಕ್ಷೆಯ ಕಾಲವಾಗಿತ್ತು. ಈ ಆಸ್ಫೋಟಕ ಪರಿಸ್ಥಿತಿಯಲ್ಲೂ ಸಹ ಶಾಂತಿಯುತವಾಗಿ ಸಹಕರಿಸಿದ ಕರ್ನಾಟಕದ ಜನತೆಗೆ ನಾನು ವಂದಿಸುತ್ತೇನೆ.

12. ನಾನು ನಿಮ್ಮೆಲ್ಲರಂತೆ ಸದಾ ಆಶಾವಾದಿ. ಮುಂಬರುವ ವರ್ಷವು ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಖಂಡಿತ ಶುಭ ತರಲಿದೆ ಎನ್ನುವ ಆಶಯ ನನ್ನದಾಗಿದೆ.

13. ಈ ವರ್ಷದ ಆಯವ್ಯಯದಲ್ಲಿ ನಾನು ಮೂರು ಉದ್ದೇಶಗಳನ್ನು ಸಾಧಿಸಲು ಪ್ರಯತ್ನಿಸಿದ್ದೇನೆ.

14. ಮೊದಲನೆಯದಾಗಿ; ನಾನು ನಾಗರೀಕ ಸ್ನೇಹಿ (ಸಿಟಿಜನ್ ಫ್ರೆಂಡ್ಲಿ) ತೆರಿಗೆ ವ್ಯವಸ್ಥೆಯನ್ನು ಅಳವಡಿಸಲು ಮತ್ತು ಸಾಮಾನ್ಯ ಜನರಿಗೆ ಕೆಲವು ತೆರಿಗೆ ಪರಿಹಾರಗಳನ್ನು ನೀಡಲು ಯತ್ನಿಸಿದ್ದೇನೆ.

15. ಎರಡನೆಯದಾಗಿ; ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚುವರಿ ಸಂಪನ್ಮೂಲ ಒದಗಿಸಲು ಅನುತ್ಪಾದಕ ಕಂದಾಯ ವೆಚ್ಚಗಳನ್ನು ಕಡಿತ ಮಾಡಿದ್ದೇನೆ.

16. ಮೂರನೆಯದಾಗಿ; ಅಭಿವೃದ್ಧಿ ವೆಚ್ಚಗಳನ್ನು ಆದ್ಯತೀಕರಿಸಿ ಕೃಷಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ ಹಾಗೂ ಮಹಿಳೆಯರು ಮತ್ತು ದುರ್ಬಲ ವರ್ಗದವರ ಕಲ್ಯಾಣಕ್ಕಾಗಿ ಅನುದಾನದಲ್ಲಿ ಹೆಚ್ಚಳ ಮಾಡಿದ್ದೇನೆ.

17. ಇದೇ ಈ ಆಯವ್ಯಯ ಪತ್ರದ ಮೂಲ ಆಶಯವಾಗಿದೆ.

ಆರ್ಥಿಕ ಪರಿಸ್ಥಿತಿ

18. ಮುಂಗಡ ಅಂದಾಜುಗಳ ರೀತ್ಯ ಕರ್ನಾಟಕದ ಒಟ್ಟು ಆಂತರಿಕ ಉತ್ಪನ್ನವು (ಜಿಎಸ್‌ಡಿಪಿ) ಶೇಕಡ 8.3 ರ ಬೆಳವಣಿಗೆ ದರವನ್ನು ಸೂಚಿಸುತ್ತಿದೆ. ಕೈಗಾರಿಕೆ ಮತ್ತು ಸೇವಾ ವಲಯಗಳು ಕ್ರಮವಾಗಿ ಶೇಕಡ 8.9 ಮತ್ತು ಶೇಕಡ 13.7 ರ ದರದಲ್ಲಿ ಬೆಳೆದಿದೆ. ಆದರೆ ಕೃಷಿ ವಲಯವು ಮಾತ್ರ ಶೇಕಡ 3.6 ರಷ್ಟು ಋಣಾತ್ಮಕ ಬೆಳವಣಿಗೆ ದರವನ್ನು ದಾಖಲುಮಾಡಿದೆ. ಭೀಕರ ಬರಗಾಲದಿಂದಾಗಿ ಈ ಪರಿಸ್ಥಿತಿ ಉದ್ಭವಿಸಿದೆ.

19. ಅಲ್ಪ ಆರ್ಥಿಕ ಬೆಳವಣಿಗೆಯಿಂದಾಗಿ ಹಣದುಬ್ಬರದ ಒತ್ತಡಗಳು ಕೊಂಚ ಶಮನಗೊಂಡಿವೆ. ಎಲ್ಲಾ ವಸ್ತುಗಳ ಸಗಟು ಬೆಲೆ ಸೂಚ್ಯಂಕವು ಮಾರ್ಚ್ 2002 ರಿಂದ ಅಕ್ಟೋಬರ್ 2002 ರ ಅವಧಿಯಲ್ಲಿ ಶೇಕಡ 3.46 ರ ದರದಲ್ಲಿ ಏರಿಕೆಯಾಗಿದೆ. 2001ನೇ ಇಸವಿಯ ಇದೇ ಅವಧಿಗೆ ಹೋಲಿಸಿದರೆ ಇದು ತುಸು ಹೆಚ್ಚಿನ ಬೆಳವಣಿಗೆ. ಕರ್ನಾಟಕದ ಗ್ರಾಹಕ ಬೆಲೆ ಸೂಚ್ಯಂಕವನ್ನು ಅಖಿಲ ಭಾರತ ಸರಾಸರಿಯ ಜೊತೆಗೆ ಹೋಲಿಸಿದಾಗ ರಾಜ್ಯದಲ್ಲಿ ಜೀವನ ವೆಚ್ಚ ಸಾಕಷ್ಟು ನಿಯಂತ್ರಣದಲ್ಲಿಯೇ ಇದೆ.

20. 2003-04ನೇ ಸಾಲಿನ ಆರ್ಥಿಕ ಮುನ್ನೋಟವು ಆಶಾದಾಯಕವಾಗಿದೆ. ಸತತ ಎರಡು ಬರಗಾಲದ ನಂತರವೂ ಮುಂಬರುವ ವರ್ಷದಲ್ಲಿ ಉತ್ತಮ ಮುಂಗಾರನ್ನು ನಿರೀಕ್ಷಿಸುವುದರಲ್ಲಿ ತಪ್ಪೇನಿಲ್ಲ. ನಮ್ಮ ಮಧ್ಯಮಾವಧಿ ಆರ್ಥಿಕ ಯೋಜನೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆಯನ್ನು ಶೇಕಡ 8 ಎಂದು ಬಿಂಬಿಸುತ್ತಿದ್ದರೂ ಸಹ ನಾವು ಬೆಳವಣಿಗೆ ದರವನ್ನು ವಾಸ್ತವ ನೆಲೆಗಟ್ಟಿನಲ್ಲಿ ಶೇಕಡ 6 ಎಂದು ನಿಗದಿಪಡಿಸಿದ್ದೇವೆ. ಯೋಜನಾ ವೆಚ್ಚವನ್ನು ನಿಗದಿಪಡಿಸುವಲ್ಲಿ ಸಂಪನ್ಮೂಲದ ನಿರ್ಬಂಧವಿದ್ದರೂ ಸಹ ನಿಗದಿಪಡಿಸಿರುವ ಜಿಎಸ್‌ಡಿಪಿ ಬೆಳವಣಿಗೆಯನ್ನು ಸಾಧಿಸಲು ನಾನು ಪ್ರಮುಖ ವಲಯಗಳಾದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಸಾಮಾಜಿಕ ವಲಯಗಳಿಗೆ ಹೆಚ್ಚಿನ ಅನುದಾನವನ್ನು ಹಂಚಿಕೆ ಮಾಡಿದ್ದೇನೆ.

ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳು

21. ಕೃಷಿಯು ರಾಜ್ಯದ ಆರ್ಥಿಕ ಅಭಿವೃದ್ಧಿಯ ಕೇಂದ್ರ ಬಿಂದುವಾಗಿದೆ. ರಾಜ್ಯದ ಜಿಎಸ್‌ಡಿಪಿಯ ಸಂಯೋಜನೆಯಲ್ಲಿ ಕೃಷಿ ವಲಯದ ಕೊಡುಗೆ ಗಮನಾರ್ಹವಾಗಿರುತ್ತದೆ. ಅಲ್ಲದೆ ರಾಜ್ಯದ ಶೀಘ್ರ ಆರ್ಥಿಕ ಅಭಿವೃದ್ಧಿಯು ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳನ್ನೇ ಅವಲಂಬಿಸಿದೆ.

22. ಕರ್ನಾಟಕದ ಕೃಷಿ ಯೋಗ್ಯ ಜಮೀನಿನಲ್ಲಿ ಶೇಕಡ 70ಕ್ಕೂ ಹೆಚ್ಚು ಮಳೆಆಧಾರಿತ ಬೇಸಾಯವಾಗಿದೆ. ಆದ್ದರಿಂದ ನಾವು ಹೊಲದ ಹಂತದಲ್ಲಿ ಬರ ಪರಿಸ್ಥಿತಿ ತಡೆಗಟ್ಟುವ ಸಮಗ್ರ ಕೃಷಿ ವಿಧಾನಗಳಿಗೆ ಚಾಲನೆ ನೀಡಬೇಕಾಗಿದೆ. ಸುಧಾರಿತ ಬೇಸಾಯ ಪದ್ಧತಿಗಳಿಗೆ ಉತ್ತೇಜನ ನೀಡಿ ಬೆಳೆ ಉತ್ಪಾದಕತೆಯನ್ನು ಗಣನೀಯವಾಗಿ ಸುಧಾರಿಸಬೇಕಿದೆ.

23. ಕಡಿಮೆ ಪ್ರಮಾಣದ ನೀರಿನ ಬಳಕೆಯನ್ನು ಉತ್ತೇಜಿಸಲು ಹನಿ ನೀರಾವರಿ ಪದ್ಧತಿಯನ್ನು ವ್ಯಾಪಕವಾಗಿ ಜಾರಿಗೊಳಿಸಲು ನಾವು ನಿರ್ಧರಿಸಿದ್ದೇವೆ. ಹನಿ ನೀರಾವರಿ ಪದ್ಧತಿಯನ್ನು ಶೀಘ್ರಗತಿಯಲ್ಲಿ ಅಳವಡಿಸಿಕೊಳ್ಳುವಂತೆ ಉತ್ತೇಜಿಸಲು ನನ್ನ ಸರ್ಕಾರವು ಹನಿ ನೀರಾವರಿ ಉಪಕರಣ ಮತ್ತು ಸ್ಪ್ರಿಂಕ್ಲರ್ ಮತ್ತು ಕೃಷಿಯಲ್ಲಿ ಬಳಸುವ ವಾಟರ್ ಗನ್‌ಗಳ ಖರೀದಿಗಳಿಗೆ ಧಾರಾಳ ಸಹಾಯಧನ ನೀಡಲಿದೆ. ಈ ಯೋಜನೆಯಂತೆ ಫಲಾನುಭವಿ ರೈತರಿಗೆ ಶೇಕಡ 50 ರಷ್ಟು ಬಂಡವಾಳ ಸಹಾಯಧನ ಮತ್ತು ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇಕಡ 100 ರಷ್ಟು ಸಹಾಯಧನ ದೊರೆಯಲಿದೆ.

24. ಯಾಂತ್ರೀಕೃತ ಕೃಷಿಯ ಮಹತ್ವವನ್ನು ಮನಗಂಡಿರುವ ನಾನು ರೈತರು ಖರೀದಿಸುವ ಅತ್ಯಾಧುನಿಕ ಕೃಷಿ ಉಪಕರಣಗಳಿಗೆ, ಟ್ರಾಕ್ಟರ್‌ಗೆ ಅಳವಡಿಸುವ ಸಸ್ಯ ಸಂರಕ್ಷಣ

ಉಪಕರಣಗಳಿಗೆ, ಪವರ್ ಟಿಲ್ಲರ್‌ಗಳಿಗೆ, ಸೌರಶಕ್ತಿಯಿಂದ ನೀರೆತ್ತುವ ಪಂಪ್‌ಗಳಿಗೆ ಈಗ ನೀಡುತ್ತಿರುವ ಶೇಕಡ 25 ರ ಸಹಾಯಧನವನ್ನು ಶೇಕಡ 50 ಕ್ಕೆ ಹೆಚ್ಚಿಸಲು ಉದ್ದೇಶಿಸಿದ್ದೇನೆ. ಇದರಿಂದ ನಾಟಿ ಮತ್ತು ಕೊಯ್ಲಿನ ಸಮಯದಲ್ಲಿ ರೈತರು ಎದುರಿಸುತ್ತಿರುವ ಕೃಷಿ ಕಾರ್ಮಿಕರ ಕೊರತೆ ನಿವಾರಣೆಯಾಗುತ್ತದೆ ಅಲ್ಲದೆ ಬೇಸಾಯದ ಖರ್ಚು ಹಾಗೂ ವೆಚ್ಚಗಳ ನಿಯಂತ್ರಣಕ್ಕೆ ನೆರವಾಗುತ್ತದೆ.

25. ಬಿಜಾಪುರ ತೋಟಗಾರಿಕೆ ಅಭಿವೃದ್ಧಿಗೆ ವಿಪುಲ ಅವಕಾಶವಿರುವ ಜಿಲ್ಲೆ ಎನ್ನುವ ವಿಷಯ ಮಾನ್ಯ ಸದಸ್ಯರುಗಳಿಗೆ ತಿಳಿದಿದೆ. ಇದರ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಉತ್ತೇಜನ ನೀಡಲಾಗುವುದು. ಈ ಪ್ರದೇಶದಲ್ಲಿ ತೋಟಗಾರಿಕೆ ಅಭಿವೃದ್ಧಿಗೆ ಚೈತನ್ಯ ನೀಡಲು ಬಿಜಾಪುರ ಜಿಲ್ಲೆಯಲ್ಲಿ ತೋಟಗಾರಿಕೆಗೆ ಅಳವಡಿಸುವ ಹನಿ ನೀರಾವರಿ ಮತ್ತು ಸ್ಪ್ರಿಂಕ್ಲರ್ ಉಪಕರಣಗಳಿಗೆ ಶೇಕಡ 100 ರಷ್ಟು ಸಹಾಯಧನವನ್ನು ನೀಡಲು ಉದ್ದೇಶಿಸಿದ್ದೇನೆ.

26. ಸರ್ಕಾರವು ಮಾರುಕಟ್ಟೆ ಪ್ರವೇಶ ಯೋಜನೆಯ ಮೂಲಕ ರೈತರ ಹತಾಶ ಮಾರಾಟವನ್ನು ತಡೆಹಿಡಿಯುವಲ್ಲಿ ಸಫಲವಾಗಿದೆ. ಪ್ರಸ್ತುತ ಮಾರುಕಟ್ಟೆ ಬೆಂಬಲ ಕಾರ್ಯಾಚರಣೆಗೆ 100 ಕೋಟಿ ರೂ.ಗಳ ಆವರ್ತ ನಿಧಿಯನ್ನು ಒದಗಿಸಲಾಗಿದ್ದು ಇದರ ವಹಿವಾಟು ಸುಮಾರು 200 ಕೋಟಿ ರೂ.ಗಳಾಗಿದೆ. 2003-04ನೇ ಸಾಲಿನ ಆರ್ಥಿಕ ವರ್ಷದಲ್ಲಿ ಇದಕ್ಕೆ ಹೆಚ್ಚುವರಿಯಾಗಿ 100 ಕೋಟಿ ರೂ.ಗಳನ್ನು ನೀಡಲು ನಾನು ಉದ್ದೇಶಿಸಿದ್ದೇನೆ.

27. ಆವರ್ತ ನಿಧಿಗೆ ಸ್ವಲ್ಪ ಭಾಗವನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮೂಲಕ ಕೊಡುಗೆಯಾಗಿ ಪಡೆಯಲಾಗುವುದು. ಆವರ್ತ ನಿಧಿಗೆ ಸಂಪನ್ಮೂಲ ಒಗ್ಗೂಡಿಸಲು ಮಾರುಕಟ್ಟೆ ಶುಲ್ಕವನ್ನು ಶೇಕಡ 1 ರಿಂದ ಶೇಕಡ 1.5 ಕ್ಕೆ ಏರಿಸಲಾಗುವುದು. ಇದರಿಂದಾಗಿ ಆವರ್ತ ನಿಧಿಯ ಮೊತ್ತವು 200 ಕೋಟಿ ರೂ.ಗಳಿಗೆ ಏರಲಿದ್ದು ಮಾರುಕಟ್ಟೆ ಬೆಂಬಲ ಕಾರ್ಯಾಚರಣೆಯ ವಹಿವಾಟನ್ನು 500 ಕೋಟಿ ರೂ.ಗಳವರೆಗೆ ನಿರ್ವಹಿಸಬಹುದಾಗಿದೆ.

28. ಮತ್ತಷ್ಟು ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಬೆಂಬಲ ಒದಗಿಸಲು ಹೊಂದಾಣಿಕೆ ಅನುದಾನ ನೀಡಬೇಕೆಂದು ನಾನು ಈ ಸಂದರ್ಭದಲ್ಲಿ ಭಾರತ ಸರ್ಕಾರಕ್ಕೆ ಮತ್ತೊಮ್ಮೆ ಮನವಿ ಸಲ್ಲಿಸುತ್ತೇನೆ.

29. ಮಧ್ಯವರ್ತಿಗಳ ಹಿಡಿತದಿಂದ ರೈತರನ್ನು ಬಿಡಿಸಲು ನಾನು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ 'ರೈತರ ಸಂತೆ' ಸ್ಥಾಪಿಸಲು ಉದ್ದೇಶಿಸಿದ್ದೇನೆ. ಇದಕ್ಕೆ ಅಗತ್ಯವಾದ ಹಣವನ್ನು ಆವರ್ತ ನಿಧಿಯಿಂದ ಪಡೆಯಲಾಗುವುದು.

30. ಸಾವಯವ ಕೃಷಿಗೆ ಉತ್ತೇಜನ ನೀಡುವುದು ನನ್ನ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ರೈತರು ಸಾವಯವ ಕೃಷಿಯನ್ನು ದೊಡ್ಡ ಪ್ರಮಾಣದಲ್ಲಿ ಅಳವಡಿಸಿಕೊಳ್ಳಲು ಅನುವಾಗುವಂತೆ ನಾನು ಕಾಂಪೋಸ್ಟ್, ವರ್ಮಿಕಾಂಪೋಸ್ಟ್ ಮತ್ತು ಬಯೋ ಫರ್ಟಿಲೈಸರ್ಸ್‌ಗಳಿಗೆ ನೀಡುವ ಸಹಾಯಧನವನ್ನು ಶೇಕಡ 25 ರಿಂದ ಶೇಕಡ 50 ಕ್ಕೆ ಹೆಚ್ಚಿಸುತ್ತಿದ್ದೇನೆ. ಈ ಉದ್ದೇಶಕ್ಕಾಗಿ ನಾನು 2 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.

31. ರೈತರ ಆತ್ಮಹತ್ಯೆ ವಿಷಯಗಳಿಗೆ ಸಂಬಂಧಿಸಿದಂತೆ ವೀರೇಶ್ ಸಮಿತಿಯು ನೀಡಿರುವ ವರದಿಯನ್ನು ಸರ್ಕಾರವು ಪರಿಶೀಲಿಸಿದೆ. ಸಾಲದ ಹೊರೆಯಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಂಡ ದುರದೃಷ್ಟಕರ ಸಂದರ್ಭದಲ್ಲಿ ಅವರ ಕುಟುಂಬಕ್ಕೆ 1 ಲಕ್ಷ ರೂ.ಗಳ ಪರಿಹಾರವನ್ನು ಒದಗಿಸಲಾಗುವುದು.

32. ರೈತರ ಆತ್ಮಹತ್ಯೆಗೆ ಸಾಲ ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯೇ ಸಂಭವನೀಯ ಕಾರಣ ಎನ್ನುವುದರ ಬಗ್ಗೆ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯು ದೃಢೀಕರಣ ಪತ್ರ ನೀಡಲಿದೆ. ಈ ಸಂಬಂಧ ಸ್ವೀಕರಿಸುವ ಮನವಿ ಪತ್ರಗಳನ್ನು ಮೂರು ತಿಂಗಳ ಒಳಗೆ ಇತ್ಯರ್ಥಪಡಿಸಲಾಗುವುದು.

33. ರಾಜ್ಯ ಸರ್ಕಾರವು ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ಬಳಸುವ ಡೀಸಲ್‌ಗೆ (ವಾರ್ಷಿಕ 50 ಸಾವಿರ ಕಿಲೋ ಲೀಟರ್ ಗರಿಷ್ಠ ಮಿತಿಗೆ ಒಳಪಡಿಸಿ) ಮಾರಾಟ ತೆರಿಗೆಯಿಂದ ವಿನಾಯಿತಿ ನೀಡಿದೆ. ಈ ವಿನಾಯಿತಿಯ ಮೊತ್ತ ವಾರ್ಷಿಕ 16 ಕೋಟಿ ರೂ.ಗಳಾಗಿದ್ದು ಇದು ಒಂದು ರೀತಿಯ ಸಹಾಯಧನದ ಸ್ವರೂಪದಲ್ಲಿದೆ. ಈ ರೀತಿಯ ತೆರಿಗೆ ವಿನಾಯಿತಿಗಳು ನಮ್ಮ ತೆರಿಗೆ ಸುಧಾರಣಾ ನೀತಿಗೆ ಸರಿ ಹೊಂದದಿದ್ದರೂ ಸಹ ಮೀನುಗಾರ ಸಮುದಾಯವು ಎದುರಿಸುತ್ತಿರುವ ಕಷ್ಟವನ್ನು ನಿವಾರಿಸಲು ನಾನು 2003-04ನೇ ಸಾಲಿನಲ್ಲೂ ಸಹ ಈ ಯೋಜನೆಯನ್ನು ಮುಂದುವರಿಸಲು ಉದ್ದೇಶಿಸಿದ್ದೇನೆ.

34. ರಾಜ್ಯದಲ್ಲಿ ಪಶು ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ನನ್ನ ಸರ್ಕಾರವು ಪಶು ವಿಜ್ಞಾನದಲ್ಲಿ ಉನ್ನತ ಶಿಕ್ಷಣವನ್ನು ಉತ್ತೇಜಿಸಲು ಬದ್ಧವಾಗಿದೆ. ರಾಜ್ಯದಲ್ಲಿನ ಉತ್ತಮ ಅರ್ಹತೆಯುಳ್ಳ ಪಶು ವೈದ್ಯರುಗಳನ್ನು ಒಂದೆಡೆ ಕಲೆ ಹಾಕುವ ಉದ್ದೇಶದಿಂದ ನಾನು ಬೀದರ್‌ನಲ್ಲಿ ಪಶು ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುತ್ತಿದ್ದೇನೆ. ಇದು ಉತ್ತರ ಕರ್ನಾಟಕದ ಅಭಿವೃದ್ಧಿಗೆ ಚೈತನ್ಯವನ್ನೂ ಸಹ ನೀಡಲಿದೆ. ಈ ಉದ್ದೇಶಕ್ಕಾಗಿ 5 ಕೋಟಿ ರೂ.ಗಳನ್ನು ನಾನು ಮೀಸಲಿಡುತ್ತಿದ್ದೇನೆ.

35. ಕುರಿ ಸಾಕಾಣಿಕೆ ಕರ್ನಾಟಕದ ಪರಂಪರಾಗತ ವೃತ್ತಿಯಾಗಿದೆ. ಈಗ ಕುರಿ ಅಭಿವೃದ್ಧಿ ಮತ್ತು ಕುರಿ ಉತ್ಪನ್ನಗಳ ಮಾರುಕಟ್ಟೆಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಲು ನಾನು ಒಂದು ಕೋಟಿ ರೂ.ಗಳ ಒಂದು ಅವಧಿಯ ಅನುದಾನವನ್ನು ಕುರಿ ಅಭಿವೃದ್ಧಿ ಮಂಡಳಿಗೆ ಒದಗಿಸುತ್ತಿದ್ದೇನೆ.

36. ರಾಜ್ಯಾದ್ಯಂತ ಕುರಿ ಸಾಕಾಣಿಕೆಯನ್ನು ಉತ್ತೇಜಿಸಲು ಅನುವಾಗುವಂತೆ ಅಂಚಿನ ಹಣ ಯೋಜನೆಯನ್ನು (ಮಾರ್ಜಿನ್ ಮನಿ) ಜಾರಿಗೊಳಿಸಲಾಗುವುದು. ಆರಂಭಿಕವಾಗಿ ಒಂದು ಲಕ್ಷ ಕುಟುಂಬಗಳಿಗೆ ಈ ಯೋಜನೆಯನ್ನು ವಿಸ್ತರಿಸಲಾಗುವುದು. ಕುರಿ ಸಂವರ್ಧನೆಯನ್ನು ಲಾಭದಾಯಕವಾಗಿ ಕೈಗೊಳ್ಳಲು ಈ ಯೋಜನೆ ಅನುವು ಮಾಡಿಕೊಡಲಿದೆ. ಫಲಾನುಭವಿಗಳನ್ನು ಗ್ರಾಮ ಪಂಚಾಯಿತಿಗಳ ಮೂಲಕ ಆಯ್ಕೆ ಮಾಡಲಾಗುವುದು. ಕರ್ನಾಟಕ ರಾಜ್ಯ ಕೃಷಿ ಗ್ರಾಮೀಣಾಭಿವೃದ್ಧಿ ಸಹಕಾರ ಬ್ಯಾಂಕ್ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಮೂಲಕ ಸಾಲದ ರೂಪದಲ್ಲಿ ಈ ಯೋಜನೆಗೆ ಹಣ

ಒದಗಿಸಲಾಗುವುದು. ಒಂದು ಆರ್ಥಿಕ ಕುರಿ ಘಟಕವನ್ನು ಖರೀದಿಸಲು ಅಗತ್ಯವಾದ ಅಂಚಿನ ಹಣವನ್ನು ಸರ್ಕಾರವು ಒದಗಿಸಲಿದೆ. ಇದಕ್ಕಾಗಿ ಮೂರು ಕೋಟಿ ರೂ.ಗಳನ್ನು ನಾನು ಒದಗಿಸುತ್ತಿದ್ದೇನೆ. ಅಗತ್ಯಕ್ಕೆ ಅನುಸಾರವಾಗಿ ಅನುದಾನದಲ್ಲಿ ಹೆಚ್ಚಳ ಮಾಡಲಾಗುವುದು.

37. *"ಯಶಸ್ವಿನಿ"* ನಮ್ಮ ಸರ್ಕಾರದ ವಿನೂತನ ಸಹಕಾರಿ ಯೋಜನೆ. ಈ ಯೋಜನೆಯಡಿ ತೀವ್ರ ಸ್ವರೂಪದ ಶಸ್ತ್ರ ಚಿಕಿತ್ಸೆಗಳ ವೆಚ್ಚವನ್ನು ಭರಿಸಲಾಗುವುದು. ಕರ್ನಾಟಕದ ಸಹಕಾರಿ ಸಂಘಗಳ ಸದಸ್ಯ ರೈತರು ಕೇವಲ 5 ರೂ.ಗಳ ಮಾಸಿಕ ಕೊಡುಗೆಯನ್ನು ನೀಡುವ ಮೂಲಕ ಈ ಅನುಕೂಲವನ್ನು ಪಡೆಯಬಹುದಾಗಿದೆ. ಈ ವಿಶಿಷ್ಟ ಯೋಜನೆಯಡಿ ಈಗಾಗಲೇ ಹತ್ತು ಲಕ್ಷ ರೈತರು ನೋಂದಣಿಗೊಂಡಿದ್ದಾರೆ ಎನ್ನುವ ವಿಷಯವನ್ನು ಮಾನ್ಯ ಸದಸ್ಯರುಗಳಿಗೆ ತಿಳಿಸಲು ನನಗೆ ಸಂತಸವಾಗುತ್ತಿದೆ.

38. ಈ ಯೋಜನೆಯಡಿ ಈಗಾಗಲೇ ನೋಂದಣಿಗೊಂಡಿರುವ ರೈತರ ಕುಟುಂಬದ ಇತರೆ ಸದಸ್ಯರಿಗೂ ಸಹ ಈ ಯೋಜನೆಯ ಅನುಕೂಲವನ್ನು 2003-04ನೇ ಸಾಲಿನಲ್ಲಿ ವಿಸ್ತರಿಸಲು ನಾನು ಉದ್ದೇಶಿಸಿದ್ದೇನೆ. ಈ ಸಂಬಂಧ ಪ್ರತಿ ಫಲಾನುಭವಿಯು ನೀಡುವ ವಿಮಾ ಕೊಡುಗೆಯ ಮೂರನೇ ಒಂದು ಭಾಗದಷ್ಟನ್ನು ಸರ್ಕಾರವು ಭರಿಸಲಿದೆ. ಈ ಉದ್ದೇಶಕ್ಕಾಗಿ ನಾನು 6 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

39. *'ಕಿಸಾನ್ ಕ್ರೆಡಿಟ್ ಕಾರ್ಡ್'* ಬಿಜಾಪುರ ಜಿಲ್ಲೆಯಲ್ಲಿ ಅದ್ಭುತ ಯಶಸ್ಸನ್ನು ಗಳಿಸಿದೆ. ಈ ಯೋಜನೆಯ ಪ್ರಮುಖ ಅನುಕೂಲವೆಂದರೆ, ರೈತರು ಸಾಲದ ಮೊತ್ತವನ್ನು ಒಂದೇ ಬಾರಿಗೆ ಪಡೆಯುವ ಬದಲು ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಪಡೆಯುವ ಮುಕ್ತ ಅವಕಾಶ ಇದರಲ್ಲಿದೆ. ಈ ಯೋಜನೆಯಡಿ ರೈತರು ಶೇಕಡ 9 ರ ದರದೊಳಗೆ ಸಾಲ ಪಡೆಯಬಹುದಾಗಿದೆ.

40. ಕಿಸಾನ್ ಕ್ರೆಡಿಟ್ ಯೋಜನೆಯನ್ನು 2003-04ನೇ ಸಾಲಿನಲ್ಲಿ ಇಡೀ ರಾಜ್ಯಕ್ಕೆ ವಿಸ್ತರಿಸಲಾಗುವುದು. ಈ ಕಾರ್ಯಕ್ರಮವನ್ನು 'ಭೂಮಿ' ಮತ್ತು ರೈತ ಸಂಪರ್ಕ ಕೇಂದ್ರಗಳ ಜೊತೆ ಸಂಯೋಜಿಸಲಾಗುವುದು.

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್

41. ನನ್ನ ಸರ್ಕಾರವು ಗ್ರಾಮ ಪಂಚಾಯಿತಿಗಳಿಗೆ ಸಮರ್ಪಕ ಆರ್ಥಿಕ ಸಂಪನ್ಮೂಲಗಳನ್ನು ಒದಗಿಸುತ್ತಿದೆ. ಈಗ ಪ್ರತಿ ಗ್ರಾಮ ಪಂಚಾಯತಿಯು 3.5 ಲಕ್ಷ ರೂ.ಗಳ ನಗದು ಅನುದಾನವನ್ನು ಪಡೆಯುತ್ತಿವೆ. ಪಂಚಾಯತ್ ರಾಜ್ ಸಂಸ್ಥೆಗಳನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಈ ಅನುದಾನವನ್ನು ನಾನು 5 ಲಕ್ಷ ರೂ.ಗಳಿಗೆ ಹೆಚ್ಚಿಸುತ್ತಿದ್ದೇನೆ. 1998-2000 ರಲ್ಲಿದ್ದ 1 ಲಕ್ಷ ರೂ.ಗಳ ಅನುದಾನ ಈಗ 5 ಲಕ್ಷ ರೂ.ಗಳಿಗೆ ಏರಿರುವುದನ್ನು ಮಾನ್ಯ ಸದಸ್ಯರುಗಳು ಗಮನಿಸಬಹುದಾಗಿದೆ.

42. ಈ ಅನುದಾನದಲ್ಲಿ ಒಂದು ಲಕ್ಷ ರೂ.ಗಳನ್ನು ಗ್ರಾಮದ ರಸ್ತೆ ಡಾಂಬರೀಕರಣ ಮತ್ತು ಮಹಿಳೆಯರಿಗಾಗಿ ಶೌಚಾಲಯ ನಿರ್ಮಿಸಲು ಬಳಸುವುದು ಕಡ್ಡಾಯವಾಗಿರುತ್ತದೆ.

43. ರಾಜ್ಯದಲ್ಲಿನ ಒಟ್ಟು 5659 ಗ್ರಾಮ ಪಂಚಾಯತಿಗಳಿಗೆ ನಾನು 283 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದು ಇದು ಶೇಕಡ 43 ರಷ್ಟು ಹೆಚ್ಚಳವಾಗಿದೆ. ಇದು ಸ್ಥಳೀಯ ಆಡಳಿತಕ್ಕೆ ನೀಡುತ್ತಿರುವ ನಿಜವಾದ ಪ್ರೋತ್ಸಾಹವಾಗಿದೆ. ಇದಲ್ಲದೆ ಯಾವ ಗ್ರಾಮ

ಪಂಚಾಯತಿಗಳು ಪಂಚಾಯತಿ ತೆರಿಗೆ, ವಿದ್ಯುತ್ ಶುಲ್ಕ ಮತ್ತು ನೀರು ದರ ಇತ್ಯಾದಿ ಬಾಕಿಗಳನ್ನು ಶೇಕಡ 100 ರಷ್ಟು ವಸೂಲಿ ಮಾಡುತ್ತವೆಯೋ ಅಂತಹ ಪಂಚಾಯತಿಗಳಿಗೆ ಪ್ರೋತ್ಸಾಹ ಧನವಾಗಿ 50 ಸಾವಿರ ರೂ.ಗಳನ್ನು ನಾನು ಒದಗಿಸಲಿದ್ದೇನೆ.

44. ಸ್ವಚ್ಛ ಗ್ರಾಮ ಯೋಜನೆಯಡಿ 130 ಕೋಟಿ ರೂ.ಗಳ ವೆಚ್ಚದಲ್ಲಿ ಈಗಾಗಲೇ 1300 ಗ್ರಾಮಗಳಿಗೆ ವಿವಿಧ ಸೌಲಭ್ಯ ಕಲ್ಪಿಸಲಾಗಿದೆ. 2003-04ನೇ ಸಾಲಿನಲ್ಲಿ ಈ ಯೋಜನೆಯ ವ್ಯಾಪ್ತಿಗೆ ನಾನು ಹೆಚ್ಚುವರಿಯಾಗಿ ಒಂದು ಸಾವಿರ ಗ್ರಾಮ ಪಂಚಾಯಿತಿಗಳನ್ನು ತರಲು ಉದ್ದೇಶಿಸಿದ್ದೇನೆ. ಇದಕ್ಕಾಗಿ ತಲಾ 10 ಲಕ್ಷ ರೂ.ಗಳ ಅನುದಾನದಂತೆ ಒಟ್ಟು 100 ಕೋಟಿ ರೂ.ಗಳ ಹಂಚಿಕೆಯನ್ನು ನಿಗದಿಪಡಿಸಿದ್ದೇನೆ.

45. ಗ್ರಾಮ ಪಂಚಾಯತ್ ನಿರ್ವಹಣೆಯನ್ನು ಹೆಚ್ಚು ಚುರುಕುಗೊಳಿಸುವುದು ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಇವು ಪ್ರಮುಖ ಪಾತ್ರ ವಹಿಸುವಂತೆ ಮಾಡುವುದು ನಮ್ಮ ಆಶಯವಾಗಿದೆ. ಇದಕ್ಕಾಗಿ ನಾನು ಪಂಚಾಯತ್ ಸದಸ್ಯರ ದಿನ ಭತ್ಯೆಯನ್ನು 15 ರೂ.ಗಳಿಂದ 100 ರೂ.ಗಳಿಗೆ ಹೆಚ್ಚಿಸಲು ಪ್ರಸ್ತಾವಿಸುತ್ತೇನೆ. ಇದೇ ರೀತಿ ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ವೇತನವನ್ನು ಕ್ರಮವಾಗಿ 300 ರೂ.ಗಳಿಂದ 500 ರೂ.ಗಳಿಗೆ ಮತ್ತು 150 ರೂ.ಗಳಿಂದ 300 ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ

46. ರಾಜ್ಯದಲ್ಲಿನ ಸಾಕ್ಷರತೆಯ ಮಟ್ಟವನ್ನು ಉತ್ತಮಪಡಿಸಲು ನನ್ನ ಸರ್ಕಾರವು ಬದ್ಧವಾಗಿದೆ. ಈ ನಿಟ್ಟಿನಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿರುವ ಐದನೇ ತರಗತಿವರೆಗಿನ ಎಲ್ಲಾ ಮಕ್ಕಳಿಗೆ *"ಅಕ್ಷರ ದಾಸೋಹ"* ಎನ್ನುವ ನೂತನ ಕಾರ್ಯಕ್ರಮವನ್ನು ಚಾಲನೆಗೊಳಿಸಲಿದ್ದೇನೆ. ಈ ಕಾರ್ಯಕ್ರಮದಡಿ ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟವನ್ನು ಒದಗಿಸಲಾಗುವುದು. ಇದಕ್ಕಾಗಿ ನಾನು 200 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೇನೆ.

47. ಸಾರ್ವಜನಿಕ ಹಾಗೂ ಖಾಸಗಿ ಸಹಯೋಗದೊಂದಿಗೆ ಈ ಮಧ್ಯಾಹ್ನದ ಉಪಹಾರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಈ ಯೋಜನೆಯನ್ನು ನಿರ್ವಹಿಸಲು ಮುಂದೆ ಬರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಮತ್ತು ಸ್ತ್ರೀ ಶಕ್ತಿ ತಂಡಗಳಿಗೆ ಇದರ ನಿರ್ವಹಣೆಯನ್ನು ವಹಿಸಲಾಗುವುದು.

48. ಮಧ್ಯಾಹ್ನದ ಉಪಹಾರ ಕಾರ್ಯಕ್ರಮದ ಸಂಪೂರ್ಣ ವೆಚ್ಚವನ್ನು ಆನ್‌ಲೈನ್ ಲಾಟರಿಯಿಂದ ಉತ್ಪತ್ತಿಯಾಗುವ ಹಣದಿಂದ ಭರಿಸಲಾಗುವುದು. ಇನ್ನು ಮುಂದೆ ಲಾಟರಿಯಿಂದ ಬರುವ ಉತ್ಪತ್ತಿಯನ್ನು ಕೆಲವು ಅಭಿವೃದ್ಧಿ ರಾಷ್ಟ್ರಗಳಲ್ಲಿರುವಂತೆ ರಾಜ್ಯದ ಪ್ರಾಥಮಿಕ ಶಿಕ್ಷಣವನ್ನು ಬಲಪಡಿಸಲು ಉಪಯೋಗಿಸುತ್ತೇವೆ. ಎಂದು ನಾನು ಈ ಸದನಕ್ಕೆ ಭರವಸೆ ನೀಡುತ್ತೇನೆ.

49. ಉತ್ತರ ಕರ್ನಾಟಕದ ಅಭಿವೃದ್ಧಿ ಹಾಗೂ ಆಡಳಿತ ವಿಕೇಂದ್ರೀಕರಣದ ನನ್ನ ಸರ್ಕಾರದ ಪ್ರಯತ್ನಗಳನ್ನು ಮುಂದುವರಿಸುವ ನಿಟ್ಟಿನಲ್ಲಿ ನಾನು ಮುಂಬೈ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಶಾಲೆಗಳಿಗಾಗಿ ಪ್ರತ್ಯೇಕವಾಗಿ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿಯೊಂದನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸುತ್ತಿದ್ದೇನೆ.

50. ವಯಸ್ಕರ ಸಾಕ್ಷರತೆಯನ್ನು ಹೆಚ್ಚಿಸಲು ನಾನು ವಯಸ್ಕರ ಶಿಕ್ಷಣ ಸಮಿತಿಯನ್ನು ಪುನರ್ ಸ್ಥಾಪಿಸಲು ಉದ್ದೇಶಿಸಿದ್ದೇನೆ. ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ *"ವಯಸ್ಕರ ಶಿಕ್ಷಣ ಪಡೆ"* ಯನ್ನು ಸ್ಥಾಪಿಸಿ ವಯಸ್ಕರ ಸಾಕ್ಷರತೆಗೆ ಉತ್ತೇಜನ ನೀಡಲಾಗುವುದು. ಈ ಕಾರ್ಯಕ್ರಮಕ್ಕಾಗಿ ನಾನು ಒಂದು ಕೋಟಿ ರೂ.ಗಳನ್ನು ನಿಗದಿಗೊಳಿಸುತ್ತಿದ್ದೇನೆ.

ಆರೋಗ್ಯ

51. ಮಧುಮೇಹ, ತೀವ್ರ ರಕ್ತದೊತ್ತಡ, ಅಸ್ತಮಾ ಇತ್ಯಾದಿ ರೋಗಗಳಿಂದ ಬಳಲುತ್ತಿರುವ ಗ್ರಾಮೀಣ ಜನರಿಗೆ ಸುಧಾರಿತ ಆರೋಗ್ಯ ರಕ್ಷಣೆ ಒದಗಿಸುವ ಸವಾಲನ್ನು ನಾವು ಎದುರಿಸುತ್ತಿದ್ದೇವೆ. ಇದನ್ನು ಗಮನದಲ್ಲಿಟ್ಟುಕೊಂಡು ಅತ್ಯಾಧುನಿಕ ಚಿಕಿತ್ಸಾ ವಿಧಾನವಾದ ಟೆಲಿ ಮೆಡಿಸಿನ್ ವ್ಯವಸ್ಥೆಯನ್ನು 25 ಜಿಲ್ಲಾ ಆಸ್ಪತ್ರೆಗಳಲ್ಲಿ ಜಾರಿಗೊಳಿಸಲಾಗುವುದು.

52. ಮಾರಣಾಂತಿಕ ರೋಗ ಏಡ್ಸ್ ನಮ್ಮನ್ನು ಇನ್ನೂ ಆತಂಕದಲ್ಲೇ ಇಟ್ಟಿದೆ. ಈ ರೋಗ ನಿಯಂತ್ರಣಕ್ಕಾಗಿ ನಾವು ಸಲಹಾ ಕೇಂದ್ರ ಮತ್ತು ತಪಾಸಣಾ ಕೇಂದ್ರ ಹಾಗೂ ತಾಯಿಯಿಂದ ಮಗುವಿಗೆ ರೋಗ ಹರಡದಂತೆ ನಿಯಂತ್ರಿಸುವ ನೂತನ ಕಾರ್ಯಕ್ರಮಗಳನ್ನು ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಆರಂಭಿಸಿದ್ದೇವೆ. ಈ ಕಾರ್ಯಕ್ರಮಗಳನ್ನು ತಾಲ್ಲೂಕು ಮಟ್ಟಕ್ಕೂ ವಿಸ್ತರಿಸಲಾಗುವುದು.

53. ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ ಸಹಕಾರದೊಂದಿಗೆ ಹುಬ್ಬಳ್ಳಿ-ಧಾರವಾಡ, ಶಿವಮೊಗ್ಗ, ಮಡಿಕೇರಿ ಮತ್ತು ಬಿಜಾಪುರಗಳಲ್ಲಿ ಹೃದ್ರೋಗ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಈ ಕೇಂದ್ರಗಳು ಸುಮಾರು 40 ಲಕ್ಷ ರೋಗಿಗಳಿಗೆ ಪ್ರಾಥಮಿಕ ಮತ್ತು ನಂತರದ ತಪಾಸಣೆ ಸೌಕರ್ಯ ಒದಗಿಸುವ ಸಾಮರ್ಥ್ಯ ಹೊಂದಲಿವೆ. ಈ ಉದ್ದೇಶಕ್ಕಾಗಿ ನಾನು ಮೂರು ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.

54. ನೆಫ್ರೋಯೂರೋಲಜಿ ಸಂಸ್ಥೆಗೆ ನಾನು 1 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

55. ಗಿರಿಜನರ ಕಲ್ಯಾಣ ನಮ್ಮ ಸರ್ಕಾರದ ಆದ್ಯತೆಯಾಗಿದೆ. ಆದ್ದರಿಂದ ದೂರದ ಅರೆಕಾಡು ಪ್ರದೇಶಗಳಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನರಿಗಾಗಿ ಆಸ್ಪತ್ರೆಗಳನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ರಾಜ್ಯದ ಬುಡಕಟ್ಟು ಜನಾಂಗದವರ ಸಮಗ್ರ ಆರೋಗ್ಯ ರಕ್ಷಣೆಯನ್ನು ಖಾಸಗಿ - ಸಾರ್ವಜನಿಕ ಸಹಯೋಗದಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಸಮಾಜ ಕಲ್ಯಾಣ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಅಭಿವೃದ್ಧಿ

56. ಬಡತನದ ವಿರುದ್ಧ ನೇರ ಹೋರಾಟ, ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಜನ ಸಮುದಾಯದ ಆರ್ಥಿಕ ಮಟ್ಟವನ್ನು ಸುಧಾರಿಸುವ ನನ್ನ ಸರ್ಕಾರದ ಪ್ರಯತ್ನಗಳು ಮುಂಬರುವ ವರ್ಷಗಳಲ್ಲಿ ಮತ್ತಷ್ಟು ತೀವ್ರಗೊಳ್ಳಲಿದೆ. 2003-04ನೇ ಸಾಲಿನಲ್ಲಿ 5,000 ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹಾಗೂ 5,000 ಹಿಂದುಳಿದ ವರ್ಗದ ನಿರುದ್ಯೋಗಿ ಮಹಿಳೆಯರಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡಲು *"ಕೌಶಲ್ಯ"* ಎನ್ನುವ ಯೋಜನೆಯನ್ನು ಆರಂಭಿಸಲಾಗುತ್ತಿದೆ. ಈ ನೂತನ ಕಾರ್ಯಕ್ರಮಕ್ಕೆ ತಲಾ ಐದು ಕೋಟಿ ರೂ.ಗಳ ಮೊತ್ತವನ್ನು ನಿಗದಿಪಡಿಸುತ್ತಿದ್ದೇನೆ.

57. ಗ್ರಾಮೀಣ ಪ್ರದೇಶಗಳಲ್ಲಿ 30 ಕೋಟಿ ರೂ.ಗಳ ವೆಚ್ಚದಲ್ಲಿ 15 ಸಾವಿರ ಅಂಬೇಡ್ಕರ್ ಮನೆಗಳನ್ನು ಮತ್ತು 60 ಕೋಟಿ ರೂ.ಗಳ ವೆಚ್ಚದಲ್ಲಿ 60,000 ಆಶ್ರಯ ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಪರಿಶಿಷ್ಟ ಪಂಗಡದ ವಸತಿ ರಹಿತರಿಗಾಗಿ 15 ಸಾವಿರ ಮನೆಗಳನ್ನು ನಿರ್ಮಿಸುವ ಉದ್ದೇಶವಿದೆ.

58. ರಾಜ್ಯದ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ತಲಾ 5 ಲಕ್ಷ ರೂ.ಗಳ ವೆಚ್ಚದಲ್ಲಿ ಅಂಬೇಡ್ಕರ್ ಭವನವನ್ನು ನಿರ್ಮಿಸಲು ನಾನು 10 ಕೋಟಿ ರೂ.ಗಳನ್ನು ನಿಗದಿ ಮಾಡಿದ್ದೇನೆ. ಈ ಅಂಬೇಡ್ಕರ್ ಭವನಗಳು ವಿಶೇಷ ವಿನ್ಯಾಸ ಹೊಂದಿರುತ್ತವೆ. ಈ ಭವನಗಳ ನಿರ್ಮಾಣವನ್ನು ಒಂದು ವರ್ಷದಲ್ಲಿ ಪೂರ್ಣಗೊಳಿಸಲಾಗುವುದು.

59. ಉತ್ತರ ಕರ್ನಾಟಕದ ಜನಸಂಖ್ಯಾ ಬೆಳವಣಿಗೆ ಮತ್ತು ಹಿಂದುಳಿದಿರುವಿಕೆಯನ್ನು ಗಮನದಲ್ಲಿಟ್ಟುಕೊಂಡು ವಿಜಾಪುರ, ಬಾಗಲಕೋಟೆ, ಬೀದರ್, ರಾಯಚೂರು, ಗುಲ್ಬರ್ಗಾ, ಕೊಪ್ಪಳ ಮತ್ತು ಬಳ್ಳಾರಿ ಈ ಏಳು ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ 75 ಹೊಸ ವಸತಿ ನಿಲಯಗಳನ್ನು ಆರಂಭಿಸಲು ನಾನು ಉದ್ದೇಶಿಸಿದ್ದೇನೆ. ಈ ವಸತಿ ನಿಲಯಗಳಲ್ಲಿ ಶೇಕಡ 30 ರಷ್ಟನ್ನು ವಿದ್ಯಾರ್ಥಿನಿಯರಿಗಾಗಿ ಮೀಸಲಿಡಲಾಗುವುದು.

60. ಗಂಗಾ ಕಲ್ಯಾಣ ಯೋಜನೆಯಡಿ ಹೆಚ್ಚುವರಿಯಾಗಿ ಐದು ಸಾವಿರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ 2003-04ನೇ ಸಾಲಿನಲ್ಲಿ ನೆರವು ಕಲ್ಪಿಸಲಾಗುವುದು.

61. ದಿವಂಗತ ಶ್ರೀ ದೇವರಾಜ ಅರಸುರವರ ನೆನಪಿಗಾಗಿ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ತಲಾ 10 ಲಕ್ಷ ರೂ.ಗಳ ವೆಚ್ಚದಲ್ಲಿ *"ದೇವರಾಜ ಅರಸು ಭವನ"* ನಿರ್ಮಿಸಲು ಉದ್ದೇಶಿಸಿದ್ದು ಇದಕ್ಕಾಗಿ 2 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

62. ಅಲ್ಪಸಂಖ್ಯಾತ ಸಮುದಾಯದ ನಿರುದ್ಯೋಗಿ ಯುವಜನರಿಗೆ ಆದಾಯ ತರುವ ಸಣ್ಣಪುಟ್ಟ ಉದ್ಯಮಗಳಲ್ಲಿ ತೊಡಗುವಂತೆ ಪ್ರೋತ್ಸಾಹಿಸಲು ನಾನು ಬಡ್ಡಿ ಸಹಾಯಧನದ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಿದ್ದೇನೆ.

63. ಲಾಭದಾಯಕ ಉದ್ಯಮಗಳಾದ ಆಟೋಮೊಬೈಲ್ ಗ್ಯಾರೇಜ್, ವರ್ಕ್‌ಷಾಪ್, ಸಣ್ಣ ಪುಟ್ಟ ಅಂಗಡಿಗಳನ್ನು ಪ್ರಾರಂಭಿಸಲು ಕೆಎಸ್‌ಎಫ್‌ಸಿ ಮೂಲಕ ಸಾಲ ಸೌಲಭ್ಯ ಕಲ್ಪಿಸಲಾಗುವುದು. ಮೂರು ಲಕ್ಷ ರೂ.ಗಳವರೆಗಿನ ಸಾಲಕ್ಕೆ ಶೇಕಡ 3 ರಷ್ಟು ಬಡ್ಡಿ ಸಹಾಯಧನವನ್ನು ನಾನು ಒದಗಿಸಲು ಉದ್ದೇಶಿಸಿದ್ದೇನೆ.

64. *"ಗ್ರಾಮೀಣ ಪ್ರದೇಶದಲ್ಲಿನ ಹಳೆಯ ದೇವಸ್ಥಾನ, ಮಸೀದಿ, ಚರ್ಚ್, ಗುರುದ್ವಾರ ಮತ್ತು ಬಸದಿಗಳ ದುರಸ್ತಿಗಾಗಿ ಮುಖ್ಯಮಂತ್ರಿಗಳ ನಿಧಿ"* ಯೊಂದನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಇದಕ್ಕೆ ಆರಂಭಿಕ ಕೊಡುಗೆಯಾಗಿ ಒಂದು ಕೋಟಿ ರೂ.ಗಳನ್ನು ನಾನು ನೀಡುತ್ತಿದ್ದೇನೆ. ಈ ನಿಧಿಯಿಂದ ಗರಿಷ್ಠ 10 ಸಾವಿರ ರೂ.ಗಳ ನೆರವನ್ನು ಒಂದು ಸಂಸ್ಥೆಗೆ ಒಮ್ಮೆ ಮಾತ್ರ ನೀಡಲಾಗುವುದು. ಸಾರ್ವಜನಿಕ ಕೊಡುಗೆಗಳ ಮೂಲಕ ಈ ನಿಧಿಯನ್ನು ಮತ್ತಷ್ಟು ಬಲಪಡಿಸಲಾಗುವುದು. ಈಗಿರುವ ಆರಾಧನಾ ಯೋಜನೆಯು ಸಹ ಮುಂದುವರೆಯುತ್ತದೆ.

65. ಪ್ರತಿ ತಾಲ್ಲೂಕುಗಳಲ್ಲಿ ತಲಾ 5 ಲಕ್ಷ ರೂ.ಗಳ ವೆಚ್ಚದಲ್ಲಿ ಒಂದು ಷಾದಿ ಮಹಲ್ ಕಟ್ಟಲು ಅನುಕೂಲವಾಗುವಂತೆ 5 ಕೋಟಿ ರೂ.ಗಳನ್ನು ನಾನು ಒದಗಿಸುತ್ತಿದ್ದೇನೆ.

66. ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಅನುವಾಗುವಂತಹ ಅಧ್ಯಯನ ನಡೆಸುವ ಸಂಶೋಧಕರಿಗೆ ಪ್ರೋತ್ಸಾಹಿಸಲು ನಾನು ರಾಜ್ಯದ ಆರು ವಿಶ್ವವಿದ್ಯಾಲಯಗಳಲ್ಲಿ *"ದೇವರಾಜ ಅರಸು ಸಂಶೋಧನ ಫೆಲೋಶಿಪ್"* ಸ್ಥಾಪಿಸಲು ಉದ್ದೇಶಿಸಿದ್ದೇನೆ. ಇದಕ್ಕಾಗಿ ತಲಾ 15 ಲಕ್ಷ ರೂ.ಗಳ ಅನುದಾನವನ್ನು ನಿಗದಿಪಡಿಸಿದ್ದೇನೆ.

67. ಅಪ್ರತಿಮ ದೇಶ ಭಕ್ತ ಟಿಪ್ಪು ಸುಲ್ತಾನ್‌ರ ಸಂಸ್ಮರಣೆಗಾಗಿ 3.5 ಕೋಟಿ ರೂ.ಗಳ ವೆಚ್ಚದಲ್ಲಿ ಶ್ರೀರಂಗಪಟ್ಟಣದಲ್ಲಿ ಒಂದು ಮ್ಯೂಸಿಯಂ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಗುವುದು. ಈ ಉದ್ದೇಶಕ್ಕಾಗಿ 2 ಕೋಟಿ ರೂ.ಗಳನ್ನು ನಾನು ಮೀಸಲಿಡುತ್ತಿದ್ದೇನೆ.

68. ರಾಜ್ಯದ 400 ಉರ್ದು ಶಾಲೆಗಳಲ್ಲಿ ಹೆಚ್ಚುವರಿಯಾಗಿ ಒಂದು ಸಾವಿರ ಶಾಲಾ ಕೊಠಡಿಗಳನ್ನು ನಿರ್ಮಿಸುವ ಕಾರ್ಯಕ್ರಮಕ್ಕಾಗಿ ನಾನು 2 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ. ಈ ಕಾರ್ಯಕ್ರಮಕ್ಕೆ ಸ್ಥಳೀಯ ಶಾಲಾ ಆಡಳಿತ ಮಂಡಳಿಯ ಮೂಲಕ ಶೇಕಡ 50 ರಷ್ಟು ಕೊಡುಗೆ ಬರಲಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

69. ಮಹಿಳೆಯರ ಉನ್ನತ ಶಿಕ್ಷಣಕ್ಕೆ ಉತ್ತೇಜನ ನೀಡುವುದು ನಮ್ಮ ಆಶಯವಾಗಿದೆ. ಮಹಿಳೆಯರ ಸಶಕ್ತೀಕರಣಕ್ಕೆ ಮತ್ತು ಅವರ ಆರ್ಥಿಕ ಸ್ವಾವಲಂಬನೆಗೆ ಅನುಕೂಲವಾಗುವಂತೆ 2003-04ನೇ ಸಾಲಿನಲ್ಲಿ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ನಾನು ನಿರ್ಧರಿಸಿದ್ದೇನೆ. ಇದಕ್ಕಾಗಿ ನಾನು 5 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.

70. ಸ್ತ್ರೀ ಶಕ್ತಿ ಯೋಜನೆಯಡಿ ಈವರೆಗೆ 74,320 ಸ್ವಸಹಾಯ ಗುಂಪುಗಳು ರಚನೆಯಾಗಿದ್ದು ಸುಮಾರು 11 ಲಕ್ಷ ಮಹಿಳೆಯರು ಇದರ ಉಪಯೋಗ ಪಡೆದಿದ್ದಾರೆ. ಈ ಆಂದೋಲನಕ್ಕೆ ಮತ್ತಷ್ಟು ಉತ್ತೇಜನ ನೀಡಲು 2003-04ನೇ ಸಾಲಿನಲ್ಲಿ ಸ್ವಸಹಾಯ ಗುಂಪುಗಳ ಸಂಖ್ಯೆಯನ್ನು ಒಂದು ಲಕ್ಷಕ್ಕೆ ಏರಿಸಲು ನಾನು ಉದ್ದೇಶಿಸಿದ್ದೇನೆ. ಅಂತೆಯೇ ಈ ಯೋಜನೆಯ ಆವರ್ತ ನಿಧಿಗೆ ರಾಜ್ಯ ಸರ್ಕಾರದ ಕೊಡುಗೆಯನ್ನು 12 ಕೋಟಿ ರೂ.ಗಳಿಂದ 50 ಕೋಟಿ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ. ಇದು ಶೇಕಡ 300 ರಷ್ಟು ಏರಿಕೆಯಾಗಿದ್ದು ಕನಿಷ್ಟ 15 ಲಕ್ಷ ಮಹಿಳೆಯರಿಗೆ ಇದರಿಂದ ಅನುಕೂಲವಾಗಲಿದೆ.

71. ಇದಲ್ಲದೆ ಉಳಿತಾಯದಲ್ಲಿ ಅಸಾಧಾರಣ ಸಾಧನೆ ತೋರುವ ಸ್ತ್ರೀ ಶಕ್ತಿ ತಂಡಗಳಿಗೆ ನಾನು ಪ್ರತ್ಯೇಕವಾಗಿ ಉತ್ತೇಜನ ನೀಡಲು ಉದ್ದೇಶಿಸಿದ್ದೇನೆ. ಇದರಂತೆ 75 ಸಾವಿರ ರೂಗಳಿಗೂ ಹೆಚ್ಚು ಹಣ ಕ್ರೋಢೀಕರಿಸುವ ತಂಡಗಳಿಗೆ 15 ಸಾವಿರ ರೂ.ಗಳನ್ನು ಮತ್ತು 1 ಲಕ್ಷ ರೂ.ಗಳಿಗೂ ಹೆಚ್ಚು ಹಣ ಕ್ರೋಢೀಕರಿಸುವ ತಂಡಗಳಿಗೆ 20 ಸಾವಿರ ರೂ.ಗಳ ಹೆಚ್ಚುವರಿ ಉತ್ತೇಜನ ನೀಡಲಾಗುವುದು.

72. ಇನ್ನು ಮುಂದೆ ರಾಜ್ಯದಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಸ್ತ್ರೀ ಶಕ್ತಿ ತಂಡಗಳಿಗೆ ಮಾತ್ರ ನೀಡಲಾಗುವುದು.

73. ಸ್ತ್ರೀ ಶಕ್ತಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಪ್ರಮುಖ ಪಾತ್ರವಹಿಸಿದ್ದಾರೆ. ಇದರ ಮೆಚ್ಚುಗೆಯ ಕುರುಹಾಗಿ ಸರ್ಕಾರವು ಅಂಗನವಾಡಿ

ಕಾರ್ಯಕರ್ತೆಯರ ಗೌರವಧನವನ್ನು ಮಾಸಿಕ 200 ರೂಪಾಯಿಗಳಷ್ಟು ಮತ್ತು ಅಂಗನವಾಡಿ ಸಹಾಯಕಿಯರಿಗೆ ಮಾಸಿಕ 100 ರೂ.ಗಳಷ್ಟು ಹೆಚ್ಚಿಸಲು ಉದ್ದೇಶಿಸಿದೆ. ಈ ಉದ್ದೇಶಕ್ಕಾಗಿ ನಾನು 14 ಕೋಟಿ ರೂ.ಗಳನ್ನು ಒದಗಿಸಿದ್ದೇನೆ.

74. ಅಂಗವಿಕಲರ ಕಲ್ಯಾಣದಲ್ಲಿ ಸರ್ಕಾರಕ್ಕಿರುವ ಬದ್ಧತೆಯನ್ನು ಬಿಂಬಿಸಲು 2003-04ನೇ ಸಾಲಿನಿಂದ ಶೇಕಡ 5 ರಷ್ಟು ಆಶ್ರಯ ಮನೆಗಳನ್ನು ಅಂಗವಿಕಲರಿಗಾಗಿ ಮೀಸಲಿಡಲಾಗುವುದು.

ಯುವಜನ ಸೇವೆ ಮತ್ತು ಕ್ರೀಡೆ

75. 'ಸ್ತ್ರೀ ಶಕ್ತಿ' ಯೋಜನೆಯ ಅಭೂತಪೂರ್ವ ಯಶಸ್ಸಿನ ಹಿನ್ನೆಲೆಯಲ್ಲಿ ನನ್ನ ಸರ್ಕಾರವು ರಾಜ್ಯದಲ್ಲಿ ಯುವ ಸಮುದಾಯವನ್ನು ಒಗ್ಗೂಡಿಸಲು ಮುಂದಾಗಿದೆ. ಸಮಾಜ ನಿರ್ಮಾಣ ಕಾರ್ಯದಲ್ಲಿ ಯುವಜನರ ಸೃಜನಾತ್ಮಕ ಶಕ್ತಿಯನ್ನು ಸದುಪಯೋಗಪಡಿಸಿಕೊಳ್ಳಲು *"ರಾಜೀವ್ ಯುವ ಶಕ್ತಿ"* ಎನ್ನುವ ನೂತನ ಕಾರ್ಯಕ್ರಮವನ್ನು ನಾನು ಜಾರಿಗೊಳಿಸುತ್ತಿದ್ದೇನೆ.

76. ಈ ಕಾರ್ಯಕ್ರಮದನ್ವಯ ರಾಜ್ಯದಲ್ಲಿನ ಎಲ್ಲಾ 5659 ಗ್ರಾಮ ಪಂಚಾಯತಿಗಳಲ್ಲಿ ಯುವ ಶಕ್ತಿ ಸಂಘಗಳನ್ನು ರಚಿಸಲಾಗುವುದು. ಈ ಯುವ ಶಕ್ತಿ ಸಂಘಗಳು ಕ್ರೀಡೆ, ಸಾಂಸ್ಕೃತಿಕ ಮತ್ತು ಸಮುದಾಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಅನುವಾಗುವಂತೆ ಪ್ರತಿ ಸಂಘಕ್ಕೆ ಹತ್ತು ಸಾವಿರ ರೂ.ಗಳನ್ನು ನೀಡಲಾಗುವುದು. ಈ ಉದ್ದೇಶಕ್ಕಾಗಿ ನಾನು 6 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೇನೆ.

77. ಜಕ್ಕೂರಿನಲ್ಲಿರುವ ಪ್ರತಿಷ್ಠಿತ ಸರ್ಕಾರಿ ವಿಮಾನ ಹಾರಾಟ ತರಬೇತಿ ಶಾಲೆಯು ಹಲವಾರು ಯುವಜನರಿಗೆ ತರಬೇತಿ ನೀಡಿ ಯಶಸ್ವಿ ಪೈಲಟ್‌ಗಳನ್ನಾಗಿಸಿದೆ. ಈ ವಿಮಾನ ಹಾರಾಟ ತರಬೇತಿ ಶಾಲೆಯನ್ನು ಮುಂಬರುವ ವರ್ಷದಲ್ಲಿ ಆಧುನೀಕರಣಗೊಳಿಸಲು ಒಂದು ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೇನೆ.

ವಸತಿ

78. ರಾಜ್ಯದಲ್ಲಿನ ವಸತಿ ರಹಿತ ಬಡ ಜನರಿಗೆ 11 ಲಕ್ಷ ಮನೆಗಳನ್ನು ಒದಗಿಸಲು ನನ್ನ ಸರ್ಕಾರವು ಬದ್ಧವಾಗಿದೆ. 2003ರ ಮಾರ್ಚ್ ಅಂತ್ಯದ ವೇಳೆಗೆ ನಾವು 6 ಲಕ್ಷ ಮನೆಗಳ ನಿರ್ಮಾಣವನ್ನು ಸಂಪೂರ್ಣಗೊಳಿಸುತ್ತೇವೆ. ಮುಂದಿನ ಎರಡು ವರ್ಷಗಳಲ್ಲಿ ಆರ್ಥಿಕ ದುರ್ಬಲ ವರ್ಗದವರಿಗಾಗಿ ನಿರ್ಮಿಸಬೇಕಾಗಿದ್ದ ಮನೆಗಳ ಸಂಖ್ಯೆಯನ್ನು ವಾರ್ಷಿಕ 2 ಲಕ್ಷದಿಂದ 2.5 ಲಕ್ಷಗಳಿಗೆ ಹೆಚ್ಚಿಸಲಾಗುವುದು. ಇದರಿಂದ ಮುಂದಿನ ಎರಡು ವರ್ಷಗಳಲ್ಲಿ 5 ಲಕ್ಷ ಮನೆಗಳು ನಿರ್ಮಾಣವಾಗಲಿವೆ. ವಿವಿಧ ಯೋಜನೆಗಳಡಿ ನಿರ್ಮಿಸುವ ಮನೆಗಳಲ್ಲಿ ಶೇಕಡ 50 ರಷ್ಟನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಮೀಸಲಿಡಲಾಗುವುದು. ಈ ಸಾಧನೆಯ ಹಿನ್ನೆಲೆಯಲ್ಲಿ 2004-05 ರ ವೇಳೆಗೆ ದುರ್ಬಲ ವರ್ಗದವರ ವಸತಿ ಸಮಸ್ಯೆಯನ್ನು ನಿವಾರಿಸುವ ನಂಬಿಕೆ ನನಗಿದೆ.

ಆಹಾರ ಮತ್ತು ನಾಗರೀಕ ಸರಬರಾಜು

79. ಸರ್ಕಾರವು 2003 ರ ಮೇ 1 ರಿಂದ ರಾಜ್ಯದ 27 ಜಿಲ್ಲೆಗಳಲ್ಲಿ ಹಳದಿ ರೇಷನ್ ಕಾರ್ಡ್ ಯೋಜನೆಯನ್ನು ಜಾರಿಗೊಳಿಸಲಿದೆ. ಕಾರ್ಡ್‌ಗಾಗಿ ಗುರುತಿಸಲಾದ ಕುಟುಂಬದ ಮಾಹಿತಿಯನ್ನು ಗಣಕೀಕರಿಸಿ ಪಾರದರ್ಶಕತೆಯ ಸಲುವಾಗಿ ವ್ಯಾಪಕವಾಗಿ ಪ್ರಚಾರಗೊಳಿಸಲಾಗುವುದು. ಈ ಉದ್ದೇಶಕ್ಕಾಗಿ ನಾನು 5 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

ನೀರಾವರಿ ಮತ್ತು ಜಲಸಂಪನ್ಮೂಲ

80. ಕೃಷ್ಣಾ ಮತ್ತು ಕಾವೇರಿ ಕಣಿವೆಗಳ ನೀರಾವರಿ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ನನ್ನ ಸರ್ಕಾರ ಬದ್ಧವಾಗಿದೆ. ಕಳೆದ ಮೂರು ವರ್ಷಗಳಲ್ಲಿ ನನ್ನ ಸರ್ಕಾರವು ಕೃಷ್ಣಾ ಕಣಿವೆ ಯೋಜನೆಗಳಲ್ಲಿ ಸುಮಾರು 6600 ಕೋಟಿ ರೂ.ಗಳನ್ನು ತೊಡಗಿಸಿದೆ.

81. ಈಗ ಕಾವೇರಿ ಕಣಿವೆಯಲ್ಲಿನ ನೀರಾವರಿ ಆಸ್ತಿಗಳ ನವೀಕರಣ ಮತ್ತು ದುರಸ್ತಿಗೆ ಅನುಕೂಲವಾಗುವಂತೆ ನಾನು ವಿಶೇಷ ಉದ್ದೇಶ ವಾಹಿನಿಯಾಗಿ *"ಕಾವೇರಿ ನೀರಾವರಿ ನಿಗಮ"*ವನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಈ ನಿಗಮವು ಮಾರುಕಟ್ಟೆಯಲ್ಲಿ ಸಂಪನ್ಮೂಲ ಎತ್ತುವಳಿ ಮಾಡುವ ಮೂಲಕ ಕಾವೇರಿ ಕಣಿವೆಯ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಿದೆ.

82. ಕಾವೇರಿ ನ್ಯಾಯಮಂಡಳಿಯ ಮಧ್ಯಾವಧಿ ತೀರ್ಪಿನ ಚೌಕಟ್ಟಿನಲ್ಲಿರುವಂತೆ 11.20 ಲಕ್ಷ ಎಕರೆ ವ್ಯಾಪ್ತಿಯನ್ನು ಮೀರದಂತೆ ಕ್ರಮ ಕೈಗೊಳ್ಳಲಾಗುವುದು.

83. ಮುಂದಿನ ಮೂರು ವರ್ಷಗಳಲ್ಲಿ 1000 ಕೋಟಿ ರೂ.ಗಳ ಎತ್ತುವಳಿಯ ಮೂಲಕ ಕಾವೇರಿ ಕಣಿವೆಯ ಕಾಲುವೆಗಳ ನಿರ್ವಹಣೆ ಮತ್ತು ನೀರಿನ ಗರಿಷ್ಠ ಮಟ್ಟದ ಬಳಕೆ ಸಾಧಿಸುವುದು ಇದರ ಮೂಲ ಉದ್ದೇಶವಾಗಿದೆ. ಈ ರೀತಿಯ ಮುಂಗಡೇತರ ಎತ್ತುವಳಿಗಳು ರಾಜ್ಯದ ಮಧ್ಯಮಾವಧಿ ಆರ್ಥಿಕ ಚೌಕಟ್ಟಿನಲ್ಲಿ ನಿಗದಿಪಡಿಸಿರುವ ಎತ್ತುವಳಿಗಳ ಮಟ್ಟದ ಮಿತಿಯಲ್ಲಿಯೇ ಇರುತ್ತವೆ.

84. 2003-04 ನೇ ಸಾಲಿನಲ್ಲಿ ರಾಜ್ಯದ ಒಣ ಮತ್ತು ಅರೆ ಒಣ ಭೂಮಿ ಜಿಲ್ಲೆಗಳಲ್ಲಿರುವ ನದಿ ಪಾತ್ರದಲ್ಲಿ ಬ್ಯಾರೇಜುಗಳನ್ನು ನಿರ್ಮಿಸುವ ಮೂಲಕ ಬೇಸಿಗೆ ತಿಂಗಳುಗಳಲ್ಲಿ ನದಿಯಲ್ಲಿ ನೀರು ಸಂಗ್ರಹಿಸಿ ಅಂತರ್ಜಲ ವೃದ್ಧಿ ಮಾಡಲಾಗುವುದು. ಈ ಉದ್ದೇಶಕ್ಕಾಗಿ ನಾನು ಮೂರು ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ಒದಗಿಸಲಿದ್ದೇನೆ.

85. ನೀರಾವರಿ ಯೋಜನೆಗಳ ದೀರ್ಘಾವಧಿ ಯಶಸ್ಸು; ನೀರಾವರಿ ಆಸ್ತಿಗಳ ನಿರ್ವಹಣೆಯಲ್ಲಿ ನೀರು ಬಳಕೆದಾರರ ಪರಿಣಾಮಕಾರಿ ಪಾಲ್ಗೊಳ್ಳುವಿಕೆಯನ್ನು ಅವಲಂಬಿಸಿದೆ. ಈ ಪ್ರಕ್ರಿಯೆಯಲ್ಲಿ ಬಳಕೆದಾರರು ಪಾವತಿಸುವ ಶುಲ್ಕ ಪ್ರಮುಖವಾಗಿದೆ.

86. ನೀರಿನ ಪರಿಣಾಮಕಾರಿ ಮತ್ತು ದಕ್ಷ ಬಳಕೆಗೆ ಅನುಕೂಲವಾಗುವಂತೆ ನಿರ್ವಹಣೆಯನ್ನು ರೈತರಿಗೆ ವರ್ಗಾಯಿಸಲು ಅಗತ್ಯವಾದ ಕಾಯ್ದೆಯನ್ನು ರೂಪಿಸಲಾಗಿದೆ.ನೀರು ದರಗಳನ್ನು ಪರಿಣಾಮಕಾರಿಯಾಗಿ ವಸೂಲಾತಿ ಮಾಡುವ ನೀರು ಬಳಕೆದಾರ ಸಂಘಗಳಿಗೆ ಸೂಕ್ತವಾಗಿ ಪ್ರೋತ್ಸಾಹಿಸಲಾಗುವುದು.

87. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ *"ರೈತ ಕಾಯಕ ಕೆರೆ"* ಕಾರ್ಯಕ್ರಮವು ಬಹಳ ಉಪಕಾರಿ ಎನ್ನುವುದು ಸಾಬೀತಾಗಿದೆ. ಆದ್ದರಿಂದ 2003-04 ನೇ ಸಾಲಿನಲ್ಲಿ ಈ ಕಾರ್ಯಕ್ರಮವನ್ನು ರಾಜ್ಯದಲ್ಲಿನ ಪ್ರತಿ ಹೋಬಳಿಯ ಎರಡು ಕೆರೆಗಳಲ್ಲಿ ಕೈಗೆತ್ತಿಕೊಳ್ಳಲಿದ್ದೇವೆ. ಈ ಕಾರ್ಯಕ್ರಮಕ್ಕೆ ನಾನು ಹೆಚ್ಚುವರಿಯಾಗಿ 5 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

88. ತುಂಗಾ ಅಣೆಕಟ್ಟು ಮತ್ತು ಭದ್ರಾ ಅಣೆಕಟ್ಟುಗಳ ವ್ಯಾಪ್ತಿಯಲ್ಲಿನ ಕಾಲುವೆಗಳ ಆಧುನೀಕರಣವನ್ನು 50 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು. ಈ ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮದ ಮೂಲಕ ನಿರ್ವಹಿಸಲಾಗುವುದು.

89. ಇದೇ ಮಾದರಿಯಲ್ಲಿ ಮುಲ್ಲಾಮರಿ ಮತ್ತು ಬೆಣ್ಣೆತೊರೆ ಯೋಜನೆಗಳನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ವರ್ಗಾಯಿಸಿ 2003-04ನೇ ಸಾಲಿನಲ್ಲಿ ಸಂಪೂರ್ಣಗೊಳಿಸಲಾಗುವುದು.

90. ದಾವಣಗೆರೆ ಜಿಲ್ಲೆಯ ಉಗರಾಣಿ ಏತ ನೀರಾವರಿ ಯೋಜನೆಗೆ ನಾನು 5 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

ರಸ್ತೆಗಳು

91. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ ರಸ್ತೆ ಸಂಪರ್ಕದ ಸುಧಾರಣೆಗೆ ಗಣನೀಯ ಪ್ರಮಾಣದಲ್ಲಿ ಸಾರ್ವಜನಿಕ ಹಣವನ್ನು ಹೂಡಿಕೆ ಮಾಡಲಾಗಿದೆ. ಈ ವಲಯಕ್ಕೆ ಮುಂಗಡ ಪತ್ರದಲ್ಲಿ ನಿಗದಿಗೊಳಿಸಿದ್ದ ಅನುದಾನದ ಜೊತೆಗೆ ಆರ್‌ಐಡಿಎಫ್ ಯೋಜನೆಯ ಮೂಲಕವೂ ಸಹ ಹಣವನ್ನು ತೊಡಗಿಸಲಾಗಿದೆ.

92. ಈಗ ನಾವು ಈ ಆಸ್ತಿಗಳ ಸೂಕ್ತ ನಿರ್ವಹಣೆ ಕಡೆ ಗಮನ ಕೇಂದ್ರೀಕರಿಸಬೇಕಾಗಿದೆ. ಆದ್ದರಿಂದ ನಾನು 100 ಕೋಟಿ ರೂ.ಗಳ *"ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ"* ಯನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಇದಕ್ಕಾಗಿ ಹೆಚ್ಚುವರಿ ಸಂಪನ್ಮೂಲವನ್ನು ಕ್ರೋಢೀಕರಿಸಲು ಇಂಧನ ಮತ್ತು ಮೋಟಾರು ವಾಹನಗಳ ಮೇಲೆ ಕರ ವಿಧಿಸಬೇಕಾಗಿದ್ದು, ಈ ಸಂಬಂಧದ ವಿಧಿ ವಿಧಾನಗಳನ್ನು ರೂಪಿಸಲಾಗುತ್ತಿದೆ.

93. ಲೋಕೋಪಯೋಗಿ ಇಲಾಖೆಯು ನೀರಾವರಿ ಇಲಾಖೆಯ ಜೊತೆಗೂಡಿ ಸಮಗ್ರ ಗಣಕೀಕರಣ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಕಾಮಗಾರಿಗಳ ನಿಜವಾದ ಪ್ರಗತಿ ಮತ್ತು ಎಲ್‌ಓಸಿ ಮೂಲಕ ಹಣ ಬಿಡುಗಡೆ ಹಾಗೂ ಆಯವ್ಯಯ ಲೆಕ್ಕಾಚಾರಗಳ ಸಂಪೂರ್ಣ ಮಾಹಿತಿ ಇದರಿಂದ ದೊರೆಯಲಿದೆ.

94. ರಾಜ್ಯದಲ್ಲಿ ಆರ್‌ಐಡಿಎಫ್ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದು ಗ್ರಾಮೀಣ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿರುವುದು ಸರ್ವ ವಿಧಿತವಾಗಿದೆ. ಆದ್ದರಿಂದ ಆರ್‌ಐಡಿಎಫ್ ಕಾರ್ಯಕ್ರಮದ ಅನುದಾನವನ್ನು 280 ಕೋಟಿ ರೂ.ಗಳಿಂದ 2003-04ನೇ ಸಾಲಿಗೆ 325 ಕೋಟಿ ರೂ.ಗಳಿಗೆ ಹೆಚ್ಚಿಸುತ್ತಿದ್ದೇನೆ.

95. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ನಾಲ್ಕು ಮಾರ್ಗಗಳ ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿ (ನಂ. 17) ಕಾಮಗಾರಿಯನ್ನು ಆರಂಭಿಕ ಹಂತವಾಗಿ ಬೆಂಗಳೂರಿನಿಂದ ಮದ್ದೂರಿನವರೆಗೆ ಕೈಗೆತ್ತಿಕೊಳ್ಳಲಾಗುವುದು.

96. ಈಗಾಗಲೇ ಕೈಗೊಂಡಿರುವ ರಾಜ್ಯ ಹೆದ್ದಾರಿಗಳ ನಿರ್ವಹಣೆಯ ಮಾದರಿಯಲ್ಲಿ 28,247 ಕಿ.ಮೀ. ಉದ್ದದ ಪ್ರಮುಖ ಜಿಲ್ಲಾ ರಸ್ತೆಗಳನ್ನು ನಿರ್ವಹಣೆಗಾಗಿ ಖಾಸಗೀಕರಿಸಲಾಗುವುದು.

97. ಕೆಲವು ಪ್ರಮುಖ ಜಿಲ್ಲಾ ರಸ್ತೆಗಳನ್ನು ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಮತ್ತು ಸುಮಾರು 10 ಸಾವಿರ ಕಿ.ಮೀ. ಗ್ರಾಮೀಣ ರಸ್ತೆಯನ್ನು ಪ್ರಮುಖ ಜಿಲ್ಲಾ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ.

ಇಂಧನ

98. ರಾಜ್ಯದ ಆರ್ಥಿಕ ಸ್ಥಿರತೆಗೆ ವಿದ್ಯುತ್‌ವಲಯದ ಸುಧಾರಣೆ ಮತ್ತು ದಕ್ಷತೆ ಅನಿವಾರ್ಯವಾಗಿದೆ. ಅಂತೆಯೆ ರಾಜ್ಯದ ಮಧ್ಯಮಾವಧಿ ಆರ್ಥಿಕ ಯೋಜನೆಯ ಚೌಕಟ್ಟಿನ ಯಶಸ್ಸು ಕೂಡ ಸಂಪೂರ್ಣವಾಗಿ ವಿದ್ಯುತ್ ವಲಯದ ಕಾರ್ಯಾಚರಣೆಯನ್ನೇ ಆಧರಿಸಿದೆ.

99. ರಾಜ್ಯ ಸರ್ಕಾರವು ವಿದ್ಯುತ್ ವಲಯಕ್ಕೆ 2340 ಕೋಟಿ ರೂ.ಗಳ ಸಹಾಯಧನದ ಬೆಂಬಲವನ್ನು ನೀಡಿದೆ. ಆದರೂ ಸಹ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಕೆಯಲ್ಲಿ ವಿದ್ಯುತ್ ವಲಯವು ಗ್ರಾಹಕರ ಅತೃಪ್ತಿಯನ್ನು ಎದುರಿಸುತ್ತಿದೆ.

100. ಈಗ ವಿದ್ಯುತ್‌ವಲಯದ ಕೊರತೆಯು ಹೆಚ್ಚು ಕಡಿಮೆ ರಾಜ್ಯದ ಒಟ್ಟಾರೆ ರಾಜಸ್ವ ಕೊರತೆಗೆ ಸಮನಾಗಿದೆ. ನೇರವಾಗಿ ಹೇಳುವುದಾದರೆ ವಿದ್ಯುತ್‌ವಲಯದಲ್ಲಿ ಆರ್ಥಿಕ ಶಿಸ್ತನ್ನು ಸಾಧಿಸದಿದ್ದರೆ ಮಧ್ಯಮಾವಧಿಯ ಆರ್ಥಿಕ ಸ್ಥಿರತೆ ಸಾಧಿಸುವುದು ಕಷ್ಟದ ಮಾತು.

101. ಆದ್ದರಿಂದ ವಿದ್ಯುತ್ ವಲಯದಲ್ಲಿ ದಕ್ಷತೆಯನ್ನು ಮೂಡಿಸಲು ಮತ್ತು ಕಟ್ಟುನಿಟ್ಟಾದ ಕ್ರಮಗಳನ್ನು ಅಳವಡಿಸುವುದು ಅತ್ಯಗತ್ಯವಾಗಿದೆ. ಇದಕ್ಕಾಗಿ ನಾನು ಈ ಸದನದ ಮತ್ತು ವಿದ್ಯುತ್‌ವಲಯದ ಎಲ್ಲಾ ಭಾಗೀದಾರರ ಬೆಂಬಲವನ್ನು ಕೋರುತ್ತೇನೆ. ಈ ಕ್ರಮಗಳೆಂದರೆ;

- ರಾಜಸ್ವ ಸಂಗ್ರಹಣೆಯನ್ನು ಹೆಚ್ಚಿಸಲು ಕಟ್ಟುನಿಟ್ಟಿನ ದಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ನಿಗದಿಪಡಿಸುವ ಮತ್ತು ಸರ್ಕಾರವು ಸಮ್ಮತಿಸಿರುವ ದರಗಳನ್ನು ಪಾವತಿಸಲು ಎಲ್ಲಾ ಬಳಕೆದಾರರನ್ನು ಬದ್ಧರನ್ನಾಗಿಸಬೇಕು.
- ಇನ್ನು ಮುಂದೆ ವಿದ್ಯುತ್ ವಲಯಕ್ಕೆ ನೀಡುವ ಆಯವ್ಯಯ ಬೆಂಬಲವನ್ನು ವಿದ್ಯುತ್ ವಲಯದ ವಾಸ್ತವ ಸಾಧನೆಯನ್ನು ಆಧರಿಸಿ ನಿಗದಿಪಡಿಸಬೇಕು. ಪ್ರಸ್ತುತ ವಿದ್ಯುತ್ ವಲಯದ ತಾಂತ್ರಿಕ ಮತ್ತು ವಾಣಿಜ್ಯ ನಷ್ಟವನ್ನು ಶೇಕಡ 32 ರಿಂದ ಮುಂದಿನ ಆರ್ಥಿಕ ವರ್ಷದಲ್ಲಿ ಶೇಕಡ 30 ಕ್ಕೆ ಇಳಿಸಬೇಕೆನ್ನುವ ಖಚಿತ ಗುರಿ ನಿಗದಿಪಡಿಸಬೇಕು.
- ಎಲ್ಲಾ ಬಳಕೆಗಳಿಗೂ ಕಡ್ಡಾಯವಾಗಿ ಮೀಟರ್ ಅಳವಡಿಸಬೇಕು. ಎಲ್ಲಾ ವಿದ್ಯುತ್ ಕಂಪನಿಗಳು ನಿಗದಿತ ಮೀಟರ್ ಅಳವಡಿಕೆ ಕಾರ್ಯಕ್ರಮವನ್ನು ಮುಂದಿನ ವರ್ಷ ಸಂಪೂರ್ಣಗೊಳಿಸಬೇಕು.
- ವಿದ್ಯುತ್ ವಲಯದ ಶಕ್ತಿ ಸಾಮರ್ಥ್ಯಗಳನ್ನು ಆಧರಿಸಿ ರಿಯಾಯಿತಿ ದರದ ವಿದ್ಯುತ್ ಪೂರೈಕೆಯನ್ನು ನಿಗದಿಪಡಿಸಬೇಕು. ಕಾಲಕಾಲಕ್ಕೆ ನಿಗದಿಪಡಿಸುವ ದಿನನಿತ್ಯದ ವಿದ್ಯುತ್ ಪೂರೈಕೆಯ ಮಟ್ಟವನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು.

102. ಮುಂದಿನ ಆರ್ಥಿಕ ವರ್ಷದಿಂದ ಸರ್ಕಾರವು ವಿದ್ಯುತ್‌ವಲಯಕ್ಕೆ ಆಯವ್ಯಯದಲ್ಲಿ ಸಹಾಯಧನ ಒದಗಿಸುವಾಗ *'ಒದಗಿಸುವವರು -ಖರೀದಿದಾರರು'* ಮಾದರಿಯನ್ನು ಅಳವಡಿಸಿಕೊಳ್ಳಬೇಕು. ಇದರಂತೆ ಸರ್ಕಾರವು ಕೃಷಿ ವಲಯಕ್ಕೆ ಮುಂದಿನ ವರ್ಷದಲ್ಲಿ ಒದಗಿಸುವ ವಿದ್ಯುತ್‌ನ ಪ್ರಮಾಣವನ್ನು ನಿಗದಿಪಡಿಸುತ್ತದೆ. ಕೃಷಿ ವಿದ್ಯುತ್ ದರಗಳು ಮತ್ತು ಅಷ್ಟ ಸಹಾಯಧನವನ್ನು ಒಟ್ಟುಗೂಡಿಸಿದ ನಂತರ ಉಳಿಯುವ ರಾಜಸ್ವ

ಅಂತರವನ್ನು ಮಾತ್ರ ಸರ್ಕಾರವು ಭರಿಸುತ್ತದೆ. ಕೃಷಿ ಚಟುವಟಿಕೆಗಳಿಗಾಗಿ ರೈತರು ನಿಜವಾಗಿ ಬಳಸಿದ ವಿದ್ಯುತ್‌ಗೆ ಸಹಾಯಧನ ನೀಡಲು ಈ ಪರ್ಯಾಯ ತಂತ್ರವನ್ನು ಅಳವಡಿಸಿಕೊಳ್ಳಲಾಗಿದೆ.

103. ವಿದ್ಯುತ್ ವಿತರಣೆಯನ್ನು ಖಾಸಗೀಕರಣಗೊಳಿಸಲು ನನ್ನ ಸರ್ಕಾರ ಬದ್ಧವಾಗಿದ್ದು ಈ ನಿಟ್ಟಿನಲ್ಲಿ 2003-04 ನೇ ಸಾಲಿನಲ್ಲಿ ನಾವು ನಿರ್ಣಾಯಕ ಹೆಜ್ಜೆಗಳನ್ನು ಇಡಲಿದ್ದೇವೆ.

104. ಗ್ರಾಮೀಣ ವಿದ್ಯುದೀಕರಣವು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆರ್ಥಿಕ ದುರ್ಬಲ ವರ್ಗದವರಿಗೆ ವಿದ್ಯುತ್ ಸೌಲಭ್ಯ ಕಲ್ಪಿಸುವುದು ನನ್ನ ಸರ್ಕಾರದ ನಿರ್ಣಯವಾಗಿದೆ. 2003-04ನೇ ಸಾಲಿನಲ್ಲಿ ಆಶ್ರಯ ಮತ್ತು ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ನಿರ್ಮಿಸಿರುವ ನಾಲ್ಕು ಲಕ್ಷ ಮನೆಗಳಿಗೆ ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.

105. ಕೃಷಿ ವಲಯಕ್ಕೆ ರಿಯಾಯಿತಿ ದರದಲ್ಲಿ ವಿದ್ಯುತ್‌ನ್ನು ಪೂರೈಸುತ್ತಿದ್ದರೂ ಈ ವಲಯದಲ್ಲಿ ವಸೂಲಾತಿ ನಿರೀಕ್ಷೆಗಿಂತಲೂ ಕಡಿಮೆಯಾಗಿದೆ. ಒಟ್ಟು ವಸೂಲಾತಿ ಬೇಡಿಕೆಯಲ್ಲಿ ಸುಮಾರು ಶೇಕಡ 10 ರಷ್ಟು ಮಾತ್ರ ವಸೂಲಾತಿಯಾಗುತ್ತಿದೆ. ಇತ್ತೀಚಿನ ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರೈತರ ವಿದ್ಯುತ್ ಬಾಕಿಗಳಿಗೆ ಪರಿಹಾರ ನೀಡಲು ಸರ್ಕಾರವು ಬಡ್ಡಿ ಮನ್ನಾ ಯೋಜನೆಯನ್ನು ಜಾರಿಗೊಳಿಸಲಿದೆ.

106. ವಿದ್ಯುತ್ ಬಾಕಿಯನ್ನು ಪೂರ್ಣವಾಗಿ ಪಾವತಿಸುವ ರೈತರಿಗೆ ಸಂಪೂರ್ಣವಾಗಿ ಬಡ್ಡಿ ಮನ್ನಾ ಮಾಡಲಾಗುವುದು. 2003 ರ ಏಪ್ರಿಲ್ 1 ರಿಂದ 2003 ರ ಜೂನ್ 30 ರವರೆಗೆ ಮೂರು ತಿಂಗಳ ಅವಧಿಯವರೆಗೆ ಈ ಯೋಜನೆ ಜಾರಿಯಲ್ಲಿರುತ್ತದೆ. ಇದು ರೈತ ಸಮುದಾಯಕ್ಕೆ ಸುಮಾರು 285 ಕೋಟಿ ರೂ.ಗಳ ಬಡ್ಡಿ ಮನ್ನಾ ರಿಯಾಯಿತಿಯನ್ನು ಒದಗಿಸಲಿದೆ. ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ.

107. ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಕೆಪಿಸಿಎಲ್) ಪೂರ್ಣವಾಗಿ ಕರ್ನಾಟಕ ಸರ್ಕಾರಿ ಸ್ವಾಮ್ಯದ ಕಂಪನಿಯಾಗಿದ್ದು ರಾಜ್ಯದ ವಿದ್ಯುತ್ ಬೇಡಿಕೆಯ ಶೇಕಡ 75ಕ್ಕೂ ಹೆಚ್ಚು ಭಾಗವನ್ನು ಪೂರೈಸುತ್ತಿದೆ. ಮುಂಗಾರು ವೈಫಲ್ಯದ ನಡುವೆಯೂ ಸಹ 2002-03ನೇ ಸಾಲಿನಲ್ಲಿ ಕೆಪಿಸಿಎಲ್ 19,300 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದಿಸಲು ಯೋಜಿಸಿದೆ. ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಏಳನೇ ಘಟಕವನ್ನು ಕೆಪಿಸಿಎಲ್ ನಿಗದಿತ ಅವಧಿಗಿಂತ ಮುಂಚೆ ರಾಷ್ಟ್ರೀಯ ದಾಖಲೆ ಅವಧಿಯಲ್ಲಿ ಪೂರ್ಣಗೊಳಿಸಿದೆ.

108. ಕೆಪಿಸಿಎಲ್ ಸಂಸ್ಥೆಯು 290 ಮೆಗಾವ್ಯಾಟ್ ಸಾಮರ್ಥ್ಯದ ಆಲಮಟ್ಟಿ ಅಣೆಕಟ್ಟು ವಿದ್ಯುತ್ ಕೇಂದ್ರದ ಮೊದಲನೆ ಘಟಕವನ್ನು ಡಿಸೆಂಬರ್ 2003 ರ ಅಂತ್ಯಕ್ಕೆ ಕಾರ್ಯಾರಂಭಗೊಳಿಸಲು ಸಕಲ ಪ್ರಯತ್ನಗಳನ್ನು ನಡೆಸುತ್ತಿದೆ. 500 ಮೆಗಾವ್ಯಾಟ್ ಸಾಮರ್ಥ್ಯದ ಬಳ್ಳಾರಿ ಶಾಖೋತ್ಪನ್ನ ಘಟಕ; 700 ಮೆಗಾವ್ಯಾಟ್ ಸಾಮರ್ಥ್ಯದ ಬಿಡದಿ ಸಂಯುಕ್ತ ವಿದ್ಯುತ್ ಘಟಕ ಮತ್ತು 210 ಮೆಗಾವ್ಯಾಟ್ ಸಾಮರ್ಥ್ಯದ ಆರ್‌ಟಿಪಿಎಸ್‌ನ 8ನೇ ಘಟಕದ ನಿರ್ಮಾಣವನ್ನು ಸಹ ಕೈಗೆತ್ತಿಕೊಳ್ಳಲಾಗಿದ್ದು ಈ ಎಲ್ಲ ವಿದ್ಯುತ್ ಘಟಕಗಳು

ಮುಂಬರುವ ವರ್ಷದಲ್ಲಿ ರಾಜ್ಯದ ವಿದ್ಯುತ್ ಸಾಮರ್ಥ್ಯವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸುವ ನಿರೀಕ್ಷೆಯಿದೆ.

ನಗರಾಭಿವೃದ್ಧಿ

109. ಉತ್ತರ ಕರ್ನಾಟಕದ 20 ಪ್ರಮುಖ ಪಟ್ಟಣ ಮತ್ತು ನಗರಗಳ ಸಮಗ್ರ ಅಭಿವೃದ್ಧಿಯನ್ನು ಏಷ್ಯಾ ಅಭಿವೃದ್ಧಿ ಬ್ಯಾಂಕಿನ ನೆರವಿನೊಂದಿಗೆ ಕೈಗೆತ್ತಿಕೊಳ್ಳಲಾಗುವುದು.

110. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಚೈತನ್ಯ ನೀಡಲು ನಾನು ಪ್ರತ್ಯೇಕವಾಗಿ ಉತ್ತರ ಕರ್ನಾಟಕ ನೀರು ಸರಬರಾಜು ಮಂಡಳಿಯನ್ನು ಸ್ಥಾಪಿಸುತ್ತಿದ್ದೇನೆ. ಇದು ಹೈದರಾಬಾದ್ ಕರ್ನಾಟಕ ಪ್ರದೇಶ ಮತ್ತು ಮುಂಬೈ ಕರ್ನಾಟಕ ಪ್ರದೇಶಗಳ ಗ್ರಾಮೀಣ ಮತ್ತು ನಗರ ನೀರು ಪೂರೈಕೆ ಯೋಜನೆಗಳ ಉಸ್ತುವಾರಿ ವಹಿಸಲಿದೆ. ಈ ಮಂಡಳಿಯನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಲಾಗುವುದು.

111. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯವಿಧಾನ ಪ್ರಶಂಸನೀಯವಾಗಿದೆ. ಸಾರ್ವಜನಿಕರು ಅಥವಾ ಸರ್ಕಾರದ ಮೇಲೆ ಯಾವುದೇ ಹೊರೆಯನ್ನು ಹೊರಿಸದೆ ತನ್ನ ಸ್ವಂತ ಸಂಪನ್ಮೂಲಗಳಿಂದಲೇ ಬೆಂಗಳೂರು ನಗರಕ್ಕೆ 300 ಕೋಟಿ ರೂ.ಗಳ ಕೊಡುಗೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೀಡಿದೆ.

112. 'ಬೆಂಗಳೂರು ಮೆಟ್ರೋ ರೈಲು' - ಪ್ರತಿಷ್ಠಿತ ಯೋಜನೆಯಾಗಿದೆ. ದೆಹಲಿ ಮೆಟ್ರೋ ರೈಲು ನಿಗಮವು ಬೆಂಗಳೂರು ಮೆಟ್ರೋ ರೈಲು ಯೋಜನೆಯ ವರದಿಯನ್ನು ಶೀಘ್ರದಲ್ಲಿಯೇ ಸಲ್ಲಿಸಲಿದೆ. ಪ್ರಸಕ್ತ ವರ್ಷದಲ್ಲಿ ಈ ಯೋಜನೆ ಕಾರ್ಯಾರಂಭ ಮಾಡಲಿದ್ದು, ನಾನು 74 ಕೋಟಿ ರೂ.ಗಳ ಅನುದಾನ ಒದಗಿಸುತ್ತಿದ್ದೇನೆ.

ಕೈಗಾರಿಕಾ ಮತ್ತು ವಾಣಿಜ್ಯ

113. ಜಾಗತಿಕ ಅರ್ಥವ್ಯವಸ್ಥೆಯ ಹಿನ್ನೆಲೆಯಲ್ಲಿ ರಫ್ತು ವಹಿವಾಟಿನ ಮಹತ್ವವನ್ನು ಮನಗಂಡಿರುವ ನಾವು 2002-03ರ ಅವಧಿಗೆ ರಫ್ತು ಉತ್ತೇಜಕ ನೀತಿಯನ್ನು ಹೊರತಂದಿದ್ದೇವೆ. ರಾಜ್ಯದ ಪ್ರಸಕ್ತ ರಫ್ತು ವಹಿವಾಟನ್ನು 2003ರ ವೇಳೆಗೆ ಶೇಕಡ 7 ರಿಂದ ಶೇಕಡ 15 ಕ್ಕೆ ಹೆಚ್ಚಿಸಬೇಕೆಂಬುದು ಈ ನೀತಿಯ ಪ್ರಮುಖ ಉದ್ದೇಶವಾಗಿದೆ. ಶೀಘ್ರ ರಫ್ತು ಬೆಳವಣಿಗೆಗಾಗಿ ಪರಿಣಾಮಕಾರಿ, ಪ್ರಗತಿಪರ ಆಡಳಿತ ಯಂತ್ರದ ಬೆಂಬಲವನ್ನು ಒದಗಿಸಲಾಗುವುದು. ಮಧ್ಯಮಾವಧಿಯಲ್ಲಿ ವಲಯವಾರು ರಫ್ತು ಉತ್ತೇಜನ ತಂತ್ರ ಮತ್ತು ರಫ್ತು ಮೂಲ ಸೌಲಭ್ಯಗಳನ್ನು ನಿರ್ಮಿಸುವ ಮೂಲಕ ರಫ್ತು ವಹಿವಾಟನ್ನು ವೃದ್ಧಿಸಲಾಗುವುದು.

114. ವಿದ್ಯುತ್ ಉತ್ಪಾದಿಸುವ ಸಕ್ಕರೆ ಕಾರ್ಖಾನೆಗಳಿಗೆ ಪ್ರತಿ ಮೆಗಾವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯಕ್ಕೆ 25 ಲಕ್ಷ ರೂ.ಗಳಂತೆ ಬಂಡವಾಳ ಸಹಾಯಧನ ನೀಡುವ ಯೋಜನೆಯನ್ನು 2003-04ನೇ ಸಾಲಿಗೂ ಮುಂದುವರಿಸಲಾಗುವುದು.

115. ಕೈಮಗ್ಗ ನೇಕಾರರಿಗಾಗಿ ಮನೆ ಹಾಗೂ ಕಾರ್ಯಾಗಾರಗಳೆರಡು ಒಳಗೊಂಡಿರುವಂತೆ 2 ಸಾವಿರ ಮನೆಗಳನ್ನು ನಿರ್ಮಿಸಲಾಗುವುದು. ಈ ಮನೆ ನಿರ್ಮಾಣ ವೆಚ್ಚದ ಶೇಕಡ 25 ರಷ್ಟನ್ನು ಸರ್ಕಾರವು ಸಹಾಯಧನದ ರೂಪದಲ್ಲಿ ನೀಡಲಿದೆ. ಈ ಉದ್ದೇಶಕ್ಕಾಗಿ ನಾನು 2 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೇನೆ.

ಕೃಷಿ ಆಹಾರ ಸಂಸ್ಕರಣೆ ಉದ್ಯಮ

116. ಕೃಷಿ ಆಹಾರ ಸಂಸ್ಕರಣೆ ಇಂದು ಬೃಹತ್ ಜಾಗತಿಕ ಉದ್ಯಮವಾಗಿದೆ. ಬಲವಾದ ಕೃಷಿ ಆಹಾರ ಉದ್ಯಮವನ್ನು ಕಟ್ಟಲು ಕರ್ನಾಟಕಕ್ಕೆ ಹಲವಾರು ಅನುಕೂಲಗಳಿವೆ. ಈ ವಲಯಕ್ಕೆ ಚೈತನ್ಯ ನೀಡಲು ನನ್ನ ಸರ್ಕಾರವು "ಆಹಾರ ಕರ್ನಾಟಕ ನಿಯಮಿತ" ಎನ್ನುವ ವಿಶೇಷ ಉದ್ದೇಶ ವಾಹಿನಿಯನ್ನು ಸ್ಥಾಪಿಸುತ್ತಿದ್ದೇನೆ. ಇದು ರೈತರು ಮತ್ತು ಖಾಸಗಿ ವಲಯದ ಆಹಾರ ಉದ್ಯಮಿಗಳ ನಡುವೆ ಸಹಭಾಗಿತ್ವವನ್ನು ಮೂಡಿಸುತ್ತದೆ. ಇದರಿಂದಾಗಿ ಇನ್ನು ಮುಂದೆ ಗುತ್ತಿಗೆ ಕೃಷಿಗೆ ಪ್ರಾಮುಖ್ಯತೆ ದೊರೆತು ನಮ್ಮ ರೈತರಿಗೆ ವಾಣಿಜ್ಯ ಅವಕಾಶದ ಬಾಗಿಲು ತೆರೆದುಕೊಳ್ಳಲಿದೆ.

ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ

117. ಕುವೆಂಪು ಜನ್ಮ ಶತಮಾನೋತ್ಸವದ ಶುಭ ಸಂದರ್ಭದಲ್ಲಿ ಅವರ ಕನಸುಗಳನ್ನು ನನಸು ಮಾಡಲು ಸರ್ಕಾರವು ಉತ್ಸುಕವಾಗಿದೆ. ಈ ನಿಟ್ಟಿನಲ್ಲಿ ಚಿಕ್ಕಮಗಳೂರಿನ ಜಿಲ್ಲೆಯ ಕೊಪ್ಪ ಅರಣ್ಯ ವಿಭಾಗದಲ್ಲಿ 9160 ಎಕರೆ ಹೆಚ್ಚುವರಿ ಪ್ರದೇಶವನ್ನು *"ಕುವೆಂಪು ಸ್ಮಾರಕ ಜೈವಿಕ ಪಾರ್ಕ್"* ಎಂದು ಹೆಸರಿಸಲು ಕ್ರಮ ಕೈಗೊಳ್ಳಲಾಗುವುದು. ಇದರ ಜೊತೆಗೆ ಕುವೆಂಪು ಶತಮಾನೋತ್ಸವ ಆಚರಣೆಗಾಗಿ ಒಂದು ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

118. ಪರಿಸರ ಮತ್ತು ಜೈವಿಕ ಸಂರಕ್ಷಣೆಯಲ್ಲಿ ಅಸಾಧಾರಣ ಸೇವೆ ಸಲ್ಲಿಸಿದವರಿಗೆ ನೀಡಲು *"ರಾಜೀವಗಾಂಧಿ ಪರಿಸರ ಪ್ರಶಸ್ತಿ"* ಯನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ತಲಾ ಒಂದು ಲಕ್ಷ ರೂ.ಗಳ ಈ ಪ್ರಶಸ್ತಿಯನ್ನು ಪ್ರತಿ ವರ್ಷ ಐದು ಸಂಸ್ಥೆಗಳು ಅಥವಾ ವ್ಯಕ್ತಿಗಳಿಗೆ ಐದು ವಲಯದಿಂದ ಆಯ್ಕೆ ಮಾಡಿ ನೀಡಲಾಗುವುದು. ಮಲೆನಾಡು, ಕರಾವಳಿ, ಹಳೆ ಮೈಸೂರು (ಬೆಂಗಳೂರು ಹೊರತುಪಡಿಸಿ) ಹೈದರಾಬಾದ್ ಕರ್ನಾಟಕ ಮತ್ತು ಮುಂಬೈ ಕರ್ನಾಟಕ ಪ್ರಾಂತ್ಯ ಇವು ಐದು ವಲಯಗಳಾಗಿವೆ.

ಪ್ರವಾಸೋದ್ಯಮ

119. ಕರ್ನಾಟಕದ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯ ಚಿತ್ರಣವನ್ನೇ ರೂಪಾಂತರಿಸುವ ಶಕ್ತಿ ಪ್ರವಾಸೋದ್ಯಮಕ್ಕಿದೆ ಎಂದು ನಾನು ನಂಬಿದ್ದೇನೆ. ಈ ನಿಟ್ಟಿನಲ್ಲಿ ಸರ್ಕಾರವು ತನ್ನ ಎಲ್ಲಾ ಸಾಮರ್ಥ್ಯವನ್ನು ಕೇಂದ್ರೀಕರಿಸಿ ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ.

120. ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡು ಅದರ ಸದುಪಯೋಗ ಪಡೆದುಕೊಳ್ಳಲು ಸಮಾಜದ ಎಲ್ಲ ವರ್ಗಗಳಿಗೂ ಅಪೂರ್ವ ಅವಕಾಶವಿದೆ. ಸೂಕ್ತ ಶಿಕ್ಷಣ ಮತ್ತು ತರಬೇತಿ ಮೂಲಕ ಹೆಚ್ಚು ಜನರು ಪ್ರವಾಸೋದ್ಯಮ ಮತ್ತು ಅತಿಥಿ ಸತ್ಕಾರ ಉದ್ಯಮದಲ್ಲಿ ತೊಡಗಿಸಿಕೊಳ್ಳಬಹುದಾಗಿದೆ. ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಖಾಸಗಿ ಮತ್ತು ಸಾರ್ವಜನಿಕ ಸಹಯೋಗಕ್ಕೆ ಪ್ರಯತ್ನಗಳನ್ನು ಶೀಘ್ರದಲ್ಲೇ ಆರಂಭಿಸಲಾಗುವುದು.

121. ಕರ್ನಾಟಕದ ಹಲವಾರು ಪ್ರವಾಸ ಯೋಗ್ಯ ಪ್ರೇಕ್ಷಣೀಯ ಸ್ಥಳಗಳ ಕಡೆ ಘಟ್ಟದ ರಸ್ತೆ ಸಂಪರ್ಕದ ಕೊರತೆಯಿಂದಾಗಿ ಸಾಮಾನ್ಯ ಪ್ರವಾಸಿಗರ ಕೈಗೆ ಎಟುಕುತ್ತಿಲ್ಲ. ಇಂತಹ ಸ್ಥಳಗಳಿಗೆ ಸೂಕ್ತ ರಸ್ತೆ ಸಂಪರ್ಕ ಕಲ್ಪಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು.

122. ನಮ್ಮ ಪರ್ವತ ಮತ್ತು ಅರಣ್ಯಗಳು ಪ್ರಕೃತಿಯ ಅಪೂರ್ವ ಕೊಡುಗೆಗಳಾಗಿದ್ದು "ಪರಿಸರ ಪ್ರವಾಸೋದ್ಯಮ" ಕ್ಕೆ ಹೇಳಿ ಮಾಡಿಸಿದಂತಿವೆ. ಪರಿಸರ ಪ್ರವಾಸೋದ್ಯಮ

ನಮ್ಮ ಪ್ರಯತ್ನಗಳಿಗೆ ಕೇಂದ್ರ ಬಿಂದುವಾಗಿದೆ. ಪ್ರವಾಸಿಗರ ಪ್ರಥಮ ಭೇಟಿ ಅವರನ್ನು ಪ್ರಭಾವಿತಗೊಳಿಸಿ ಬಹಳ ಕಾಲ ನೆನಪಿನಲ್ಲಿ ಉಳಿಯುವಂತೆ ಮಾಡಲು ನಮ್ಮ ನಗರ ಪಟ್ಟಣಗಳನ್ನು ಪ್ರವಾಸಿಗರ ಅನುಕೂಲ ಮತ್ತು ಅವಶ್ಯಕತೆಗಳಿಗೆ ಅನುಗುಣವಾಗಿ ಸುಂದರಗೊಳಿಸಲು ಮತ್ತು ಸ್ವಚ್ಛಗೊಳಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಗುವುದು.

ಕನ್ನಡ ಮತ್ತು ಸಂಸ್ಕೃತಿ

123. ಕಳೆದ ವರ್ಷ ನನ್ನ ಆಯವ್ಯಯ ಭಾಷಣದಲ್ಲಿ ನಾನು ಕರ್ನಾಟಕ ಏಕೀಕರಣದ ಸುವರ್ಣ ಜಯಂತಿಯನ್ನು 2006ನೇ ಇಸವಿಯಲ್ಲಿ ಆಚರಿಸುವುದಾಗಿ ಪ್ರಸ್ತಾಪಿಸಿದ್ದೆ. ಇದರಂತೆ ನನ್ನ ಅಧ್ಯಕ್ಷತೆಯಲ್ಲಿ ಈ ಸುವರ್ಣ ಮಹೋತ್ಸವವನ್ನು ಆಚರಿಸಲು ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲಾಗಿದೆ.

124. ಮುಂಬರುವ ವರ್ಷದಲ್ಲಿ ಧಾರವಾಡ ಮತ್ತು ಗುಲ್ಬರ್ಗಾದಲ್ಲಿ ತಲಾ ಒಂದು *"ಸುವರ್ಣ ಸಾಂಸ್ಕೃತಿಕ ಸಂಕೀರ್ಣ"* ಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು. ಈ ಸಂಕೀರ್ಣಗಳಲ್ಲಿ ಕಲೆ, ಸಾಹಿತ್ಯ, ಶಿಲ್ಪಕಲೆ, ನಾಟಕ, ಜಾನಪದ, ಲಲಿತಕಲೆ, ಪ್ರವಾಸೋದ್ಯಮ, ವಾಸ್ತುಶಿಲ್ಪ, ಇತಿಹಾಸ, ಪ್ರಕೃತಿ ಮತ್ತು ಕರ್ನಾಟಕದ ಮಾನವಿಕ ಸಂಗತಿಗಳಿಗೆ ಸಂಬಂಧಿಸಿದ ಹಲವಾರು ವಸ್ತು ಮತ್ತು ವಿಷಯಗಳನ್ನು ಪ್ರದರ್ಶಿಸಲಾಗುವುದು.

125. ಕನ್ನಡ ರಂಗಭೂಮಿಗೆ ಅಂತರರಾಷ್ಟ್ರೀಯ ಮಟ್ಟದ ಖ್ಯಾತಿಯನ್ನು ಗಳಿಸಿಕೊಟ್ಟ ದಿವಂಗತ ಬಿ.ವಿ. ಕಾರಂತರ ಸಂಸ್ಮರಣೆಗಾಗಿ ಸಂಗೀತ ಸಂಸ್ಕೃತಿ ಚೇತನ ಯೋಜನೆಯಡಿ ರಾಷ್ಟ್ರೀಯ ಮಟ್ಟದ ಕರ್ನಾಟಕ ರಂಗ ಮಹೋತ್ಸವವನ್ನು ಸಂಘಟಿಸಲಾಗುವುದು.

126. ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ|| ಶಿವರಾಮಕಾರಂತರಿಗೆ ಪ್ರಿಯವಾದ ಯಕ್ಷಗಾನ ಮತ್ತು ಜಾನಪದ ಕಲಾಪ್ರಾಕಾರಗಳು ಹಾಗೂ ಸಾಹಿತ್ಯಕ್ಕೆ ಉತ್ತೇಜನ ನೀಡುವ ಸಲುವಾಗಿ ಸ್ಥಾಪಿಸಿರುವ ಟ್ರಸ್ಟ್‌ಗೆ ನಾನು 50 ಲಕ್ಷ ರೂ.ಗಳನ್ನು ನೀಡಲಿದ್ದೇನೆ.

127. ಕಳೆದ ವರ್ಷ ನಾವು ಸಮಗ್ರ ದಾಸ ಸಾಹಿತ್ಯವನ್ನು ಮುದ್ರಣ ಮಾಧ್ಯಮ ಹಾಗೂ ಬಹು ಮಾಧ್ಯಮಗಳೆರಡರ ಮೂಲಕವೂ ಪ್ರಕಟಗೊಳಿಸಿ ಅದನ್ನು ಸಿ.ಡಿ.ಯಲ್ಲಿ ದಾಖಲಿಸಿ ಅಂತರ್ಜಾಲದಲ್ಲಿ ಹಾಕಿದ್ದೆವು. ಈ ವರ್ಷ ನಾನು ವಚನ ಸಾಹಿತ್ಯದ ಬಗ್ಗೆ ಗಮನಹರಿಸಿದ್ದು 'ವಚನ ವಾಹಿನಿ' ಎನ್ನುವ ವಿನೂತನ ಕಾರ್ಯಕ್ರಮವನ್ನು ರೂಪಿಸಿದ್ದೇನೆ. ಸಮಗ್ರ ವಚನ ಸಾಹಿತ್ಯವನ್ನು ಬಹು ಮಾಧ್ಯಮದಲ್ಲಿ ಪ್ರಕಾಶನಗೊಳಿಸಿ ಸಿ.ಡಿ. ಮಾಧ್ಯಮದ ಮೂಲಕ ಬಿಡುಗಡೆ ಮಾಡಿ ಸರ್ವರಿಗೂ ದೊರೆಯುವಂತೆ ಇದನ್ನು ಅಂತರ್ಜಾಲದಲ್ಲಿ ಇಡಲಾಗುವುದು.

128. ಸಂತ ಕವಿ ಕನಕದಾಸರಿಗೆ ಸಂಬಂಧಿಸಿದ ಪ್ರದೇಶಗಳ ಅಭಿವೃದ್ಧಿಗಾಗಿ ದತ್ತಿಯೊಂದನ್ನು ನಾನು ಇತ್ತೀಚೆಗೆ ಸ್ಥಾಪಿಸಿದ್ದೇನೆ. ಈ ದತ್ತಿ ಸಂಸ್ಥೆಯು ಕನಕದಾಸರಿಗೆ ಸಂಬಂಧಿಸಿದ ಕಾಗಿನೆಲೆ, ಬಾಡ ಮತ್ತಿತರ ಸ್ಥಳಗಳ ಸಂರಕ್ಷಣೆಗೆ ಚಾಲನೆ ನೀಡಲಿದೆ. ಅವರ ಜೀವನ ಮತ್ತು ಸಾಧನೆಗಳ ಬಗ್ಗೆ ಕೂಡ ಟ್ರಸ್ಟ್ ಅಧ್ಯಯನ ಕೈಗೊಳ್ಳಲಿದೆ. ಈ ದತ್ತಿ ಸಂಸ್ಥೆಗೆ ನಾನು 50 ಲಕ್ಷ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

ಗಡಿ ಪ್ರದೇಶಾಭಿವೃದ್ಧಿ

129. ಮಹಾಜನ್ ಆಯೋಗದ ವರದಿಯ ಸಂಪೂರ್ಣ ಅನುಷ್ಠಾನಕ್ಕೆ ಸರ್ಕಾರ ಬದ್ಧವಾಗಿದೆಯೆಂದು ನಾನು ಮತ್ತೊಮ್ಮೆ ಹೇಳಲು ಇಚ್ಛಿಸುತ್ತೇನೆ. ನನ್ನ ಸರ್ಕಾರವು

ಕರ್ನಾಟಕದ ಗಡಿ ಪ್ರದೇಶದ ಹಿತವನ್ನು ಶ್ರದ್ಧೆಯಿಂದ ಸಂರಕ್ಷಿಸುತ್ತದೆ. ಗಡಿ ಪ್ರದೇಶದ ಹಳ್ಳಿಗಳ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ನಾನು 2 ಕೋಟಿ ರೂ.ಗಳನ್ನು ನಿಗದಿಪಡಿಸುತ್ತಿದ್ದೇನೆ. ಈ ಮೊತ್ತವನ್ನು ಗಡಿ ಪ್ರದೇಶದ ಹಳ್ಳಿಗಳ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಿಗೆ ನೇರವಾಗಿ ಬಿಡುಗಡೆ ಮಾಡಲಾಗುವುದು.

ಪೋಲೀಸ್

130. ರಾಜ್ಯಾದ್ಯಂತ ಪೋಲೀಸ್ ಠಾಣೆಗಳಲ್ಲಿ ಮಹಿಳಾ ಪೋಲೀಸರ ಸಂಖ್ಯೆಯನ್ನು ಹೆಚ್ಚಿಸಬೇಕೆನ್ನುವ ಬೇಡಿಕೆ ಬಹಳ ದಿನಗಳಿಂದ ಇದೆ. ಇದನ್ನು ಈಡೇರಿಸಲು ಹೆಚ್ಚುವರಿಯಾಗಿ ಒಂದು ಸಾವಿರ ಪೋಲೀಸ್ ಕಾನ್‌ಸ್ಟೇಬಲ್, ಸಹಾಯಕ ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ಸಬ್ ಇನ್ಸ್‌ಪೆಕ್ಟರ್‌ಗಳ ನೇಮಕಾತಿಗೆ ಮಂಜೂರಾತಿ ನೀಡಿ ಹಂತ ಹಂತವಾಗಿ ಮಹಿಳೆಯರನ್ನೇ ನೇಮಕ ಮಾಡಿಕೊಳ್ಳಲು ಉದ್ದೇಶಿಸಿದ್ದೇನೆ. ಕೆಎಸ್‌ಆರ್‌ಪಿ ಪಡೆಗೆ ಹೆಚ್ಚುವರಿಯಾಗಿ 200 ಮಹಿಳಾ ಪೋಲೀಸರನ್ನು ನೇಮಕ ಮಾಡಿಕೊಳ್ಳಲಾಗುವುದು.

131. ರಾಜ್ಯ ಪೋಲೀಸ್ ಪಡೆಗೆ ವಿಶೇಷ ಶಕ್ತಿಯುಳ್ಳ ಘಟಕದ ಅಗತ್ಯವನ್ನು ಈಡೇರಿಸಲು ವಿವಿಧ ಹಂತದ ನೂರು ಪೋಲೀಸ್ ಸಿಬ್ಬಂದಿಯುಳ್ಳ ಸಮಗ್ರ ಕಮಾಂಡೋ ಪಡೆಯನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಈ ಘಟಕವನ್ನು ವಿಶೇಷ ಕಾರ್ಯಾಚರಣೆಗಳಿಗೆ ಮಾತ್ರ ಬಳಸಿಕೊಳ್ಳಲಾಗುವುದು.

132. ಗುಂಪು ವಿಮೆ ಯೋಜನೆಯಡಿ ಪೋಲೀಸ್ ಪೇದೆಗಳಿಗೆ ಜೀವವಿಮೆ ಮೊತ್ತವನ್ನು ಒಂದು ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು.

ಆರ್ಥಿಕ ಕಾರ್ಯ ನಿರ್ವಹಣೆ

133. ನನ್ನ ಸರ್ಕಾರವು ಮಧ್ಯಮಾವಧಿ ಆರ್ಥಿಕ ಸುಧಾರಣಾ ಕಾರ್ಯಕ್ರಮಗಳ ಮಧ್ಯಭಾಗದಲ್ಲಿದೆ. ಇದು ಮೂರನೇ ವರ್ಷದ ಆರ್ಥಿಕ ಸುಧಾರಣೆ. 2001-02ನೇ ಸಾಲಿನಲ್ಲಿ ತೀವ್ರ ಬರ ಪರಿಸ್ಥಿತಿ ಮತ್ತು ನಿರಾಶದಾಯಕ ರಾಜಸ್ವದಿಂದಾಗಿ ಮಧ್ಯಮಾವಧಿ ಆರ್ಥಿಕ ಯೋಜನೆಗಳಲ್ಲಿ ನಿಗದಿಪಡಿಸಿಕೊಂಡಿದ್ದ ಆರ್ಥಿಕ ಗುರಿಗಳನ್ನು ಪೂರ್ಣವಾಗಿ ತಲುಪಲಾಗಲಿಲ್ಲ.

134. ರಾಜ್ಯದ ಆರ್ಥಿಕ ಗಂಭೀರ ಸ್ಥಿತಿಗೆ ವಿದ್ಯುತ್ ವಲಯವೇ ಪ್ರಮುಖ ಕಾರಣ ಕ್ಷೇತ್ರವಾಗಿದೆ. ಸುಧಾರಣಾ ಮಾನದಂಡಗಳನ್ನು ತಲುಪುವಲ್ಲಿ ವಿದ್ಯುತ್ ವಲಯವು ವಿಫಲವಾದ ಕಾರಣದಿಂದಾಗಿ ಕೆಇಆರ್‌ಎಲ್ III ಯೋಜನೆಗೆ ಸಂಬಂಧಿಸಿದ 1200 ಕೋಟಿ ಸಾಲ ಸೌಲಭ್ಯವನ್ನು ಪಡೆಯಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಇದರ ಜೊತೆಗೆ ಸ್ವಂತ ತೆರಿಗೆ ಸಂಗ್ರಹಣೆಯಲ್ಲಿ ಕೊರತೆ, ತೆರಿಗೆಯೇತರ ಮತ್ತು ಕೇಂದ್ರ ಸರ್ಕಾರದ ಹಂಚಿಕೆಯಲ್ಲಿ ರಾಜಸ್ವದ ಕೊರತೆ ಇವೆಲ್ಲವೂ ಸೇರಿಕೊಂಡು ಒಟ್ಟಾರೆ 1600 ಕೋಟಿ ರೂ.ಗಳ ಅಂದಾಜು ರಾಜಸ್ವ ಕೊರತೆ ಉಂಟಾಗಿದೆ.

135. ಹಲವಾರು ನಿರ್ಬಂಧಗಳ ನಡುವೆಯೂ ನಮ್ಮ ಕೊರತೆಯನ್ನು ನಿಗದಿತ ಮಟ್ಟದಲ್ಲೇ ನಾವು ಉಳಿಸಿಕೊಂಡು ಬಂದಿದ್ದೇವೆ. 2002-03ರ ಪರಿಷ್ಕೃತ ಅಂದಾಜುಗಳು ಇದನ್ನು ತೋರಿಸುತ್ತಿವೆ. ಪರಿಷ್ಕೃತ ಅಂದಾಜಿನಲ್ಲಿ ಸೂಚಿಸಿದಂತೆ ವೆಚ್ಚಗಳನ್ನು ನಿಯಂತ್ರಿಸಿದ್ದಕ್ಕಾಗಿ ನಾನು ಎಲ್ಲಾ ಇಲಾಖೆಗಳಿಗೆ ಮತ್ತು ನನ್ನ ಸಹೋದ್ಯೋಗಿ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸಂಪನ್ಮೂಲಗಳ ನಿರ್ಬಂಧದ ಹಿನ್ನೆಲೆಯಲ್ಲಿ ಈ ಕ್ರಮ ಅನಿವಾರ್ಯವಾಗಿತ್ತು.

ಈ ಸದನವು ಜಾರಿಗೊಳಿಸಿರುವ ಆರ್ಥಿಕ ಜವಾಬ್ದಾರಿ ಕಾಯಿದೆಯ ಚೌಕಟ್ಟಿನೊಳಗೆ ನಾವು ಜವಾಬ್ದಾರಿ ಸರ್ಕಾರವಾಗಿ ಕಾರ್ಯ ನಿರ್ವಹಿಸಬೇಕಾಗಿರುವುದು ಅನಿವಾರ್ಯವಾಗಿದೆ.

136. ಫಲಿತಾಂಶಗಳು ನಮ್ಮೆಲ್ಲರ ಕಣ್ಮುಂದೆ ಇವೆ. ನಮ್ಮ ರಾಜಸ್ವ ಆದಾಯಗಳು ನಾವು ನಿರೀಕ್ಷಿಸಿದ್ದ 18798 ಕೋಟಿ ರೂ.ಗಳಿಂದ 17101 ಕೋಟಿ ರೂ.ಗಳಿಗೆ ಕುಸಿದವು. ನಾವು ವೆಚ್ಚಗಳನ್ನು 24840 ಕೋಟಿ ರೂ.ಗಳಿಂದ 23747 ಕೋಟಿ ರೂ.ಗಳಿಗೆ ತಗ್ಗಿಸಿದೆವು. ಪರಿಷ್ಕೃತ ಅಂದಾಜುಗಳ ರೀತ್ಯ ವಿತ್ತೀಯ ಕೊರತೆಯನ್ನು ನಿಗದಿತ ಗುರಿಯಾದ 5839 ಕೋಟಿ ರೂ.ಗಳಿಗಿಂತ ಕಡಿಮೆ ಮಾಡಿ 5637 ಕೋಟಿ ರೂ.ಗಳಿಗೇ ನಿಯಂತ್ರಿಸಿದ್ದೇವೆ.

137. 2003-04ನೇ ಸಾಲಿನ ಆರ್ಥಿಕ ನೋಟ ಪ್ರೋತ್ಸಾಹದಾಯಕವಾಗಿದೆ. ಈ ಆಯವ್ಯಯದಲ್ಲಿ ನಾನು ರಾಜ್ಯದ ಸ್ವಂತ ಸಂಪನ್ಮೂಲ ಕ್ರೋಢೀಕರಣವನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಅಂದಾಜು ಮಾಡಲು ಪ್ರಯತ್ನಿಸಿದ್ದೇನೆ. ಯೋಜನೇತರ, ಅಭಿವೃದ್ಧಿಯೇತರ ವೆಚ್ಚವನ್ನು ಕಡಿಮೆ ಮಾಡುವುದು ಕೂಡ ನನ್ನ ಪ್ರಯತ್ನವಾಗಿದೆ. ಸರ್ಕಾರಿ ವೆಚ್ಚವನ್ನು ಸರಿಗಾತ್ರಕ್ಕೆ ತರುವುದು ಮತ್ತು ಯೋಜನೇತರ ಬಾಬಿನಲ್ಲಿ ಸರ್ಕಾರಿ ವೆಚ್ಚವನ್ನು ಕಡಿಮೆ ಮಾಡುವುದು ಆರ್ಥಿಕ ಸುಸ್ಥಿರತೆಯನ್ನು ಸಾಧಿಸುವಲ್ಲಿ ನಿರ್ಣಾಯಕ ಸವಾಲಾಗಿದೆ. ಈ ನಿಟ್ಟಿನಲ್ಲಿ ನಾನು ಈ ವರ್ಷದ ಯೋಜನೇತರ ಆಯವ್ಯಯ ಹಂಚಿಕೆಯಲ್ಲಿ ಕೆಲವು ಪ್ರಯತ್ನಗಳನ್ನು ಮಾಡಿದ್ದೇನೆ.

138. ಕ್ಷೀಣಗೊಂಡಿರುವ ಸಂಪನ್ಮೂಲಗಳನ್ನು ಯೋಜನೇತರ ಬಾಬಿನಿಂದ ಬಿಡುಗಡೆಗೊಳಿಸಿ ಯೋಜನಾ ವಲಯಕ್ಕೆ ಸೇರಿಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ನಾನು ಪ್ರಮುಖ ಕ್ಷೇತ್ರಗಳಾದ ಕೃಷಿ ಮತ್ತು ತೋಟಗಾರಿಕೆ ಗ್ರಾಮೀಣಾಭಿವೃದ್ಧಿ ಮತ್ತು ದುರ್ಬಲ ವರ್ಗದವರ ರಕ್ಷಣೆ ಇತ್ಯಾದಿ ವಲಯಗಳ ಅಭಿವೃದ್ಧಿ ವೆಚ್ಚಗಳಿಗೆ ಹೆಚ್ಚು ಹಂಚಿಕೆ ಮಾಡಿದ್ದೇನೆ. ಎಲ್ಲಾ ಇಲಾಖೆಗಳು ಮುಂದಿನ ವರ್ಷದಲ್ಲಿ ಯೋಜನೆ ಮತ್ತು ಯೋಜನೇತರ ಬಾಬ್ತಿನಲ್ಲಿ ತಮಗೆ ನಿಗದಿಪಡಿಸಿದ ಅನುದಾನದ ವ್ಯಾಪ್ತಿಯಲ್ಲಿಯೇ ಕಾರ್ಯನಿರ್ವಹಿಸಬೇಕೆಂದು ನಾನು ವಿನಂತಿಸುತ್ತೇನೆ.

139. ಮಧ್ಯಮಾವಧಿ ಆರ್ಥಿಕ ಯೋಜನೆಯಲ್ಲಿ ನಿಗದಿಪಡಿಸಿರುವಂತೆ ವಿತ್ತೀಯ ಕೊರತೆಯನ್ನು 6269 ಕೋಟಿ ರೂ.ಗಳಿಗೆ ನಿಯಂತ್ರಿಸುವುದು ನನ್ನ ಗುರಿಯಾಗಿದೆ. ಆಯವ್ಯಯದ ಯಶಸ್ಸು ಆರ್ಥಿಕ ಜವಾಬ್ದಾರಿ ಕಾಯಿದೆಗೆ ಬದ್ಧರಾಗಿ ನಾವು ನಡೆದುಕೊಳ್ಳುವುದನ್ನು ಗಣನೀಯವಾಗಿ ಅವಲಂಬಿಸಿದೆ. ಆದ್ದರಿಂದ ಆರ್ಥಿಕ ಜವಾಬ್ದಾರಿ ಕಾಯಿದೆಗೆ ಬದ್ಧರಾಗಬೇಕಾಗಿರುವುದು ನಮ್ಮೆಲ್ಲರ ಸಾಂಘಿಕ ಜವಾಬ್ದಾರಿಯಾಗಿದೆ.

ವಾರ್ಷಿಕ ಯೋಜನೆ 2003-04

140. ರಾಜ್ಯ ಸರ್ಕಾರವು 2002-03ರಲ್ಲಿ ತೀವ್ರ ರಾಜಸ್ವ ಕೊರತೆಯನ್ನು ಅನುಭವಿಸಿತು ಆದರೂ ಸಹ ನಾವು ನಮ್ಮ ಯೋಜನಾ ಗುರಿಗಳಿಗೆ ಹೆಚ್ಚು ಕಡಿಮೆ ಬದ್ಧರಾಗಿದ್ದೇವೆ. 2002-03ನೇ ಸಾಲಿನಲ್ಲಿ ನಾನು 8611 ಕೋಟಿ ರೂ.ಗಳ ಯೋಜನಾ ಅಂದಾಜನ್ನು ತಲುಪುವ ಆಶಾಭಾವನೆಯನ್ನು ಇಟ್ಟುಕೊಂಡಿದ್ದೆ. ಪರಿಷ್ಕೃತ ಅಂದಾಜಿನ ರೀತ್ಯ ನಾವು 8421 ಕೋಟಿ ರೂ.ಗಳನ್ನು ತಲುಪಿದ್ದು ಇದು ಶೇಕಡ 98 ರಷ್ಟು ಸಾಧನೆಯಾಗಿದೆ. ಬರ ಪರಿಸ್ಥಿತಿಯ ಪ್ರತಿಕೂಲ ಪರಿಣಾಮ ಮತ್ತು ಒಟ್ಟಾರೆ ಸಂಪನ್ಮೂಲದ ಕೊರತೆಯ ನಡುವೆಯೂ ಇದು ತೃಪ್ತಿದಾಯಕ ಸಂಗತಿ.

141. ನಾನು 2003-04ನೇ ಸಾಲಿಗೆ ವಾರ್ಷಿಕ ಅಂದಾಜು ವೆಚ್ಚವನ್ನು 9780 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದೇನೆ. ನಮ್ಮ ಪರಿಷ್ಕೃತ ಅಂದಾಜುಗಳ ಆಧಾರದಲ್ಲಿ ಇದು ಶೇಕಡ 16 ರಷ್ಟು ಬೆಳವಣಿಗೆಯಾಗಿದೆ. ಪ್ರಮುಖ ವಲಯವಾರು ಹಂಚಿಕೆಗಳನ್ನು ಅನುಬಂಧ - I ರಲ್ಲಿ ನೀಡಲಾಗಿದೆ.

142. 2002-03 ರಲ್ಲಿ ಪ್ರಮುಖ ವಲಯಗಳಲ್ಲಿನ ವೆಚ್ಚದ ಬೆಳವಣಿಗೆ ಗಮನಾರ್ಹವಾಗಿದೆ. ಕೃಷಿ ಮತ್ತು ಇತರೆ ಸೇವೆಗಳು (ಶೇಕಡ 18) ಗ್ರಾಮೀಣಾಭಿದ್ಧಿ (ಶೇಕಡ 43) ನೀರಾವರಿ (ಶೇಕಡ 8) ಸಮಾಜ ಕಲ್ಯಾಣ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ (ಶೇಕಡ 8.5) ಶಿಕ್ಷಣ (ಶೇಕಡ 22) ನೀರು ಸರಬರಾಜು ಮತ್ತು ಒಳಚರಂಡಿ (ಶೇಕಡ 33) ವಸತಿ ಮತ್ತು ನಗರಾಭಿವೃದ್ಧಿ (ಶೇಕಡ 15)

143. ಈ ಆಯವ್ಯಯದಲ್ಲಿ ನಾನು ತೋರಿಸಿರುವ ದೃಢವಾದ ಆರ್ಥಿಕ ಜವಾಬ್ದಾರಿ ಮತ್ತು ವೃದ್ದಿಯಾಗಿರುವ ವೆಚ್ಚಗಳು ನನ್ನ ಸರ್ಕಾರದ ಆದ್ಯತೆಗಳನ್ನು ನಿಚ್ಚಳವಾಗಿ ತೋರಿಸುತ್ತವೆ.

144. ನಾನೀಗ ತೆರಿಗೆ ಪ್ರಸ್ತಾವನೆಗಳನ್ನು ಮಂಡಿಸುತ್ತೇನೆ.

ವಾಣಿಜ್ಯ ತೆರಿಗೆಗಳು

145. ಮಾರಾಟ ತೆರಿಗೆ ಸುಧಾರಣೆಯಲ್ಲಿ ಅತಿ ಗಣನೀಯ ಬದಲಾವಣೆಯ ಹೊಸ್ತಿಲಲ್ಲಿ ನಾವಿದ್ದೇವೆ. ಪ್ರಸ್ತುತ ಮಾರಾಟ ತೆರಿಗೆ ವ್ಯವಸ್ಥೆಯ ಜಾಗದಲ್ಲಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಮೆಚ್ಚಿಕೊಳ್ಳಲಾದ, ತೆರಿಗೆಯ ಮೇಲೆ ತೆರಿಗೆ ಬೀಳದಂತಹ, ನ್ಯಾಯಯುತ, ನಿಷ್ಪಕ್ಷಪಾತವಾದ ಮತ್ತು ಪಾರದರ್ಶಕ ತೆರಿಗೆಯಾದ ಮೌಲ್ಯವರ್ಧಿತ ತೆರಿಗೆಯನ್ನು ಕರ್ನಾಟಕ ಏಪ್ರಿಲ್ 2003 ರಿಂದ ಜಾರಿಗೊಳಿಸುತ್ತದೆ.

146. ಮಾನ್ಯರೇ, ಕರ್ನಾಟಕ ಮೌಲ್ಯವರ್ಧಿತ ತೆರಿಗೆ ವಿಧೇಯಕವು ಸದನದ ಮುಂದಿದೆ. ವಿಧೇಯಕವು ಮೌಲ್ಯವರ್ಧಿತ ತೆರಿಗೆಗೆ ಶಾಸನ ಚೌಕಟ್ಟನ್ನು ಒದಗಿಸುತ್ತದೆ.

147. ತೆರಿಗೆ ಆಡಳಿತ ಬಂದು ಬರೀ ತೆರಿಗೆ ವಸೂಲಿಗಾರನ ಬದಲಾಗಿ ಸ್ಪಂದಿಸುವ ಹಾಗೂ ಸೇವಾಧಾರಿತ ಸೌಲಭ್ಯ / ಸಹಾಯ ನೀಡುವ ಸಂಸ್ಥೆಯಾಗಿ ಪರಿವರ್ತನೆಯಾಗಲಿದೆ. ಮಾರಾಟ ತೆರಿಗೆಯಿಂದ ಮೌಲ್ಯವರ್ಧಿತ ತೆರಿಗೆಗೆ ಆಗುವ ಈ ಬದಲಾವಣೆಯನ್ನು ಸುಸೂತ್ರ ಮತ್ತು ಯಶಸ್ವಿಯಾಗಿ ಮಾಡಲು ನಮ್ಮ ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ.

148. ಮಾನ್ಯರೇ, ಮೊದಲ ವರ್ಷದಲ್ಲಿ ನಮ್ಮ ರಾಜಸ್ವ ನಷ್ಟ ಸುಮಾರು 750 ಕೋಟಿ ರೂ.ಗಳಷ್ಟು ಆಗುವ ಅಂದಾಜು ಇದೆ. ತೆರಿಗೆ ಸುಧಾರಣೆ ಯತ್ನಗಳಲ್ಲಿ ಭಾರತ ಸರ್ಕಾರ ನಮ್ಮೊಡನೆ ಇದ್ದು ಮೌಲ್ಯವರ್ಧಿತ ತೆರಿಗೆ ಜಾರಿಗೊಳಿಸುವ ಮೊದಲ ವರ್ಷದ ರಾಜಸ್ವ ನಷ್ಟವನ್ನು ಸಂಪೂರ್ಣವಾಗಿ ಭರಿಸಲಿದೆ. ಎರಡನೆಯ ವರ್ಷದಲ್ಲಿ ಶೇಕಡ 75 ರಷ್ಟು ಮತ್ತು 3ನೆಯ ವರ್ಷದಲ್ಲಿ ಶೇಕಡ 50 ರಷ್ಟು ನಷ್ಟವನ್ನು ಅದು ಭರಿಸಲಿದೆ.

149. ರಾಜ್ಯಗಳು ಸೇವೆಗಳ ಮೇಲೆ ತೆರಿಗೆ ವಿಧಿಸಲು ಅಗತ್ಯವಾದ ತಿದ್ದುಪಡಿಗಳನ್ನು ಭಾರತ ಸರ್ಕಾರ ಮಾಡುತ್ತದೆ ಎಂದು ನಮ್ಮ ಸರ್ಕಾರ ಆಶಯ ಹೊಂದಿದೆ.

150. ಕರ್ನಾಟಕ ಮೌಲ್ಯವರ್ಧಿತ ತೆರಿಗೆ ವಿಧೇಯಕದಲ್ಲಿ ಹೇಳಿರುವಂತೆ ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಸರಕುಗಳು ಮೂರು ಮುಖ್ಯ ವರ್ಗಗಳಡಿಯಲ್ಲಿ ಬರುತ್ತವೆ.

151. ತಾಜಾ ತರಕಾರಿಗಳು, ಒರಟು ಧಾನ್ಯಗಳು, ಕೈ ಚಾಲಿತ ಕೃಷಿ ಉಪಕರಣಗಳು, ಇತ್ಯಾದಿಗಳಂತಹ ಅಗತ್ಯ ವಸ್ತುಗಳು ತೆರಿಗೆ ವಿನಾಯಿತಿ ಹೊಂದಿದ್ದು ಮೊದಲನೆ ಅನುಸೂಚಿಯಡಿಯಲ್ಲಿ ಪಟ್ಟಿಯಾಗಿರುತ್ತವೆ. ಪ್ರಸ್ತುತ ಮಾರಾಟ ತೆರಿಗೆ ವ್ಯವಸ್ಥೆಯಲ್ಲಿ ಮುಂದುವರಿಸಲು ಉದ್ದೇಶಿತವಾಗಿರುವ ಪೆಟ್ರೋಲ್, ಡೀಸೆಲ್, ವೈಮಾನಿಕ ಇಂಧನ, ಕಬ್ಬು ಮತ್ತು ಲಾಟರಿ ಟಿಕೇಟುಗಳು ಕೂಡ ಈ ಅನುಸೂಚಿಯಡಿಯಲ್ಲಿ ಇರುತ್ತವೆ.

152. ಮದ್ಯಸಾರ, ಬೀರ್, ಫೆನ್ನಿ ಲಿಕ್ಕೇರ್, ವೈನ್ ಮತ್ತು ಇತರೆ ಮದ್ಯಗಳು ಅಬಕಾರಿ ಕಾಯಿದೆಯಡಿಯಲ್ಲಿ ಮುಂದುವರಿಯುತ್ತವೆ.

153. ಬೆಂಕಿ ಪೊಟ್ಟಣಗಳು, ಖಾದ್ಯ ತೈಲ, ಬ್ರೆಡ್, ಬನ್, ಇತ್ಯಾದಿಯಂತಹ ಸಾಮಾನ್ಯ ಬಳಕೆ ವಸ್ತುಗಳು, ಯಂತ್ರಚಾಲಿತ ಕೃಷಿ ಉಪಕರಣಗಳು, ಗುರುತಿಸಲಾಗುವ ಕಚ್ಚಾ ವಸ್ತುಗಳು ಮತ್ತು ಘೋಷಿತ ವಸ್ತುಗಳು ಶೇಕಡ 4 ರ ತೆರಿಗೆಗೆ ಒಳಗಾಗುತ್ತವೆ. ಹಾಗೂ ಮೂರನೇಯ ಅನುಸೂಚಿಯಡಿಯಲ್ಲಿ ಪಟ್ಟಿಯಾಗಿವೆ.

154. ಮಿಕ್ಕೆಲ್ಲಾ ಸರಕುಗಳು ಒಂದು ಸಾಮಾನ್ಯ (ಸ್ಟಾಂಡರ್ಡ್) ದರದಲ್ಲಿ ತೆರಿಗೆಗೆ ಒಳಗಾಗುತ್ತವೆ. ಎಲ್ಲಾ ರಾಜ್ಯಗಳು ಒಪ್ಪಿಕೊಂಡಿರುವಂತೆ ಈ ಸಾಮಾನ್ಯ ದರ ಶೇಕಡ 12.5 ರಷ್ಟು ಇರುತ್ತದೆ.

155. ಕೆಲವು ಸರಕುಗಳು ಈ ಶೇಕಡ 12.5 ರ ತೆರಿಗೆಗೆ ಒಳಪಡದೆ, ಶೇಕಡ 1 ಮತ್ತು ಶೇಕಡ 20 ರಂತೆ ತೆರಿಗೆಗೆ ಒಳಗಾಗುತ್ತವೆ. ಶೇಕಡ 20 ರ ತೆರಿಗೆಗೆ ಒಳಗಾಗುವ ಎಲ್ಲಾ ಸರಕುಗಳು ಅಪಾತ್ರ (ಡೀ ಮೆರಿಟ್) ಸರಕುಗಳಾಗಿದ್ದು ರಾಷ್ಟ್ರ ಮಟ್ಟದ ಒಮ್ಮತದಂತೆ ಇವುಗಳಿಗೆ ಹೂಡುವಳಿ ತೆರಿಗೆ ಜಮಾ ಸೌಲಭ್ಯವನ್ನು ನೀಡದಿರಲು ನಾನು ಪ್ರಸ್ತಾವಿಸುತ್ತೇನೆ.

156. ವಿವಿಧ ದರಗಳಲ್ಲಿ ತೆರಿಗೆಗೊಳಗಾಗುವ ಸರಕುಗಳ ವಿವರಗಳನ್ನು ಅನುಬಂಧ - II ರಲ್ಲಿ ಒದಗಿಸಲಾಗಿದೆ.

157. ರಾಜ್ಯ ಸರ್ಕಾರ ಬಟ್ಟೆ, ಸಕ್ಕರೆ, ತಂಬಾಕು ಮತ್ತು ತಂಬಾಕು ಉತ್ಪನ್ನಗಳ ಮೇಲೆ ಮೌಲ್ಯವರ್ಧಿತ ತೆರಿಗೆಯನ್ನು ವಿಧಿಸಲು ಅನುಮತಿ ಹೊಂದಿದ ನಂತರ ಇತರೆ ರಾಜ್ಯಗಳು ಅನುಸರಿಸುವ ತೆರಿಗೆ ದರಗಳನ್ನು ಹಾಗೂ ನಮ್ಮ ವಾಣಿಜ್ಯ ಮತ್ತು ಉದ್ಯಮಗಳ ಹಿತವನ್ನು ಗಮನದಲ್ಲಿಟ್ಟುಕೊಂಡು ಅವುಗಳ ಮೇಲೆ ಸೂಕ್ತವಾದ ದರಗಳಲ್ಲಿ ಮೌಲ್ಯವರ್ಧಿತ ತೆರಿಗೆಯನ್ನು ವಿಧಿಸಲು ನಾನು ಪ್ರಸ್ತಾವಿಸುತ್ತೇನೆ.

158. ಮಾನ್ಯರೇ, ನಾವು ಶೇಕಡ 4ಕ್ಕೆ ಒಳಗಾಗುವ ಕೈಗಾರಿಕಾ ಕಚ್ಚಾ ವಸ್ತುಗಳು ಮತ್ತು ಪ್ಯಾಕಿಂಗ್ ವಸ್ತುಗಳೆಂದು ಘೋಷಿಸಬೇಕಾಗಿದೆ. ಅದರಂತೆ ಶೇಕಡ 4 ರ ಮೌಲ್ಯವರ್ಧಿತ ತೆರಿಗೆಗೆ ಒಳಗಾಗುವ ಮಾಹಿತಿ ತಂತ್ರಜ್ಞಾನ ಉತ್ಪನ್ನಗಳನ್ನು ಕೂಡ ಘೋಷಿಬೇಕಾಗಿದೆ. ಎಲ್ಲಾ ರಾಜ್ಯಗಳು ಒಪ್ಪಿದಂತ ಒಂದು ಸಮಾನ ಪಟ್ಟಿಯಂತೆ, ಅನುಬಂಧ - III ರಲ್ಲಿ ತೋರಿಸಿದಂತವುಗಳನ್ನು ಅಂತಹ ಸರಕುಗಳನ್ನಾಗಿ ಘೋಷಿಸಲು ನಾನು ಪ್ರಸ್ತಾವಿಸುತ್ತೇನೆ.

159. ಮಾನ್ಯರೇ, ಮೌಲ್ಯವರ್ಧಿತ ತೆರಿಗೆಯ ಜಾರಿ ಸರಕುಗಳ ಬೆಲೆಗಳಲ್ಲಿ ಏರಿಕೆ ಉಂಟುಮಾಡುವುದಿಲ್ಲ ಮತ್ತು ಉಂಟುಮಾಡಬಾರದೆಂದು ನಾನು ಇಲ್ಲಿ ಒತ್ತಿ ಹೇಳಲು ಇಷ್ಟಪಡುತ್ತೇನೆ. ಕೆಲವು ಸರಕುಗಳು ಪ್ರಸ್ತುತ ತೆರಿಗೆಗಿಂತ ಹೆಚ್ಚಿನ ತೆರಿಗೆಗೆ ಒಳಗಾದರೂ,

ಬಹಳಷ್ಟು ಸರಕುಗಳ ಮೇಲಿನ ಕಡಿಮೆ ದರದಿಂದಾಗಿ ಸಾಮಾನ್ಯ ಬಳಕೆದಾರನ ವಸ್ತುಗಳ ರಾಶಿಯ ಮೇಲೆ ಬೀಳುವ ಒಟ್ಟು ತೆರಿಗೆ ಪ್ರಸ್ತುತ ತೆರಿಗೆಗಿಂತ ಕಡಿಮೆಯಾಗುತ್ತದೆ. ಇದು ಏಕೆಂದರೆ, ನಾವು ಜಾರಿ ಮಾಡಲು ಉದ್ದೇಶಿಸಿರುವ ಶೇಕಡ 12.5 ರ ಬದಲಾಗಿ ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ಶೇಕಡ 15 ರಾಜಸ್ವ ಸಮಾನ ದರವಾಗಿರುತ್ತದೆ (Revenue Neutral Rate).

160. ಪ್ರಸ್ತುತ ಮಾರಾಟ ತೆರಿಗೆಯ ವ್ಯವಸ್ಥೆಗೆ ಹೋಲಿಸಿದ್ದಲ್ಲಿ, ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ಯಾವುದೇ ಒಂದು ಸರಕಿನ ಉತ್ಪಾದನೆ ಮತ್ತು ವಿತರಣೆ ಸರಪಣಿಯ ಪ್ರತಿ ಹಂತದ ಮೌಲ್ಯವರ್ಧನೆಯ ಮೇಲೆ ಮಾತ್ರ ತೆರಿಗೆ ವಿಧಿಸಲಾಗುವುದು. ವಾಣಿಜ್ಯ ಮತ್ತು ಉದ್ಯಮಗಳು ಮೌಲ್ಯವರ್ಧಿತ ತೆರಿಗೆಯ ಲಾಭವನ್ನು ಬಳಕೆದಾರರಿಗೆ ತಲುಪಿಸುತ್ತವೆಂದು ನಾನು ಆಶಿಸುತ್ತೇನೆ.

ಮಾರಾಟ ತೆರಿಗೆ

ತೆರಿಗೆ ವಿನಾಯಿತಿ

161. ಮಾನ್ಯರೇ, ನಾನು ಹೀಗಾಲೇ ಹೇಳಿದಂತೆ ಪೆಟ್ರೋಲ್, ಡೀಸಲ್, ವೈಮಾನಿಕ ಇಂಧನ, ಕಬ್ಬು ಮತ್ತು ಲಾಟರಿ ಟಿಕೇಟುಗಳನ್ನು ಮಾರಾಟ ತೆರಿಗೆಯಡಿಯಲ್ಲಿಯೇ ಮುಂದುವರಿಸಲು ಪ್ರಸ್ತಾವಿಸುತ್ತೇನೆ. ಪೆಟ್ರೋಲಿಯಂ ಉತ್ಪನ್ನಗಳನ್ನು ಏಕೆಂದರೆ ಅವುಗಳ ನಂತರದ ಮಾರಾಟ ಹಂತಗಳಲ್ಲಿ ಮೌಲ್ಯವರ್ಧನೆ ಇರುವುದಿಲ್ಲ, ಕಬ್ಬನ್ನು ಏಕೆಂದರೆ ಅದು ಖರೀದಿ ಹಂತದಲ್ಲಿ ತೆರಿಗೆಗೊಳಗಾಗುತ್ತದೆ ಮತ್ತು ಲಾಟರಿ ಟಿಕೇಟುಗಳನ್ನು ಏಕೆಂದರೆ, ಅವುಗಳ ತೆರಿಗೆಗೆ ಒಳಗಾಗುವ ಮೌಲ್ಯವನ್ನು ನಿಗದಿ ಮಾಡುವಲ್ಲಿರುವ ಕ್ಲಿಷ್ಟತೆ. ಮಿಕ್ಕೆಲ್ಲ ಸರಕುಗಳನ್ನು ಮಾರಾಟ ತೆರಿಗೆಯಿಂದ ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

ನೋಂದಣಿಯಿಂದ ಮತ್ತು ನೋಂದಣಿ / ನವೀಕರಣ ಶುಲ್ಕ ಪಾವತಿಯಿಂದ ವಿನಾಯಿತಿ:-

162. ಮೌಲ್ಯವರ್ಧಿತ ಅಡಿಯಡಿಯಲ್ಲಿ ನೋಂದಣಿ ಹೊಂದಬೇಕಾದ ವರ್ತಕರು ಮತ್ತು ಮಾರಾಟ ತೆರಿಗೆಗೆ ಒಳಗಾಗುವ ಸರಕುಗಳಲ್ಲಿ ವ್ಯವಹಾರ ಮಾಡದ ವರ್ತಕರುಗಳನ್ನು ಕರ್ನಾಟಕ ಮಾರಾಟ ತೆರಿಗೆ ಕಾಯಿದೆಯಡಿಯಲ್ಲಿ ಮಾಡಬೇಕಾದ ನೋಂದಣಿಯಿಂದ ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ. ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ನೋಂದಾಯಿತವಾದ ವರ್ತಕರನ್ನು ಕರ್ನಾಟಕ ಮಾರಾಟ ತೆರಿಗೆ ಕಾಯಿದೆಯಡಿಯಲ್ಲಿ ಪಾವತಿಸಬೇಕಾದ ನೋಂದಣಿ ಮತ್ತು ನವೀಕರಣ ಶುಲ್ಕದಿಂದ ಕೂಡ ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

ಪರಿಹಾರಗಳು:

163. ವಿಮಾನ ಚಾಲನೆ ತರಬೇತಿ ಶಾಲೆಗಳ ಪುನಃಶ್ಚೇತನಗೊಳಿಸಲು ಮತ್ತು ಅವುಗಳನ್ನು ಉತ್ತೇಜಿಸಲು ಅವುಗಳಿಗೆ ಮಾರಾಟ ಮಾಡುವ ವೈಮಾನಿಕ ಇಂಧನದ ಮೇಲಿನ ಮಾರಾಟ ತೆರಿಗೆಯನ್ನು ಶೇಕಡ 4ಕ್ಕೆ ಇಳಿಸಲು ನಾನು ಪ್ರಸ್ತಾವಿಸುತ್ತೇನೆ.

164. ಹೊಸ ಪ್ರಾದೇಶಿಕ ಸ್ಥಳಗಳಿಗೆ ವಿಮಾನ ಸೇವೆಯನ್ನು ನಡೆಸುತ್ತಿರುವ ಪ್ರಾದೇಶಿಕ ವಿಮಾನ ಸಂಸ್ಥೆಗಳು ಅವುಗಳ ಕಾರ್ಯಾಚರಣೆಯನ್ನು ವಿಸ್ತರಿಸಲು ಮತ್ತು ರಾಜ್ಯದ ಪ್ರಮುಖ

ಪ್ರವಾಸಿ ಮತ್ತು ಕೈಗಾರಿಕಾ ಕೇಂದ್ರಗಳಿಗೆ ವಿಮಾನ ಸೇವೆ ಸೌಲಭ್ಯ ಒದಗಿಸುವುದನ್ನು ಉತ್ತೇಜಿಸಲು ಅವುಗಳು ಉಪಯೋಗಿಸುವ ವೈಮಾನಿಕ ಇಂದನದ ಮೇಲಿನ ಮಾರಾಟ ತೆರಿಗೆಯನ್ನು ಕೂಡ ಶೇಕಡ 4ಕ್ಕೆ ಇಳಿಸಲು ನಾನು ಪ್ರಸ್ತಾವಿಸುತ್ತೇನೆ. ಮುಖ್ಯವಾಗಿ ಮೈಸೂರು, ಹುಬ್ಬಳ್ಳಿ, ಬಳ್ಳಾರಿ, ಹೊಸಪೇಟೆ, ಗುಲ್ಬರ್ಗಾ ಮತ್ತು ಬೆಳಗಾಂನಂತಹ ಸ್ಥಳಗಳಿಗೆ ಪ್ರಾದೇಶಿಕ ವಿಮಾನ ಸೇವೆ ಪ್ರಾರಂಭವನ್ನು ನಾನು ನಿರೀಕ್ಷಿಸುತ್ತೇನೆ.

ಕೇಂದ್ರ ಮಾರಾಟ ತೆರಿಗೆ:-

165. ಕೇಂದ್ರ ಮಾರಾಟ ತೆರಿಗೆ ರದ್ದತಿಯ ಕ್ರಮದ ಅಂಗವಾಗಿ 2003-2004ನೇ ವರ್ಷದಲ್ಲಿ ಕೇಂದ್ರ ಮಾರಾಟ ತೆರಿಗೆ ದರವನ್ನು ಪ್ರಸ್ತುತ ಶೇಕಡ 4 ರಿಂದ ಶೇಕಡ 2 ಕ್ಕೆ ಇಳಿಸುವುದಾಗಿ ಭಾರತ ಸರ್ಕಾರ ಪ್ರಕಟಿಸಿದೆ. ಪ್ರಸ್ತಾವಿತ ಕೇಂದ್ರ ಮಾರಾಟ ತೆರಿಗೆ ಇಳಿತದಿಂದಾಗಿ ನಮ್ಮ ರಾಜ್ಯಕ್ಕೆ ಆಗುವ ತೆರಿಗೆ ಆದಾಯ ನಷ್ಟ ಸುಮಾರು 440 ಕೋಟಿ ರೂಪಾಯಿಗಳಾಗಿರುತ್ತದೆ. ರಾಜ್ಯ ಹಣಕಾಸು ಸಚಿವರುಗಳ ಅಧಿಕಾರಯುತ ಸಮಿತಿಯೊಡನೆ ಒಮ್ಮತಕ್ಕೆ ಬಂದ ನಂತರ ಭಾರತ ಸರ್ಕಾರ, ರಾಜ್ಯಗಳಿಗೆ ಈ ಇಳಿತದಿಂದಾಗುವ ತೆರಿಗೆ ಆದಾಯ ನಷ್ಟವನ್ನು ಭರಿಸುತ್ತದೆ.

ವಿಲಾಸ ತೆರಿಗೆ:-

166. ಅಧಿಕ ಸಂಪನ್ಮೂಲ ಕ್ರೂಢೀಕರಣ ಕ್ರಮಗಳು

(i) ಪ್ರಸ್ತುತ ಲಭ್ಯವಿರುವ ವಿನಾಯಿತಿಯನ್ನು ಹಿಂತೆಗೆದುಕೊಳ್ಳುವ ಮೂಲಕ ಹೋಟೆಲ್‌ಗಳು ಮತ್ತು ಲಾಡ್ಜಿಂಗ್ ಹೌಸ್‌ಗಳು ವಸೂಲು ಮಾಡುವ ಟೆಲಿಫೋನ್ ಚಾರ್ಜ್‌ಗಳ ಮೇಲೆ ವಿಲಾಸ ತೆರಿಗೆ ವಿಧಿಸಲು, ಹಾಗೂ

(ii) ಕ್ಲಬ್‌ಗಳಲ್ಲಿ ಒದಗಿಸುವ ವಿಲಾಸ ಸೌಕರ್ಯಗಳ ಮೇಲೆ ಪ್ರತಿ ಸದಸ್ಯರಿಗೆ ವಾರ್ಷಿಕ ರೂ. 600 ಗಳ ವಿಲಾಸ ತೆರಿಗೆಯನ್ನು ವಿಧಿಸಲು, ನಾನು ಪ್ರಸ್ತಾವಿಸುತ್ತೇನೆ.

ಪರಿಹಾರಗಳು

167. ಪ್ರವಾಸಿ ಉದ್ಯಮವನ್ನು ಉತ್ತೇಜಿಸಲು ಅನುಬಂಧ - IV ರಲ್ಲಿ ತೋರಿಸಿರುವಂತೆ ಹೋಟೆಲ್‌ಗಳು ಮತ್ತು ಲಾಡ್ಜಿಂಗ್ ಹೌಸ್‌ಗಳ ಮೇಲಿನ ವಿಲಾಸ ತೆರಿಗೆ ದರಗಳನ್ನು ಇಳಿಸಲು ನಾನು ಪ್ರಸ್ತಾವಿಸುತ್ತೇನೆ.

168. ಸಮಾಜದ ಬಡ ವರ್ಗಗಳಿಗೆ ಪರಿಹಾರ ಕ್ರಮವಾಗಿ ಕಲ್ಯಾಣ ಮಂಟಪಗಳ ತೆರಿಗೆ ವಿನಾಯಿತಿ ಮಿತಿಯನ್ನು ದೈನಿಕ 2000 ರೂಪಾಯಿಗಳಿಂದ 5000 ರೂಪಾಯಿಗಳಿಗೆ ಏರಿಸಲು ನಾನು ಪ್ರಸ್ತಾವಿಸುತ್ತೇನೆ.

ವೃತ್ತಿ ತೆರಿಗೆ:-

ಸುಧಾರಣಾ ಕ್ರಮ

169. ತೆರಿಗೆ ದರಗಳ ಸರಳೀಕರಣ: ತೆರಿಗೆ ಸುಧಾರಣೆ ಆಯೋಗ ಶಿಫಾರಸ್ಸು ಮಾಡಿದಂತೆ ತೆರಿಗೆ ದರಗಳ ಸಂಸ್ಥೆಗಳನ್ನು ಮತ್ತು ಸ್ವಯಂ ವೃತ್ತಿನಿರತ ವ್ಯಕ್ತಿಗಳಿಗೆ ಸಂಬಂಧಿಸಿದ ವಿನಾಯಿತಿ ಅವಧಿಗಳನ್ನು ಅನುಬಂಧ -V ರಲ್ಲಿ ತೋರಿಸಿರುವಂತೆ ಪರಿಷ್ಕರಿಸಲು ಹಾಗೂ ತೆರಿಗೆಯನ್ನು ಮತ್ತಷ್ಟು ಸರಳಗೊಳಿಸಲು ಮತ್ತು ನ್ಯಾಯಯುತಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು

170. ನಾನು ಪ್ರಸ್ತಾಪಿಸುತ್ತೇನೆ.

(i) ಅನುಬಂಧ - VI ರಲ್ಲಿ ತೋರಿಸಿರುವ ಹೊಸ ವೃತ್ತಿಗಳ ಮೇಲೆ ತೆರಿಗೆ ವಿಧಿಸಲು, ಮತ್ತು

(ii) ವೃತ್ತಿನಿರತ ವ್ಯಕ್ತಿಗಳ ಪ್ರತಿ ಶಾಖೆಯ ಮೇಲೆ ತೆರಿಗೆ ವಿಧಿಸಲು, ನಾನು ಪ್ರಸ್ತಾವಿಸುತ್ತೇನೆ.

ಪ್ರವೇಶ ತೆರಿಗೆ

ಸುಧಾರಣೆ ಕ್ರಮಗಳು

171. ಕರ್ನಾಟಕ ಮಾರಾಟ ತೆರಿಗೆ ಕಾಯಿದೆ ಅಡಿಯಲ್ಲಿರುವ ಇಂತಹದೇ ನಿಯಮಗಳಂತೆ,

(i) ತಡೆಯಾಜ್ಞೆ ಹೊಂದಿದ ಪ್ರಕರಣಗಳಲ್ಲಿ ಮೇಲ್ಮನವಿ ವಿಲೇವಾರಿಗೆ 90 ದಿನಗಳ ಅವಧಿಯನ್ನು ಪ್ರಥಮ ಮೇಲ್ಮನವಿ ಅಧಿಕಾರಿಗಳಿಗೆ ನಿಗದಿ ಮಾಡಲು, ಹಾಗೂ

(ii) ಪ್ರಶ್ನಿತ ಮೊತ್ತದ ಶೇಕಡ 50ರ ಪ್ರಮಾಣಕ್ಕೆ ಸೀಮಿತವಾಗಿ ರಾಜ್ಯದ ಮೇಲ್ಮನವಿ ನ್ಯಾಯಾಧೀಕರಣಕ್ಕೆ ತಡೆಯಾಜ್ಞೆ ನೀಡಲು ಅಧಿಕಾರ ಮತ್ತು ಇಂತಹ ಪ್ರಕರಣಗಳ ವಿಲೇವಾರಿಗೆ 180 ದಿನಗಳ ಅವಧಿಯನ್ನು ನಿಗದಿಪಡಿಸಲು,

ನಾನು ಪ್ರಸ್ತಾವಿಸುತ್ತೇನೆ.

172. ಮಾರಾಟ ಮಾಡಿದ ಸರಕುಗಳ ಮೇಲೆ ಪ್ರವೇಶ ತೆರಿಗೆ ಪಾವತಿ ಮಾಡಿದ ಬಗ್ಗೆ ಇಲಾಖೆಯಿಂದ ಪಡೆಯಬೇಕಾದ ಪ್ರಸ್ತುತ ನಮೂನೆ-40 ರ ಬದಲಾಗಿ ವರ್ತಕರು ಸ್ವಯಂ ಮುದ್ರಿತ ಘೋಷಣಾ ಪತ್ರಗಳನ್ನು ನೀಡುವುದನ್ನು ಅನುಮತಿಸಲು ನಾನು ಪ್ರಸ್ತಾವಿಸುತ್ತೇನೆ.

173. ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯಡಿಯಲ್ಲಿ ಸರಕುಗಳ ವರ್ಗೀಕರಣ, ತೆರಿಗೆ ದರಗಳು ಮತ್ತು ವಹಿವಾಟಿನ ತೆರಿಗೆ ಭಾಧ್ಯತೆ ಬಗ್ಗೆ ಶಾಸನಬದ್ಧ ಸ್ಪಷ್ಟೀಕರಣ ನೀಡಲು ರಚಿಸಲಾಗಿರುವ ಅಪರ ಆಯುಕ್ತರುಗಳ ಸಮಿತಿಗೆ ಪ್ರವೇಶ ತೆರಿಗೆ ಕಾಯ್ದೆ ಅಡಿಯಲ್ಲಿ ಕೂಡ ಅಂತಹ ಸ್ಪಷ್ಟೀಕರಣ ನೀಡುವ ಅಧಿಕಾರವನ್ನು ಕೊಡಲು ನಾನು ಪ್ರಸ್ತಾವಿಸುತ್ತೇನೆ.

ಮನರಂಜನಾ ತೆರಿಗೆ

ಪರಿಹಾರಗಳು

174. ಕ್ರೀಡಾಕೂಟಗಳ ಪ್ರಾಯೋಜಕರನ್ನು ತೆರಿಗೆಯಿಂದ ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು

175. ವಾತಾನುಕೂಲ ಸಿನಿಮಾ ಮಂದಿರಗಳ ಮತ್ತು ಇತರೆ ಸಿನಿಮಾ ಮಂದಿರಗಳ ಮೇಲೆ ಪ್ರತಿ ಪ್ರವೇಶದ ಮೇಲೆ ಕ್ರಮವಾಗಿ ರೂ.1-00 ಮತ್ತು 50 ಪೈಸೆಗಳ ಸರ್‌ಚಾರ್ಜ್ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ.

176. ಚಲನಚಿತ್ರಗಳ ಮೇಲಿನ ತೆರಿಗೆಗೆ ಹೋಲಿಸಿದಲ್ಲಿ ಕೇಬಲ್ ಮತ್ತು ಸ್ಯಾಟಿಲೈಟ್ ಟಿ.ವಿ. ಆಪರೇಟರುಗಳ ಮೇಲಿರುವ ಪ್ರಸ್ತುತ ತೆರಿಗೆ ರಾಜಿ ಮೊತ್ತಗಳು ಕಡಿಮೆ ಇದ್ದು, ಅವುಗಳನ್ನು ಅನುಬಂಧ- VII ರಲ್ಲಿ ತೋರಿಸಿರುವಂತೆ ಪರಿಷ್ಕರಿಸಲು ನಾನು ಪ್ರಸ್ತಾವಿಸುತ್ತೇನೆ.

ಜೂಜು ತೆರಿಗೆ

177. ಕುದುರೆ ರೇಸ್‌ಗಳಿಗೆ ಸಂಬಂಧಿಸಿದ ರಾಜಿ ತೆರಿಗೆ ಮೊತ್ತಗಳನ್ನು ಅನುಬಂಧ-VIIIರಲ್ಲಿ ತೋರಿಸಿರುವಂತೆ ಪರಿಷ್ಕರಿಸಲು ನಾನು ಪ್ರಸ್ತಾಪಿಸುತ್ತೇನೆ.

178. ಲಾಟರಿ ಟಿಕೇಟ್‌ಗಳು ಮೇಲಿನ ಪ್ರಸ್ತುತ ಮಾರಾಟ ತೆರಿಗೆ ನಿರೀಕ್ಷಿತ ಮಟ್ಟದಲ್ಲಿ ತೆರಿಗೆ ಆದಾಯವನ್ನು ತರದೆ ಇದ್ದು, ಹೊಸ ಕಾಯಿದೆಯನ್ನು ತರುವುದರ ಮೂಲಕ ಲಾಟರಿಗಳ ಮೇಲೆ ಒಂದು ಹೆಚ್ಚಿನ ಪರಿಣಾಮಕಾರಿ ಜೂಜು ತೆರಿಗೆಯನ್ನು ವಿಧಿಸಲು ನಾನು ಪ್ರಸ್ತಾವಿಸುತ್ತೇನೆ.

ಕೃಷಿ ವರಮಾನ ತೆರಿಗೆ

ಪರಿಹಾರ

179. ಸದ್ಯದ ಬರಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು 2002-03ನೇ ಸಾಲಿನಲ್ಲಿ ನಾನು ಕೃಷಿ ವರಮಾನ ತೆರಿಗೆಯಲ್ಲಿ ಪ್ರಕಟಿಸಿದ ರಿಯಾಯಿತಿಗಳನ್ನು 2003-2004 ಸಾಲಿನಲ್ಲಿಯೂ ಕೂಡ ಮುಂದುವರಿಸಲು ನಾನು ಪ್ರಸ್ತಾವಿಸುತ್ತೇನೆ.

ತತ್‌ಪರಿಣಾಮದ ತಿದ್ದುಪಡಿಗಳು

180. ಮೇಲಿನ ಪ್ರಸ್ತಾವಿತ ಕ್ರಮಗಳನ್ನು ಜಾರಿ ತರಲು ಸಂಬಂಧಪಟ್ಟ ತೆರಿಗೆ ಕಾಯಿದೆಗಳಿಗೆ ತಿದ್ದುಪಡಿಗಳನ್ನು ಮಾಡುವ ಅವಶ್ಯಕತೆ ಇರುತ್ತದೆ. ಸುಧಾರಣೆ ತರುವ ಇತರ ತಿದ್ದುಪಡಿಗಳೊಂದಿಗೆ, ಈ ತಿದ್ದುಪಡಿಗಳನ್ನು ಸದನದ ಮುಂದಿಡಲಾಗುವುದು.

ಅಬಕಾರಿ

181. ಕ್ಯಾಂಟೀನ್ ಸ್ಟೋರ್ಸ್ ಡಿಪಾರ್ಟ್‌ಮೆಂಟ್‌ಗೆ ಸರಬರಾಜು ಮಾಡುವ ಮದ್ಯದ ಮೇಲೆ ಪ್ರಸ್ತುತ ವಿಧಿಸುತ್ತಿರುವ ಬಲ್ಕ್ ಲೀಟರಿಗೆ ಇಪ್ಪತ್ತು ರೂಪಾಯಿಗಳಿಗೆ ಬದಲಾಗಿ, ನಲವತ್ತು ರೂಪಾಯಿ ಅಬಕಾರಿ ಶುಲ್ಕವನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ.

182. ಅದೇ ರೀತಿ ಕ್ಯಾಂಟೀನ್ ಸ್ಟೋರ್ಸ್ ಡಿಪಾರ್ಟ್‌ಮೆಂಟ್‌ಗೆ ಸರಬರಾಜು ಮಾಡುವ, ಒಂದು ಪೆಟ್ಟಿಗೆಗೆ 351 ರೂಪಾಯಿಗಳು ಹಾಗೂ ಅದಕ್ಕೂ ಹೆಚ್ಚಿನ ಮೂಲ ಬೆಲೆಯ ಮದ್ಯದ ಮೇಲೆ ಬಲ್ಕ್ ಲೀಟರಿಗೆ 15 ರೂಪಾಯಿ ಲೀಟರ್ ಫೀಯನ್ನು ವಿಧಿಸಲು ಸಹಾ ಪ್ರಸ್ತಾಪಿಸುತ್ತೇನೆ.

183. ಅಧಿಕ ಅಬಕಾರಿ ಶುಲ್ಕವನ್ನು ವಿಧಿಸುವ ಉದ್ದೇಶಕ್ಕಾಗಿ, ಫೆನ್ನಿ, ಬಿಯರ್ ಮತ್ತು ವೈನ್‌ಗಳ ಹೊರತಾಗಿ ಉಳಿದ ಮದ್ಯಗಳ ಕನಿಷ್ಠ ಮೂಲ ಬೆಲೆಯನ್ನು ಒಂದು ಪೆಟ್ಟಿಗೆಗೆ ಮುನ್ನೂರ ಐವತ್ತು ರೂಪಾಯಿಗಳಿಗೆ ಹೆಚ್ಚಿಸಲು ಮತ್ತು ತತ್ಪರಿಣಾಮವಾಗಿ ಕನಿಷ್ಠ ಅಧಿಕ ಅಬಕಾರಿ ಶುಲ್ಕವನ್ನು ಬಲ್ಕ್ ಲೀಟರಿಗೆ ರೂ. 130ರಂತೆ ವಿಧಿಸಲು ಪ್ರಸ್ತಾವಿಸುತ್ತೇನೆ.

184. ರಫ್ತು ಮಾಡುವ ಮದ್ಯದ ಮೇಲಿನ ಶುಲ್ಕವನ್ನು ಸುವ್ಯವಸ್ಥೆಗೊಳಿಸುವ ದೃಷ್ಟಿಯಿಂದ, ಭಾರತೀಯ ಮದ್ಯಗಳ ಮೇಲಿನ ರಫ್ತು ಶುಲ್ಕವನ್ನು ಪ್ರತಿ ಬಲ್ಕ್ ಲೀಟರಿಗೆ ಈಗ ಇರುವ ಎರಡು ರೂಪಾಯಿ ಐವತ್ತು ಪೈಸೆಗಳಿಂದ ಪ್ರತಿ ಬಲ್ಕ್ ಲೀಟರಿಗೆ ಮೂರು ರೂಪಾಯಿ ಐವತ್ತು ಪೈಸೆಗಳಿಗೆ, ಮತ್ತು ಬಿಯರ್ ಮೇಲೆ ಈಗ ಇರುವ ಐವತ್ತು ಪೈಸೆಗಳಿಂದ ಬಲ್ಕ್ ಲೀಟರಿಗೆ ಒಂದು ರೂಪಾಯಿಗೆ ಹೆಚ್ಚಿಸಲು ಪ್ರಸ್ತಾವಿಸುತ್ತೇನೆ.

185. ಆಯಿಲ್ ಕಂಪೆನಿಗಳಿಗೆ ಪೆಟ್ರೋಲ್‌ನೊಂದಿಗೆ ಮಿಶ್ರಣ ಮಾಡಲು ಸರಬರಾಜು ಮಾಡುವ ಡಿನೇಚರ್ಡ್ ಅನ್‌ಹೈಡ್ರಸ್ ಆಲ್ಕೋಹಾಲ್ ಮೇಲಿನ ಶುಲ್ಕವನ್ನು ಬಲ್ಕ್ ಲೀಟರಿಗೆ ಎರಡು ರೂಪಾಯಿಗಳಂತೆ ವಿಧಿಸಲು ಪ್ರಸ್ತಾವಿಸುತ್ತೇನೆ.

186. ಈ ಮೇಲಿನ ಪ್ರಸ್ತಾವಗಳು 1ನೇ ಏಪ್ರಿಲ್ 2003 ರಿಂದ ಜಾರಿಗೆ ಬರುತ್ತವೆ.

187. ಡಿಸ್ಟಿಲರಿ, ಬ್ರೀವರಿ ಮತ್ತು ವೈನರಿಗಳನ್ನು, ಲೈಸನ್ಸುದಾರರು ಬೇರೆಯವರಿಗೆ ಉಪ-ಗುತ್ತಿಗೆ ನೀಡುವುದಕ್ಕೆ, ಅನುಮತಿಯನ್ನು ನೀಡುವ ಸಂದರ್ಭದಲ್ಲಿ ಹಾಗೂ ತದನಂತರ ಪ್ರತಿ ವರ್ಷ ಅಂತಹ ಲೈಸನ್ಸುಗಳನ್ನು ನವೀಕರಿಸುವ ಸಂದರ್ಭದಲ್ಲಿ ಡಿಸ್ಟಿಲರಿ, ಬ್ರೀವರಿ, ವೈನರಿಗಳಿಗೆ ವಿಧಿಸುವ ಲೈಸನ್ಸ್ ಶುಲ್ಕದ ಶೇಕಡಾ 10 ರಷ್ಟು ಶುಲ್ಕವನ್ನು ವಿಧಿಸಲು ಪ್ರಸ್ತಾವಿಸುತ್ತೇನೆ.

188. ಚಿಲ್ಲರೆಯಾಗಿ ಮದ್ಯವನ್ನು ಮಾರಾಟ ಮಾಡುವುದಕ್ಕಾಗಿ ಸರ್ಕಾರಿ ಸ್ವಾಮ್ಯದ ಕಂಪೆನಿಗಳಿಗೆ ಮಾತ್ರ ನೀಡಬಹುದಾದ ಲೈಸನ್ಸುಗಳ ಒಂದು ವಿಶೇಷ ಪ್ರವರ್ಗವನ್ನು ಕಲ್ಪಿಸಲು ಹಾಗೂ ಅಂಥ ಸನ್ನದುಗಳನ್ನು ಸಂಬಂಧಿಸಿದ ಸರ್ಕಾರಿ ಕಂಪನಿಗಳೇ ನಿರ್ವಹಿಸುವಂತೆ ಮತ್ತು ಬೇರೆಯವರಿಗೆ ವರ್ಗಾಯಿಸಕೂಡದು ಅಥವಾ ಉಪ-ಗುತ್ತಿಗೆ ನೀಡಕೂಡದು ಎಂಬ ಷರತ್ತಿನೊಂದಿಗೆ ನೀಡಲು ಪ್ರಸ್ತಾವಿಸುತ್ತೇನೆ. ಈ ಪ್ರವರ್ಗದ ಲೈಸನ್ಸುಗಳ ಅಡಿಯಲ್ಲಿ, ಲೈಸನ್ಸು ಹೊಂದಿದ ಸ್ಥಳದಲ್ಲಿ ಮದ್ಯವನ್ನು ಕುಡಿಯಲು ಅವಕಾಶವಿರುವುದಿಲ್ಲ. ಇಂತಹ ಲೈಸನ್ಸುಗಳಿಗೆ ಲೈಸನ್ಸು ಶುಲ್ಕ ವಾರ್ಷಿಕ ಒಂದು ಲಕ್ಷ ರೂಪಾಯಿಗಳಾಗಿರುತ್ತದೆ.

189. 180 ಎಂ.ಎಲ್.ಗಿಂತ ಚಿಕ್ಕ ಗಾತ್ರದ ಸೀಸೆಗಳಲ್ಲಿ ಮದ್ಯವನ್ನು ಬಾಟಲು ಮಾಡಲು ವಿಶೇಷ ಅನುಮತಿಯನ್ನು ನೀಡುವುದಕ್ಕಾಗಿ ಒಂದು ಲಕ್ಷ ರೂಪಾಯಿಗಳ ವಿಶೇಷ ಶುಲ್ಕವನ್ನು ವಿಧಿಸಲು ಪ್ರಸ್ತಾವಿಸುತ್ತೇನೆ.

190. ಇಪ್ಪತ್ತು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುವ ಸಿಟಿ ಮುನಿಸಿಪಲ್ ಕಾರ್ಪೋರೇಷನ್ ಪ್ರದೇಶಗಳಲ್ಲಿರುವ ಸಗಟು ಮದ್ಯದ ಅಂಗಡಿಗಳ ಲೈಸನ್ಸಿನ ಮೇಲೆ ವಿಧಿಸುವ ಲೈಸನ್ಸು ಶುಲ್ಕವನ್ನು ವಾರ್ಷಿಕ ಎಂಟು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳಿಂದ ವಾರ್ಷಿಕ ಏಳು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಇಳಿಸಲು ಮತ್ತು ಉಳಿದ ಪ್ರದೇಶಗಳಲ್ಲಿರುವ ಸಗಟು ಮದ್ಯದ ಅಂಗಡಿಗಳ ಲೈಸನ್ಸು ಶುಲ್ಕವನ್ನು, ವಾರ್ಷಿಕ ಆರು ಲಕ್ಷದ ಎಪ್ಪತ್ತೈದು ಸಾವಿರ ರೂಪಾಯಿಗಳಿಂದ ಐದು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿಗಳಿಗೆ ಇಳಿಸಲು ಪ್ರಸ್ತಾವಿಸುತ್ತೇನೆ.

191. ಟೌನ್ ಮುನಿಸಿಪಲ್ ಕೌನ್ಸಿಲ್ ಮತ್ತು ಟೌನ್ ಪಂಚಾಯತ್ ಪ್ರದೇಶಗಳಲ್ಲಿರುವ ಕ್ಲಬ್‌ಗಳ ಮೇಲಿನ ಲೈಸನ್ಸು ಶುಲ್ಕವನ್ನು ವಾರ್ಷಿಕ 70,000 ರೂಪಾಯಿಗಳಿಂದ 60,000 ರೂಪಾಯಿಗಳಿಗೆ ಇಳಿಸಲು ಮತ್ತು ಉಳಿದ ಗ್ರಾಮಾಂತರ ಪ್ರದೇಶಗಳಲ್ಲಿರುವ ಕ್ಲಬ್‌ಗಳ ಮೇಲಿನ ಶುಲ್ಕವನ್ನು ವಾರ್ಷಿಕ 60,000 ರೂಪಾಯಿಗಳಿಂದ 50,000 ರೂಪಾಯಿಗಳಿಗೆ ಇಳಿಸಲು ಸಹಾ ಪ್ರಸ್ತಾವಿಸುತ್ತೇನೆ.

192. ಪ್ರಸ್ತುತ ಭಾರತೀಯ ಮದ್ಯವನ್ನು ಮಾರಾಟ ಮಾಡಲು ಲೈಸನ್ಸು ನೀಡಿರುವ ಲೈಸನ್ಸುದಾರರಿಗೆ ಲೈಸನ್ಸು ಶುಲ್ಕದ ಶೇಕಡಾ 10ರಷ್ಟು ಹೆಚ್ಚುವರಿ ಲೈಸನ್ಸು ಶುಲ್ಕವನ್ನು ಪಡೆದು ವಿದೇಶಿ ಮದ್ಯ (ಭಾರತದ ಹೊರಗಿನಿಂದ ಆಮದು ಮಾಡಿಕೊಂಡಂತಹ) ವನ್ನು ಮಾರಾಟ

ಮಾಡಲು ಅನುಮತಿ ನೀಡಲಾಗುತ್ತಿದೆ. ಸಗಟು ಮದ್ಯ ಮಾರಾಟಗಾರರಿಗೆ (ಸಿಎಲ್-1) 25,000 ರೂಪಾಯಿಗಳು, ಕ್ಲಬ್‌ಗಳಿಗೆ (ಸಿಎಲ್-4) 5,000 ರೂಪಾಯಿಗಳು ಹಾಗೂ ಕರ್ನಾಟಕ ಅಬಕಾರಿ (ಭಾರತೀಯ ಹಾಗೂ ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರಡಿಯಲ್ಲಿ ಉಳಿದ ಲೈಸನ್ಸು ಪಡೆದಿರುವವರಿಗೆ 10,000 ರೂಪಾಯಿಗಳನ್ನು ಹೆಚ್ಚುವರಿ ಲೈಸನ್ಸು ಶುಲ್ಕವಾಗಿ ವಿಧಿಸಿ ವಿದೇಶಿ ಮದ್ಯ (ಭಾರತದ ಹೊರಗಿನಿಂದ ಆಮದು ಮಾಡಿಕೊಂಡಂತಹ) ವನ್ನು ಮಾರಾಟ ಮಾಡಲು ಅನುಮತಿ ನೀಡಲು ಪ್ರಸ್ತಾವಿಸುತ್ತೇನೆ.

193. ಈ ಮೇಲಿನ ಪ್ರಸ್ತಾವಗಳು 1ನೇ ಜುಲೈ 2003 ರಿಂದ ಜಾರಿಗೆ ಬರುತ್ತವೆ.

194. ರೆಕ್ಟಿಫೈಡ್ ಸ್ಪಿರಿಟ್ ಮತ್ತು ಡಿನೇಚರ್ಡ್ ಸ್ಪಿರಿಟ್‌ಗಳು ಸದುಪಯೋಗವಾಗುವುದನ್ನು ದೃಢಪಡಿಸಿಕೊಳ್ಳಲು, ಕೈಗಾರಿಕಾ ಘಟಕಗಳು ಮತ್ತು ಔಷಧ ತಯಾರಿಕಾ ಘಟಕಗಳಿಗೆ ಬೇಕಾದ ಎಲ್ಲಾ ರೆಕ್ಟಿಫೈಡ್ ಸ್ಪಿರಿಟ್ ಮತ್ತು ಡಿನೇಚರ್ಡ್ ಸ್ಪಿರಿಟ್‌ಗಳನ್ನು ಸರ್ಕಾರಿ ಸಂಸ್ಥೆಗಳ ಉಗ್ರಾಣಗಳ ಮುಖಾಂತರ ಸರಬರಾಜು ಮಾಡಲು ಪ್ರಸ್ತಾವಿಸುತ್ತೇನೆ. ಅದಕ್ಕಾಗಿ ಸರ್ಕಾರಿ ಸಂಸ್ಥೆಗಳು ರೆಕ್ಟಿಫೈಡ್ ಸ್ಪಿರಿಟ್ ಮತ್ತು ಡಿನೇಚರ್ಡ್ ಸ್ಪಿರಿಟ್‌ಗಳನ್ನು ಕೊಂಡುಕೊಳ್ಳಲು ಮತ್ತು ರಾಜ್ಯದಲ್ಲಿರುವ ಕೈಗಾರಿಕಾ ಘಟಕಗಳು ಮತ್ತು ಔಷಧ ತಯಾರಿಕಾ ಘಟಕಗಳಿಗೆ ಮಾರಾಟ ಮಾಡಲು ಉಗ್ರಾಣದ ಲೈಸನ್ಸುಗಳನ್ನು ನೀಡಲಾಗುತ್ತದೆ.

195. ಮುಟ್ಟುಗೋಲು ಹಾಕಿಕೊಂಡ ಮದ್ಯವನ್ನು, ಸರ್ಕಾರಿ ಕಂಪನಿಗಳಿಗೆ, ಅಂತಹ ಮದ್ಯವನ್ನು ಲೈಸನ್ಸುದಾರರಿಗೆ ಮಾರಾಟ ಮಾಡುವ ಸಮಯದಲ್ಲಿ ಅಬಕಾರಿ ಶುಲ್ಕ, ಅಧಿಕ ಅಬಕಾರಿ ಶುಲ್ಕ ಹಾಗೂ ಲೀಟರ್ ಫೀಗಳನ್ನು ಸರ್ಕಾರಕ್ಕೆ ಪಾವತಿ ಮಾಡುವ ಷರತ್ತಿಗೆ ಒಳಪಟ್ಟು ಉಚಿತವಾಗಿ ನೀಡಲು ಪ್ರಸ್ತಾವಿಸುತ್ತೇನೆ.

196. ಜಾರಿಗೊಳಿಸುವಿಕೆಯನ್ನು ಬಲಪಡಿಸುವ ದೃಷ್ಟಿಯಿಂದ ಡಿಸ್ಟಿಲರಿ/ಬ್ರೀವರಿ ಮತ್ತು ಅಬಕಾರಿ ಉಗ್ರಾಣಗಳ ಪ್ರಮುಖ ನಿರ್ವಹಣಾ ಕ್ಷೇತ್ರಗಳ ತಪಾಸಣೆಯನ್ನು ಸ್ವತಂತ್ರ ಸಂಸ್ಥೆಯಿಂದ ಕೈಗೊಳ್ಳಲು ಪ್ರಸ್ತಾವಿಸುತ್ತೇನೆ.

ನೋಂದಣಿ ಮತ್ತು ಮುದ್ರಾಂಕ

197. ನನ್ನ ಸರ್ಕಾರ ಆರಂಭಿಸಿರುವ ತೆರಿಗೆ ಸುಧಾರಣೆಗಳನ್ನು ಮುಂದುವರಿಸುತ್ತಾ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವನ್ನು ಸರಳೀಕರಣಗೊಳಿಸಲು ನಾನು ಪ್ರಸ್ತಾಪಿಸಿರುತ್ತೇನೆ. ಇದನ್ನು ತೆರಿಗೆ ಸುಧಾರಣಾ ಆಯೋಗವು ಶಿಫಾರಸ್ಸು ಮಾಡಿದಂತೆ ನಾನು ಉದ್ಧರಿಸುತ್ತೇನೆ. "ಆಯೋಗವು ಶಿಫಾರಸ್ಸು ಮಾಡಿದಂತೆ ಈಗಿರುವ ಅಸಮಾನತೆಯನ್ನು ತೊಡೆದು ಹಾಕಿ ಸಮತಲ ಸಮಾನತೆಯನ್ನು ಪರಿಣಾಮಕಾರಿಯಾಗಿ ತರುವುದಕ್ಕೋಸ್ಕರ ಹಸ್ತಾಂತರ ವ್ಯವಹಾರಗಳಿಗೆ ಶುಲ್ಕವನ್ನು (ಅಧಿಭಾರ ಶುಲ್ಕ, ಅಧಿಕ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ) ಮಾರುಕಟ್ಟೆ ಮೌಲ್ಯದ ಮೇಲೆ ಎಲ್ಲಾ ಪ್ರದೇಶಗಳಿಗೆ ಏಕ ರೀತಿಯಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ ಅನ್ವಯವಾಗುವಂತೆ ಶೇಕಡ 9 ಕ್ಕೆ ಮಿತಿಗೊಳಿಸಲು ಶಿಫಾರಸ್ಸು ಮಾಡಿದೆ".

198. ಮಾನ್ಯರೇ, ಈ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ, ನಾನು ಬೆಂಗಳೂರು ನಗರ ಪ್ರದೇಶಗಳ ವ್ಯಾಪ್ತಿಗೆ ಒಳಪಟ್ಟ ಆಸ್ತಿಯ ಮೇಲೆ ಈಗಿರುವ ಮುದ್ರಾಂಕ ಶುಲ್ಕವನ್ನು ಶೇಕಡ 10 ರಿಂದ ಶೇಕಡ 8 ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ. ಅದೇ ರೀತಿ

ನಗರ ಸಭೆ ಅಥವಾ ಉಳಿದ ಮುನಿಸಿಪಲ್ ಸ್ಥಳಗಳಲ್ಲಿ ಅಥವಾ ನಗರ ಪಂಚಾಯಿತಿಗಳಲ್ಲಿನ ಆಸ್ತಿಗಳಿಗೆ ಅಂದರೆ ಬಿ.ಎಂ.ಆರ್.ಡಿ. ಪ್ರದೇಶಗಳನ್ನು ಹೊರತುಪಡಿಸಿ ಈಗಿರುವ ಮುದ್ರಾಂಕ ಶುಲ್ಕವನ್ನು ಶೇಕಡ 9 ರಿಂದ ಶೇಕಡ 8 ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ. ಕರ್ನಾಟಕ ಮುದ್ರಾಂಕ ಕಾಯ್ದೆ 1957ನ್ನು ಸೂಕ್ತವಾಗಿ ಇದಕ್ಕೆ ತಿದ್ದುಪಡಿ ಮಾಡಲಾಗುವುದು.

199. ಅದೇ ರೀತಿ ನೋಂದಣಿ ಶುಲ್ಕವನ್ನು ಸಹ ಶೇಕಡ 2 ರಿಂದ ಶೇಕಡ 1 ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ.

200. 1964 ರ ಕರ್ನಾಟಕದ ಮುನಿಸಿಪಲ್ ಕಾಯ್ದೆಯ ಸೆಕ್ಷನ್ 99 ರಲ್ಲಿ ಪ್ರಸ್ತುತ ಇರುವಂತೆ ಮುನಿಸಿಪಲ್ ಕಾರ್ಪೊರೇಷನ್ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಈಗ ವಸೂಲು ಮಾಡಲಾಗುತ್ತಿರುವ ಶೇಕಡ 2 ಮತ್ತು ಶೇಕಡ 3 ರಷ್ಟು ಅಧಿಕ ಮುದ್ರಾಂಕ ಶುಲ್ಕವನ್ನು ಇನ್ನು ಮುಂದೆ ಮುದ್ರಾಂಕ ಶುಲ್ಕದ ಮೇಲೆ ಅಧಿಭಾರ ಶುಲ್ಕವನ್ನಾಗಿ ಅದೇ ದರದಲ್ಲಿ ವಸೂಲು ಮಾಡಲು ಪ್ರಸ್ತಾಪಿಸುತ್ತೇನೆ. ಸಂಬಂಧಿಸಿದ ಕಾಯ್ದೆಗಳಿಗೆ ಈ ಬಗ್ಗೆ ತಿದ್ದುಪಡಿ ತರಲಾಗುವುದು.

201. ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಮಾಡುವ, ಈ ಪ್ರಗತಿಪರ ಕ್ರಮ, ನನ್ನ ಸರ್ಕಾರ ಸಾಮಾನ್ಯ ಸಾರ್ವಜನಿಕರಿಗೆ ಉತ್ತಮ ಸೇವೆ ಮತ್ತು ಒಳ್ಳೆಯ ಆಡಳಿತವನ್ನು ನೀಡುವ ದಿಸೆಯಲ್ಲಿ ಇನ್ನೊಂದು ಹೆಜ್ಜೆಯಾಗಿರುತ್ತದೆ. ಈ ಕ್ರಮದಿಂದ ಸಾರ್ವಜನಿಕರು ಮಾರುಕಟ್ಟೆ ಬೆಲೆಯನ್ನು ದಸ್ತಾವೇಜುಗಳಲ್ಲಿ ಸರಿಯಾಗಿ ನಮೂದಿಸುವುದಕ್ಕೆ ಪ್ರೋತ್ಸಾಹ ನೀಡಿದಂತಾಗುತ್ತದೆ ಹಾಗೂ ಸಾರ್ವಜನಿಕರು ಆಸ್ತಿ ವ್ಯವಹಾರದಲ್ಲಿ ಭರಿಸಬೇಕಾದ ಶುಲ್ಕವನ್ನು ತಪ್ಪಿಸಿಕೊಳ್ಳುವುದು ಕಡಿಮೆಯಾಗುತ್ತದೆ.

202. ಮುದ್ರಾಂಕ ಶುಲ್ಕದ ವಿನ್ಯಾಸ ಸರಳೀಕರಣವನ್ನು ಪ್ರಭಾವಶಾಲಿಯಾಗಿ ಜಾರಿಗೆ ತರುವುದಕ್ಕಾಗಿ ಹಾಗೂ ಭರಿಸಬೇಕಾದ ಶುಲ್ಕವನ್ನು ತಪ್ಪಿಸಿಕೊಳ್ಳುವ ಪ್ರವೃತ್ತಿಯನ್ನು ತಡೆಯುವಲ್ಲಿ ಸಫಲವಾಗಲು ರಾಜ್ಯದಾದ್ಯಂತ ಮಾರುಕಟ್ಟೆ ಬೆಲೆಯನ್ನು ನಿಗಧಿಪಡಿಸಲು, ಪ್ರಕಟಿಸಲು ಮತ್ತು ಪರಿಷ್ಕರಿಸಲು ಮುದ್ರಾಂಕಗಳ ಆಯುಕ್ತರನ್ನು ಒಳಗೊಂಡ ಕೇಂದ್ರ ಮಾರುಕಟ್ಟೆ ಮೌಲ್ಯ ಸಮಿತಿಯನ್ನು ರಚಿಸಲು ನಾನು ಪ್ರಸ್ತಾಪಿಸುತ್ತೇನೆ.

203. ಈ ಕೇಂದ್ರ ಮಾರುಕಟ್ಟೆ ಮೌಲ್ಯ ಸಮಿತಿಯು ರಾಜ್ಯದಾದ್ಯಂತ ಮಾರುಕಟ್ಟೆ ಮೌಲ್ಯವನ್ನು ವೈಜ್ಞಾನಿಕವಾಗಿ ನಿರ್ಧರಿಸುವ ಜವಾಬ್ದಾರಿ ಹೊಂದಿರುತ್ತದೆ. ಇದರಿಂದ ರಾಜ್ಯದಲ್ಲಿ ಆಗುವ ಆಸ್ತಿಯಲ್ಲಿನ ದರಗಳಿಗೆ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳನ್ನು ನಿರ್ಣಯಿಸಲು ಸರಿಯಾದ ನೀತಿಯನ್ನು ಕ್ರಮಬದ್ಧವಾಗಿ ರಚಿಸಲು ಹಾಗೂ ಆಡಳಿತ ಮಾಡಲು ಸಾಧ್ಯವಾಗುತ್ತದೆ.

204. ಈ ಸಮಿತಿಯು ಮಾರುಕಟ್ಟೆ ಬೆಲೆಗಳ ನಿರ್ಧಾರದಲ್ಲಿ ಇರುವ ಅಸಮಾನತೆಗಳನ್ನು ಸರಿಪಡಿಸಲು ಸಹ ಉದ್ದೇಶವಿರುತ್ತದೆ. ಇದರಿಂದ ಈಗ ಬೆಂಗಳೂರು ಮತ್ತು ಇತರ ಕೆಲವು ನಗರಗಳಿಗೆ ಮಿತವಾಗಿರುವ ತೆರಿಗೆ ಆಧಾರವನ್ನು ವಿಸ್ತರಿಸಲು ಸಾಧ್ಯವಾಗುತ್ತದೆ.

205. ದಿನಾಂಕ 1-4-2003 ರಿಂದ ಜಾರಿಯಾಗುವಂತೆ ನ್ಯಾಯಿಕ ಮತ್ತು ನ್ಯಾಯಿಕೇತರ ಮುದ್ರಾಂಕ ಕಾಗದಗಳ ಉಪಯೋಗವನ್ನು ಮುಂದುವರಿಸದಿರಲು ಪ್ರಸ್ತಾಪಿಸುತ್ತೇನೆ. ಇದರಿಂದ ನಕಲಿ ಛಾಪಾ ಕಾಗದಗಳ ಮತ್ತು ಮುದ್ರಾಂಕಗಳ ಮಾರಾಟವನ್ನು ನಿಲ್ಲಿಸಲಾಗುವುದು.

206. ಸಾರ್ವಜನಿಕ ಕಛೇರಿಗಳಲ್ಲಿ ಅರ್ಜಿಗಳಿಗಾಗಿ ಲಗತ್ತಿಸಬೇಕಾದ ರೂ. 10/- ರವರೆಗಿನ ನ್ಯಾಯಿಕ ಅರ್ಜಿ ಶುಲ್ಕವನ್ನು ಮನ್ನಾ ಮಾಡಲು ಪ್ರಸ್ತಾಪಿಸುತ್ತೇನೆ.

207. ಇದಕ್ಕಾಗಿ ಕರ್ನಾಟಕ ಕೋರ್ಟ್ ಫೀ ಮತ್ತು ಸೂಟ್ಸ್ ವ್ಯಾಲ್ಯುಯೇಷನ್ ಕಾಯ್ದೆ, 1958 ಕ್ಕೆ ಸೂಕ್ತ ತಿದ್ದುಪಡಿ ತರಲಾಗುವುದು.

208. ಅಡಮಾನ ಪತ್ರಗಳಿಗೆ ಈಗಿನಂತೆ ಇರುವ ಮುದ್ರಾಂಕ ಶುಲ್ಕವನ್ನು ಶೇಕಡ 3 ರಿಂದ ಶೇಕಡ 0.5 ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ.

209. ಸ್ಥಿರಾಸ್ತಿಗಳ ವಹಿವಾಟಕ್ಕಾಗಿ ಬರೆದುಕೊಡುವ ಜನರಲ್ ಪವರ್ ಆಫ್ ಅಟಾರ್ನಿ ಪತ್ರಗಳಿಗೆ ಮುದ್ರಾಂಕ ಶುಲ್ಕವನ್ನು ಶೇಕಡ 2 ರಿಂದ ಶೇಕಡ 8ಕ್ಕೆ ಹಸ್ತಾಂತರ ಪತ್ರಗಳಂತೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ.

210. ಅಪಾರ್ಟ್‌ಮೆಂಟ್‌ಗಳ ಕ್ರಯಪತ್ರಗಳನ್ನು ನೋಂದಾಯಿಸಲು ಈಗಿರುವ ವಿವಿಧ ದರಗಳ ಬದಲಿಗೆ ಒಂದೇ ರೀತಿಯಲ್ಲಿ ಶೇಕಡ 8 ರಷ್ಟು ಮುದ್ರಾಂಕ ಶುಲ್ಕವನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ.

211. ಗೃಹ ನಿರ್ಮಾಣ ಸಹಕಾರ ಸಂಘಗಳು 31 ಮಾರ್ಚ್ 2001ರ ಹಿಂದೆ ಬರೆದುಕೊಟ್ಟ ಆಸ್ತಿಯ ಬಾಡಿಗೆ ಮತ್ತು ಕ್ರಯದ ಕರಾರು ಪತ್ರದ ಆಧಾರದ ಮೇಲೆ ಬರೆದುಕೊಟ್ಟ ಕ್ರಯಪತ್ರಗಳಿಗೆ ಬಾಡಿಗೆ ಮತ್ತು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟ ದಿನಾಂಕದಂದು ಇರುವಂಥಹ ಆಸ್ತಿಯ ಮಾರುಕಟ್ಟೆ ಮೌಲ್ಯದಂತೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ.

212. ಮೇಲ್ಕಂಡಂತೆ ಸ್ಟಾಂಪ್ ಮತ್ತು ನೋಂದಣಿ ಶುಲ್ಕಗಳ ಸರಳೀಕರಣದ ಪ್ರಯುಕ್ತ ವಿವಿಧ ನೀತಿಗಳಡಿಯಲ್ಲಿ ನೀಡಿದ ಮುದ್ರಾಂಕ ಶುಲ್ಕ ವಿನಾಯಿತಿ, ರಿಯಾಯಿತಿಗಳು ಹಾಗೂ ನೋಂದಣಿ ಶುಲ್ಕ ರಿಯಾಯಿತಿ ವಿನಾಯಿತಿಗಳನ್ನು 1ನೇ ಏಪ್ರಿಲ್ 2003ರಿಂದ ಹಿಂತೆಗೆದುಕೊಳ್ಳಲು ಪ್ರಸ್ತಾಪಿಸುತ್ತೇನೆ.

213. ಈ ಎಲ್ಲಾ ಶುಲ್ಕ ಸರಳೀಕರಣದ ವಿವರಗಳನ್ನು ಅನುಬಂಧ-IX ಮತ್ತು X ರಲ್ಲಿ ತೋರಿಸಲಾಗಿದೆ.

ಮೋಟಾರು ವಾಹನಗಳ ತೆರಿಗೆ

214. ಸಾರಿಗೆ ಕ್ಷೇತ್ರದಲ್ಲಿ ನಿರಂತರವಾಗಿ ಹೆಚ್ಚುತ್ತಿರುವ ಬೇಡಿಕೆಗೆ ಅನುಗುಣವಾಗಿ ಸಾರಿಗೆ ಸೌಲಭ್ಯದ ವ್ಯವಸ್ಥೆ ಇಲ್ಲದಿರುವುದು ಶೋಚನೀಯವಾದ ಪ್ರಮುಖ ಸಮಸ್ಯೆಯಾಗಿದೆ. ಈ ಬೇಡಿಕೆ ಮತ್ತು ಪೂರೈಕೆಯ ಅಸಮತೋಲನದಿಂದಾಗಿ ಸಾಮಾನ್ಯ ನಾಗರೀಕನು ಗಣನೀಯ ತೊಂದರೆ ಮತ್ತು ಅನಾನುಕೂಲತೆಯನ್ನು ಅನುಭವಿಸಬೇಕಾಗಿದೆ. ರಾಜ್ಯ ಸಾರಿಗೆ ಸಂಸ್ಥೆಗಳ ಅಸಮರ್ಪಕ ಸಾರಿಗೆ ಸೇವೆಯಿಂದಾಗಿ ಹಲವು ಖಾಸಗಿಯವರು ಅನಿಯಂತ್ರಿತ ಮತ್ತು ಮುಚ್ಚುಮರೆಯ ಪ್ರಯಾಣಿಕ ಸಾರಿಗೆ ವ್ಯವಸ್ಥೆಯನ್ನು ನಡೆಸುತ್ತಿದ್ದು, ಇದರಿಂದ ಪ್ರಯಾಣಿಕರ ಸುರಕ್ಷತೆಗೆ ಧಕ್ಕೆಯಾಗುವುದರ ಜೊತೆಗೆ ಪ್ರಯಾಣ ಸೌಕರ್ಯವು ಅತಿ ದುರ್ಬಲವಾಗಿದೆ. ಈ ತೊಂದರೆಯನ್ನು ಬಹುತೇಕ ಗ್ರಾಮೀಣ ಜನತೆ ಭರಿಸಬೇಕಾಗಿದೆ.

215. ರಾಷ್ಟ್ರೀಕೃತ ಬಸ್ಸುಗಳಿಗೆ ಪರ್ಯಾಯವಾಗಿ ಚಲಿಸುತ್ತಿರುವ ಅನಧಿಕೃತ, ಮಿತಿಮೀರಿದ ಸಂಖ್ಯೆಯ ಪ್ರಯಾಣಿಕರನ್ನು ಕೊಂಡೊಯ್ಯುವ ಮ್ಯಾಕ್ಸಿಕ್ಯಾಬ್‌ಗಳು ಗಂಭೀರ ಅಪಘಾತಗಳನ್ನು

ಉಂಟುಮಾಡುತ್ತಿವೆ ಹಾಗೂ ರಾಜ್ಯ ಸಾರಿಗೆ ಸಂಸ್ಥೆಗಳು ಅತಿ ಕಡಿಮೆ ಸೇವೆ ಒದಗಿಸುತ್ತಿರುವ ಮಾರ್ಗಗಳಲ್ಲಿ ಸರಕು ಸಾಗಣೆ ವಾಹನಗಳಾದಂತಹ ಟ್ರಕ್ಕು ಮತ್ತು ವ್ಯವಸಾಯಕ್ಕೆ ರೂಪಿಸಲಾದ ಟ್ರ್ಯಾಕ್ಟರ್‌ಗಳೂ ಪ್ರಯಾಣಿಕರನ್ನು ಹೇರಿಕೊಂಡು ಸಂಚರಿಸುತ್ತಿರುವುದರ ಜೊತೆಗೆ ಬಸ್ಸುಗಳ ಮೇಲ್ಛಾವಣಿಯಲ್ಲಿ ಕೂತು ಪ್ರಯಾಣಿಸುವುದು ಸಾಮಾನ್ಯವಾಗಿದೆ.

216. ತೆರಿಗೆ ಸುಧಾರಣಾ ಆಯೋಗ ಈ ಸಮಸ್ಯೆಗಳನ್ನು ಗಣನೀಯವಾಗಿ ಅಧ್ಯಯನ ಮಾಡಿ ಹೀಗೆ ಹೇಳಿದೆ "ಹಲವಾರು ಕಾರಣಗಳಿಗಾಗಿ ಅಸಮರ್ಪಕವಾಗಿರುವ ಸಾರ್ವಜನಿಕ ಸಾರಿಗೆ ಸೌಲಭ್ಯಗಳು ಕೃತಕ ಅಭಾವ ಸ್ಥಿತಿಯನ್ನು ಸೃಷ್ಟಿಸುತ್ತಿವೆ. ಖಾಸಗಿ ಪ್ರವರ್ತಕರು ಅತಿ ಪ್ರಶಸ್ತ ರೀತಿಯಲ್ಲಿ ಸಾರಿಗೆ ಸೌಲಭ್ಯ ಒದಗಿಸಲು ಅನುಮತಿ ನೀಡದಿದ್ದಲ್ಲಿ ಸುರಕ್ಷಿತ ಮತ್ತು ಆರಾಮದಾಯಕ ಪ್ರಯಾಣ ಸೌಲಭ್ಯಗಳು ಸಾಧ್ಯವಾಗುವುದಿಲ್ಲ."

217. ಆದುದರಿಂದ, ತೆರಿಗೆ ಸುಧಾರಣಾ ಆಯೋಗವು ಪ್ರಯಾಣಿಕರಿಗೆ ಸುರಕ್ಷಿತ ಮತ್ತು ಅನುಕೂಲಕರ ಪ್ರಯಾಣ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಒಪ್ಪಂದ ವಾಹನಗಳ (ಸ್ವಾಧೀನ) ಕಾಯ್ದೆಯನ್ನು ಅಸಿಂಧುಗೊಳಿಸಲು ಬಲವಾದ ಶಿಫಾರಸ್ಸು ಮಾಡಿದೆ. ಆದುದರಿಂದ ನಾನು ಕರ್ನಾಟಕ ಒಪ್ಪಂದ ವಾಹನಗಳ (ಸ್ವಾಧೀನ), ಕಾಯಿದೆ, 1976 ನ್ನು ಅಸಿಂಧುಗೊಳಿಸಲು ಪ್ರಸ್ತಾಪಿಸುತ್ತೇನೆ. ಇದು ರಾಜ್ಯಾದ್ಯಂತ ಖಾಸಗಿ ಒಪ್ಪಂದ ವಾಹನಗಳು ಸಂಚರಿಸಲು ಅವಕಾಶ ಮಾಡಿಕೊಡುತ್ತದೆ.

218. ಜಿಲ್ಲಾ ಕೇಂದ್ರದ 20 ಕಿಲೋಮೀಟರ್‌ಗಳ ವ್ಯಾಪ್ತಿಯಲ್ಲಿ ಖಾಸಗಿ ಪ್ರವರ್ತಕರಿಗೆ ಮಜಲು ವಾಹನಗಳ ರಹದಾರಿ ನೀಡಲೂ ಸಹ ತೆರಿಗೆ ಸುಧಾರಣಾ ಆಯೋಗ ಶಿಫಾರಸ್ಸು ಮಾಡಿದೆ. ಬೆಂಗಳೂರು ನಗರವನ್ನು ಹೊರತುಪಡಿಸಿ ಉಳಿದ ಜಿಲ್ಲಾ ಕೇಂದ್ರಗಳ 20 ಕಿಲೋಮೀಟರ್ ವ್ಯಾಪ್ತಿಯೊಳಗೆ ನಗರ/ಪಟ್ಟಣ ಸಾರಿಗೆ ಸೇವೆ ಒದಗಿಸಲು ಒಂದು ಪ್ರತ್ಯೇಕ ಯೋಜನೆಯನ್ನು ಜಾರಿಗೆ ತರಲಾಗುವುದು. ಇದಕ್ಕಾಗಿ ಸರ್ಕಾರದಿಂದ ಹೊರಡಿಸಲಾಗಿರುವ ವಿವಿಧ ರಾಷ್ಟ್ರೀಕೃತ ಸಾರಿಗೆ ಯೋಜನೆಗಳಿಗೆ ಸೂಕ್ತ ತಿದ್ದುಪಡಿಗಳನ್ನು ಮಾಡಲಾಗುವುದು.

219. ಈ ಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ಹಾಗೂ ರಾಜ್ಯ ಮಟ್ಟದಲ್ಲಿ ರಾಜ್ಯ ಸಾರಿಗೆ ಪ್ರಾಧಿಕಾರವು ನಿರ್ವಹಿಸುತ್ತವೆ. ತೆರಿಗೆ ದರಗಳು ಮತ್ತು ಹಂತಗಳನ್ನು ಸಮನ್ವಯೀಕರಿಸಲು ಕ್ರಮವನ್ನು ಸಹ ತೆಗೆದುಕೊಳ್ಳಲಾಗುವುದು.

220. ತೆರಿಗೆ ಸುಧಾರಣಾ ಆಯೋಗ ತನ್ನ ವರದಿಯಲ್ಲಿ ರಾಜ್ಯ ಸಾರಿಗೆ ಸಂಸ್ಥೆಗಳು ಹೊಂದಿರುವ ಮಜಲು ವಾಹನಗಳ ತೆರಿಗೆಯನ್ನು ಖಾಸಗಿ ವಾಹನ ಮಾಲೀಕರ ತೆರಿಗೆಗೆ ಸಮನಾಗಿ ವಿಧಿಸುವಂತೆ ಶಿಫಾರಸ್ಸು ಮಾಡಿದೆ. ಆದುದರಿಂದ, ತೆರಿಗೆ ದರವನ್ನು ರಾಜ್ಯ ಸಾರಿಗೆ ಸಂಸ್ಥೆಗಳ ಒಟ್ಟು ಸಂಚಾರಿ ಆದಾಯದ ಮೇಲೆ ಗ್ರಾಮಾಂತರ ಮಾರ್ಗಗಳಲ್ಲಿ ಸಂಚರಿಸುವ ವಾಹನಗಳಿಗೆ ಶೇ. 6 ರಿಂದ ಶೇ. 7 ಕ್ಕೆ ಹಾಗೂ ನಗರ ಪ್ರದೇಶಗಳಲ್ಲಿ ಸಂಚರಿಸುವ ವಾಹನಗಳಿಗೆ ಶೇ. 3 ರಿಂದ ಶೇ. 5 ಕ್ಕೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ.

221. ಹೊಸದಾಗಿ ನೋಂದಣಿಯಾಗುವ ಮೋಟಾರು ಕಾರು, ಜೀಪು ಮತ್ತು 5 ಚ.ಮೀ.ಗಳಿಗೆ ಮೀರದ ನೆಲ ವಿಸ್ತೀರ್ಣವುಳ್ಳ ಆಮ್ನಿ ಬಸ್, ಖಾಸಗಿ ಸೇವಾ ವಾಹನಗಳಿಗೆ ಹಾಲಿ ವಿಧಿಸುತ್ತಿರುವ ಶೇ. 7 ರಷ್ಟು ಆಡ್‌ವೆಲರಮ್ ತೆರಿಗೆಯನ್ನು ಶೇ. 9ಕ್ಕೆ ಹೆಚ್ಚಿಸಲು

ಹಾಗೂ ರೂ. 10 ಲಕ್ಷಕ್ಕೂ ಮೀರಿದ ಮೌಲ್ಯವುಳ್ಳ ವಾಹನಗಳಿಗೆ ಶೇ. 10 ರಷ್ಟು ಆಡ್‌ವೆಲರಮ್ ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ. ತೆರಿಗೆ ಷೆಡ್ಯೂಲ್‌ಗೆ ಸೂಕ್ತ ತಿದ್ದುಪಡಿಗಳನ್ನು ತರಲಾಗುವುದು.

222. ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ ಹಾಗೂ ತೆರಿಗೆಯನ್ನು ಸಮನ್ವಯಗೊಳಿಸುವ ಉದ್ದೇಶದಿಂದ ಅಖಿಲ ಭಾರತ ಪ್ರವಾಸಿ ಅಮ್ನಿ ಬಸ್‌ಗಳಿಗೆ ಪ್ರತಿ ಆಸನಕ್ಕೆ ಪ್ರತಿ ತ್ರೈಮಾಸಿಕಕ್ಕೆ ಹಾಲಿ ವಿಧಿಸುತ್ತಿರುವ ತೆರಿಗೆ ರೂ. 2250/- ರಿಂದ ರೂ. 2000/-ಕ್ಕೆ ಮತ್ತು ಕ್ಯಾಂಪರ್ಸ್ ವಾಹನಗಳಗೆ ಪ್ರತಿ ಚ.ಮೀ.ಗೆ ಪ್ರತಿ ತ್ರೈ-ಮಾಸಿಕಕ್ಕೆ ಹಾಲಿ ವಿಧಿಸುತ್ತಿರುವ ನೆಲ-ವಿಸ್ತೀರ್ಣ ತೆರಿಗೆಯನ್ನು ರೂ. 4000/- ದಿಂದ ರೂ. 3000/ -ಕ್ಕೆ ಕಡಿಮೆ ಮಾಡಲು ಪ್ರಸ್ತಾಪಿಸುತ್ತೇನೆ.

223. ಸಾರಿಗೆ ಇಲಾಖೆಯ ಕಛೇರಿಗಳ ಕೆಲಸಗಳನ್ನು ಗಣಕೀಕರಣ ಗೊಳಿಸುತ್ತಿರುವುದರಿಂದ ಸಾರ್ವಜನಿಕರಿಗೆ ಉತ್ತಮ ಹಾಗೂ ಶೀಘ್ರ ಸೇವೆಯನ್ನು ಒದಗಿಸಲಾಗುವುದು. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಗಣಕೀಕೃತ ದಾಖಲೆ ಪಡೆಯಲು ಸರ್ಕಾರಕ್ಕೆ ಪಾವತಿ ಮಾಡಬೇಕಾಗಿರುವ ನಿಗದಿತ ಶುಲ್ಕದ ಜೊತೆಗೆ ರೂ. 10/- ಬಳಕೆದಾರರ ಸೇವಾ ಶುಲ್ಕ ವಿಧಿಸಲು ಪ್ರಸ್ತಾಪಿಸುತ್ತೇನೆ.

224. ಪರಿಸರ ಸ್ನೇಹಿ ಮತ್ತು ಶುದ್ಧ ಇಂಧನವಾಗಿ ವಾಹನಗಳಲ್ಲಿ ಎಲ್.ಪಿ.ಜಿ. ಬಳಕೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಆಟೋರಿಕ್ಷಾಗಳಲ್ಲಿ ಎಲ್.ಪಿ.ಜಿ. ಬಳಕೆಯನ್ನು ಪ್ರೋತ್ಸಾಹಿಸಲು, ಎಲ್.ಪಿ.ಜಿ ಕಿಟ್ ಅಳವಡಿಸುವ ಆಟೋ ರಿಕ್ಷಾಗಳಿಗೆ ಪ್ರಮುಖ ನಗರಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಕೋಟಾ / ನಿರ್ಭಂಧಗಳನ್ನು ಸಡಿಲಿಸಿ ಉದಾರವಾಗಿ ರಹದಾರಿ ನೀಡಲು ಪ್ರಸ್ತಾಪಿಸಿದೆ.

225. ಈಗಾಗಲೇ ಉಪಯೋಗದಲ್ಲಿರುವ ಆಟೋ ರಿಕ್ಷಾಗಳಲ್ಲಿ ಎಲ್.ಪಿ.ಜಿ. ಕಿಟ್ ಅಳವಡಿಸುವುದನ್ನು ಪ್ರೋತ್ಸಾಹಿಸಲು, ಹಸಿರು ತೆರಿಗೆ ಮೊತ್ತದಿಂದ ರೂ. 2000/- ಗಳ ಬಡ್ಡಿ ರಿಯಾಯಿತಿಯ ಸಹಾಯಧನ ಒದಗಿಸಲು ಸರ್ಕಾರವು ಪ್ರಸ್ತಾಪಿಸುತ್ತದೆ.

226. ಮೇಲ್ಕಂಡ ಪ್ರಸ್ತಾಪಿತ ಬದಲಾವಣೆಗಳನ್ನು ಅನುಬಂದ -XI ರಿಂದ XIII ರಲ್ಲಿ ವಿವರವಾಗಿ ನಮೂದಿಸಲಾಗಿದೆ.

ವಿದ್ಯುತ್ ತೆರಿಗೆ

227. ವಿದ್ಯುತ್ ಬಳಕೆಯನ್ನು ಆಧರಿಸಿ ವಿವಿಧ ವರ್ಗಗಳ ಗ್ರಾಹಕರಿಗೆ ಪ್ರತ್ಯೇಕ ತೆರಿಗೆ ದರಗಳನ್ನು ವಿಧಿಸಲಾಗುತ್ತದೆ. ಈ ದರಗಳನ್ನು 1996 ಕ್ಕೆ ಕಡೆಯದಾಗಿ ಪರಿಷ್ಕರಿಸಲಾಗಿದೆ.

228. ನಾನು ಈಗ ಪ್ರಸ್ತುತ ತೆರಿಗೆ ಸ್ವರೂಪವನ್ನು ಪರಿಷ್ಕರಿಸಲು ಉದ್ದೇಶಿಸಿದ್ದೇನೆ. ಕೃಷಿ ಬಳಕೆದಾರರು ಮತ್ತು ಕುಟೀರ ಜ್ಯೋತಿ ಮತ್ತು ಭಾಗ್ಯ ಜ್ಯೋತಿ ಗ್ರಾಹಕರನ್ನು ಹೊರತುಪಡಿಸಿ ಉಳಿದ ಎಲ್ಲಾ ವರ್ಗದ ಗ್ರಾಹಕರಿಗೆ ಒಟ್ಟು ವಿದ್ಯುತ್ ಶುಲ್ಕದ ಮೇಲೆ ಶೇಕಡ 5 ರಷ್ಟು ಅಡ್‌ವೆಲೋರಮ್ ತೆರಿಗೆಯನ್ನು ವಿಧಿಸುತ್ತಿದ್ದೇನೆ. ಕೆಇಆರ್‌ಸಿ ಕಾಲಕಾಲಕ್ಕೆ ನಿಗದಿಪಡಿಸಿರುವ ದರಗಳ ರೀತ್ಯ ಇದನ್ನು ಲೆಕ್ಕ ಹಾಕಲಾಗಿದೆ. ಈ ತೆರಿಗೆ ಪದ್ಧತಿಯನ್ನು ಪ್ರಸ್ತುತ 2003 ರ ಏಪ್ರಿಲ್ 1 ರಿಂದ ಅಥವಾ ಏಪ್ರಿಲ್ 1 ರ ನಂತರ ವಿದ್ಯುತ್ ಮೀಟರ್ ಓದುವ ದಿನಾಂಕದಿಂದ ಜಾರಿಗೆ ಬರುತ್ತದೆ.

ಪರಿಷ್ಕೃತ ಅಂದಾಜುಗಳು 2002-2003

229. 2002-2003 ರಲ್ಲಿ ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ಜಮೆಗಳನ್ನು 25542.05 ಕೋಟಿ ರೂ.ಗಳೆಂದು ನಿರೀಕ್ಷಿಸಲಾಗಿತ್ತು. ಆದರೆ ಪರಿಷ್ಕೃತ ಅಂದಾಜಿನ ರೀತ್ಯಾ ಒಟ್ಟು ಜಮೆಗಳು 24745.75 ಕೋಟಿ ರೂ.ಗಳಾಗಿದೆ. ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು 25597.32 ಕೋಟಿ ರೂ.ಗಳಾಗಿತ್ತು. ಈಗ ಪರಿಷ್ಕೃತ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು 24915.76 ಕೋಟಿ ರೂ.ಗಳಾಗಿದೆ. ಸಾರ್ವಜನಿಕ ವೆಚ್ಚದಲ್ಲಿನ ಹೆಚ್ಚುವರಿಯನ್ನು ಲೆಕ್ಕಕ್ಕೆ ತೆಗೆದುಕೊಂಡ ನಂತರ ಈ ವರ್ಷದ ಅಂತಿಮ ಕೊರತೆಯು -173.34 ಕೋಟಿ ರೂ.ಗಳಾಗುವ ನಿರೀಕ್ಷೆಯಿದೆ. 2002-2003ರ ಮುಂಗಡ ಪತ್ರವನ್ನು ಮಂಡಿಸುವ ಈ ಕೊರತೆಯನ್ನು -153.28 ಕೋಟಿ ರೂ.ಗಳೆಂದು ತೋರಿಸಲಾಗಿತ್ತು.

ಆಯವ್ಯಯ ಅಂದಾಜುಗಳು 2003-2004

230. ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಗಳನ್ನು ಸೇರಿಸಿಕೊಂಡ ನಂತರ 2003-2004ನೇ ಸಾಲಿನ ಒಟ್ಟು ಜಮೆ 26907.08 ಕೋಟಿ ರೂ.ಗಳಾಗಿದೆ. ಇದರಲ್ಲಿ 19845.17 ಕೋಟಿ ರೂ.ಗಳ ರಾಜಸ್ವ ಜಮೆ ಮತ್ತು 7061.91 ಕೋಟಿ ರೂ.ಗಳ ಬಂಡವಾಳ ಜಮೆ ಸೇರಿರುತ್ತದೆ. ಒಟ್ಟು ವೆಚ್ಚವನ್ನು 26839.43 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 21980.50 ಕೋಟಿ ರೂ.ಗಳು ರಾಜಸ್ವ ವೆಚ್ಚ ಮತ್ತು 4858.93 ಕೋಟಿ ರೂ.ಗಳು ಬಂಡವಾಳ ವೆಚ್ಚವಾಗಿವೆ.

231. ನನ್ನ ಭಾಷಣದಲ್ಲಿ ಈಗಾಗಲೇ ಪ್ರಸ್ತಾವಿಸಿರುವ ಪ್ರಮುಖ ತೆರಿಗೆ ಆದಾಯಗಳ ಜೊತೆಗೆ ಸಣ್ಣ ಉಳಿತಾಯದಿಂದ 1814.40 ಕೋಟಿ ರೂ.ಗಳನ್ನು ; ಮಾರುಕಟ್ಟೆ ಎತ್ತುವಳಿಯಿಂದ 973.51 ಕೋಟಿ ರೂ.ಗಳನ್ನು (ನಿವ್ವಳ); ಒಪ್ಪಂದದ ಸಾಲಗಳಿಂದ 522.00 ಕೋಟಿ ರೂ.ಗಳನ್ನು ಮತ್ತು ಕೇಂದ್ರ ಸರ್ಕಾರದ ಒಟ್ಟು ಸಾಲಗಳಿಂದ 2931.50 ಕೋಟಿ ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆ ಇಟ್ಟುಕೊಂಡಿದ್ದೇನೆ.

232. ಅಂತಿಮವಾಗಿ ರಾಜಸ್ವ ಕೊರತೆಯು 2135.32 ಕೋಟಿ ರೂ.ಗಳಾಗಲಿದೆ. ವಿತ್ತೀಯ ಕೊರತೆಯು 6032.79 ಕೋಟಿ ರೂ.ಗಳಿಗೆ ನಿಲ್ಲಲಿದೆ. ಈ ಎಲ್ಲ ಅಂದಾಜುಗಳ ರೀತ್ಯಾ ಈ ವರ್ಷಕ್ಕೆ ಒಟ್ಟಾರೆ ಹೆಚ್ಚುವರಿ 67.66 ಕೋಟಿ ರೂ.ಗಳೆಂದು ನಿರೀಕ್ಷಿಸಲಾಗಿದೆ.

233. ಆರಂಭದ ಶಿಲ್ಕು -173.34 ಕೋಟಿ ರೂ.ಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅಂತಿಮ ಶಿಲ್ಕನ್ನು -105.68 ಕೋಟಿ ರೂ.ಗಳೆಂದು ನಿರೀಕ್ಷಿಸಲಾಗಿದೆ. ಈ ಕೊರತೆಯನ್ನು ನಾನು ವೆಚ್ಚಗಳನ್ನು ನಿಯಂತ್ರಿಸುವ ಮೂಲಕ ಮತ್ತು ಹೆಚ್ಚುವರಿ ತೆರಿಗೆ ಸಂಗ್ರಹದ ಮೂಲಕ ಭರಿಸುವ ವಿಶ್ವಾಸವನ್ನು ಹೊಂದಿದ್ದೇನೆ.

234. ನಾನು ಈಗ 2003-2004ರ ಆಯವ್ಯಯ ಅಂದಾಜುಗಳನ್ನು ಸದನದ ಪರಿಶೀಲನೆಗೆ ಮಂಡಿಸುತ್ತಿದ್ದೇನೆ. ಮುಂಗಡ ಪತ್ರವನ್ನು ಸದನದಲ್ಲಿ ಸವಿವರವಾಗಿ ಚರ್ಚಿಸಲಾಗುವುದು. ಈಗ ನಾನು 2003-2004ರ ಪೂರ್ಣ ಆಯವ್ಯಯಕ್ಕೆ ಸದನದ ಅನುಮೋದನೆ ಕೋರುತ್ತಿದ್ದೇನೆ.

ಜೈ ಹಿಂದ್ - ಜೈ ಕರ್ನಾಟಕ

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ಕೇಳತಕ್ಕಂಥದ್ದು, ಈ ವರ್ಷ 2003-04 ರಲ್ಲಿ ಕಮಿಟಿ ಸಿಸ್ಟಮ್ ಇರತಕ್ಕಂಥದ್ದು, ಎರಡು ಮೂರು ತಿಂಗಳು ನಾವು ಇದನ್ನೆಲ್ಲಾ ಸ್ಕ್ರುಟಿನೈಸ್ ಮಾಡಬೇಕಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು 2003-04 ರ ಪೂರ್ಣ ಆಯವ್ಯಯಕ್ಕೆ ಸದನದ ಅನುಮೋದನೆ ಕೋರುತ್ತೇನೆ ಎಂದು ಇದೆ. ಈ ವೋಟ್ ಆನ್ ಅಕೌಂಟ್ ಮೂರು ತಿಂಗಳುಗಳಿಗೋ ಅಥವಾ ನಾಲ್ಕು ತಿಂಗಳುಗಳಿಗೋ ಎಂಬುದರ ಬಗ್ಗೆ ಸ್ಪಷ್ಟನೆ ಕೊಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, 31 ರವರೆಗೆ ಬಜೆಟ್ ಮೇಲಿನ ಚರ್ಚೆ ಇದೆ, ಪ್ರತಿ ಸಾರಿ ನಾವುಗಳು ವೋಟ್ ಆನ್ ಅಕೌಂಟ್ ಮೂರು-ನಾಲ್ಕು ತಿಂಗಳುಗಳಿಗೆ ತೆಗೆದುಕೊಳ್ಳುತ್ತಿದ್ದೆವು. ಆದರೆ ಈಗ ಇವರು ಇಡೀ ವರ್ಷಕ್ಕೆ, ಎಂಟೈರ್ ಬಜೆಟ್‌ಗೆ ಅನುಮೋದನೆ ತೆಗೆದುಕೊಳ್ಳುವುದಾದರೆ, ಮುಂದೆ ಬಜೆಟ್ ಮೇಲೆ ಚರ್ಚೆ ಆಗಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್.ಎಂ.ಕೃಷ್ಣ : ಸದನ ಒಪ್ಪಿದರೆ ಪೂರ್ತಿ ಕೊಡಿ, ಇಲ್ಲದಿದ್ದರೆ ಓಟ್ ಆನ್ ಅಕೌಂಟ್ ಕೊಡಿ.

ಶ್ರೀ ಸಿ.ಬೈರೇಗೌಡ (ವೇಮಗಲ್) : ನೀವು ಕೇಳಬೇಕಾಗುತ್ತದೆ. ಪ್ರಸ್ತಾವವನ್ನು ಮಂಡಿಸಬೇಕಾಗಿರತಕ್ಕಂತಹವರು ಸರ್ಕಾರದವರು ತಮಗೆ ಏನು ಆಗಬೇಕಾಗಿದೆ ಎಂದು ಕೇಳಬೇಕಾದವರು ತಾವು, ದಯವಿಟ್ಟು ಮೊದಲನೇ ಸಾರಿ ಇದನ್ನು ನಾವು ಬಜೆಟ್ ಸ್ಪೀಚ್‌ನಲ್ಲಿ ನೋಡುತ್ತಿದ್ದೇವೆ. ಮೊದಲನೇ ಸಾರಿ ಈ ರೀತಿಯ ಹೊಸ ಸಂಪ್ರದಾಯವನ್ನು ತಾವು ಹಾಕುತ್ತಿದ್ದೀರಿ. ಅದು ಏನು ಎಂಬುದನ್ನು ತಾವು ಸ್ಪಷ್ಟ ಮಾಡಬೇಕು.

ಶ್ರೀ ಆರ್.ವಿ.ದೇಶಪಾಂಡೆ : ಹಲವಾರು ಬಜೆಟ್‌ಗಳು ಹೀಗೆ ಪಾಸ್ ಆಗಿವೆ. ಇದು ಮೊದಲನೇ ಸಾರಿ ಏನೂ ಅಲ್ಲ.

ಶ್ರೀ ಸಿ.ಬೈರೇಗೌಡ : ಅದು ಏನು ಎನ್ನುವುದನ್ನು ಸ್ಪಷ್ಟವಾಗಿ ಹೇಳಲಿ.

ಶ್ರೀ ಸಿ.ಚನ್ನಿಗಪ್ಪ : ವಿಷಯ ಸಮಿತಿ ಬಗ್ಗೆ ಪ್ರಸ್ತಾಪವೇ ಮಾಡಿಲ್ಲ.

ಶ್ರೀ ಎಸ್.ಎಂ.ಕೃಷ್ಣ: ಈ ಸರ್ಕಾರದ ಮುಂದಿನ ನಾಲ್ಕು ತಿಂಗಳುಗಳ ಖರ್ಚು ವೆಚ್ಚಗಳನ್ನು ಭರಿಸಲಿಕ್ಕೆ ಓಟ್ ಆನ್ ಅಕೌಂಟ್ ಮೂವ್ ಮಾಡುತ್ತಿದ್ದೇನೆ.

ಅಧ್ಯಕ್ಷರು : ಈಗ ಸದನವನ್ನು ಸೋಮವಾರ 24.3.03 ರ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 11.15 ಕ್ಕೆ ಮುಂದೂಡಲ್ಪಟ್ಟು ಮತ್ತೆ 24.3.03 ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು).

ಬಜೆಟ್ ವಿಹಂಗಮ ನೋಟ

ಬಜೆಟ್ ವಿಹಂಗಮ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 2002-03	ಪರಿಷ್ಕೃತ ಅಂದಾಜು 2002-03	ಬಜೆಟ್ ಅಂದಾಜು 2003-04
	ಪ್ರಾರಂಭ ಶಿಲ್ಕು	-98.01	-3.33	-173.34
	ಎ. ರಾಜಸ್ವ ಲೆಕ್ಕ			
I.	ಜಮೆ :			
	ರಾಜ್ಯ ತೆರಿಗೆ	11887.05	10881.15	12588.38
	ಕೇಂದ್ರ ತೆರಿಗೆಯಲ್ಲಿ ಪಾಲು	2925.00	2711.97	3044.76
	ಕೇಂದ್ರ ಸರ್ಕಾರದ ಅನುದಾನಗಳು	2320.42	2112.40	2498.70
	ತೆರಿಗೆಯೇತರ ರಾಜಸ್ವ	1665.98	1273.82	1713.33
	ಒಟ್ಟು-ಎ. I	18798.45	16979.34	19845.17
II.	ವೆಚ್ಚ :			
	ಸಾಮಾಜಿಕ ಸೇವೆ	6827.16	6515.86	7141.41
	ಆರ್ಥಿಕ ಸೇವೆ	6127.82	5787.09	5706.78
	ಸಾಮಾನ್ಯ ಸೇವೆ	7774.58	7505.86	8392.62
	ಸಹಾಯಾನುದಾನ ಮತ್ತು ಅಂಶದಾನ	674.08	576.00	739.68
	ಒಟ್ಟು-ಎ. II	21403.64	20384.81	21980.49
ಎ.	ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ	-2605.19	-3405.47	-2135.32

ನೋಟ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 2002-03	ಪರಿಷ್ಕೃತ ಅಂದಾಜು 2002-03	ಬಜೆಟ್ ಅಂದಾಜು 2003-04
	ಬಿ. ಬಂಡವಾಳ ಲೆಕ್ಕ			
I.	ಜಮೆ :			
	ಭಾರತ ಸರ್ಕಾರದಿಂದ ಸಾಲ	2417.75	1570.20	2931.50
	ಬಹಿರಂಗ ಮಾರುಕಟ್ಟೆ ಸಾಲ (ನಿವ್ವಳ)	948.48	1283.25	973.51
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ	2390.00	2390.00	2336.40
	ಸಾಲಗಳು ಮತ್ತು ಮುಂಗಡಗಳ ವಸೂಲಿ	202.37	1007.76	100.50
	ಸಾರ್ವಜನಿಕ ಲೆಕ್ಕ (ನಿವ್ವಳ) ಇತರೆ	785.00	1515.20	720.00
	ಒಟ್ಟು-ಬಿ. I	6743.60	7766.41	7061.91
II.	ಬಟವಾಡೆ :			
	ಬಂಡವಾಳ ವೆಚ್ಚ (ನಿವ್ವಳ)	3029.01	2806.75	3561.66
	ಕೇಂದ್ರ ಸಾಲಗಳ ಮರುಸಂದಾಯ	574.64	959.14	639.26
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ	182.78	209.83	221.70
	ಸಾಲಗಳ ಮತ್ತು ಮುಂಗಡಗಳ ಬಟವಾಡೆ	407.25	555.23	436.31
	ಒಟ್ಟು-ಬಿ. II	4193.68	4530.95	4858.93
ಬಿ.	ಬಂಡವಾಳ ಲೆಕ್ಕ ಹೆಚ್ಚಳ / ಕೊರತೆ	2549.92	3235.46	2202.98
ಸಿ.	ವರ್ಷದ ಒಟ್ಟು ಹೆಚ್ಚಳ / ಕೊರತೆ	-55.27	-170.01	+67.66
ಡಿ.	ಮುಕ್ತಾಯ ಶಿಲ್ಕು ಕಳೆದಾಗ	-153.28	-173.34	-105.68

ಅನುಬಂಧ - I

(ಪ್ಯಾರಾ 141)

2003-2004ನೇ ಸಾಲಿನ ವಿಭಾಗವಾರು ರಾಜ್ಯ ಯೋಜನಾ ಹಂಚಿಕೆ

	ವಿಭಾಗ	ಕೋಟಿ ರೂ.ಗಳಲ್ಲಿ	ಶೇಕಡಾ ಪ್ರಮಾಣ
ಎ.	ಆರ್ಥಿಕ ಸೇವೆಗಳು		
	ಕೃಷಿ ಮತ್ತು ಸಂಬಂಧಪಟ್ಟ ಸೇವೆ	487.71	4.99
	ಗ್ರಾಮೀಣ ಅಭಿವೃದ್ಧಿ	338.04	3.46
	ವಿಶೇಷ ಪ್ರದೇಶ ಯೋಜನೆ	157.53	1.61
	ನೀರಾವರಿ ಮತ್ತು ಪ್ರವಾಹ ನಿಯಂತ್ರಣ	3002.16	30.70
	ಶಕ್ತಿ ಮೂಲಗಳು	1099.99	11.25
	ಕೈಗಾರಿಕೆ ಮತ್ತು ಖನಿಜಗಳು	165.77	1.70
	ಸಾರಿಗೆ	1295.66	13.25
	ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ	14.69	0.15
	ಸಾಮಾನ್ಯ ಆರ್ಥಿಕ ಸೇವೆಗಳು	292.71	2.99
ಬಿ.	ಸಮಾಜ ಸೇವೆಗಳು		
	ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ	565.27	5.78
	ಆರೋಗ್ಯ	139.74	1.43
	ನೀರು ಸರಬರಾಜು ಮತ್ತು ನೈರ್ಮಲ್ಯ	703.67	7.20
	ವಸತಿ ಮತ್ತು ನಗರಾಭಿವೃದ್ಧಿ	1028.57	10.52
	ವಾರ್ತಾ ಮತ್ತು ಪ್ರಚಾರ	4.30	0.04
	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ		
	ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ	392.30	4.01
	ಕಾರ್ಮಿಕ ಮತ್ತು ಉದ್ಯೋಗ	15.14	0.15
ಸಿ.	ಸಾಮಾನ್ಯ ಸೇವೆಗಳು	76.50	0.78
	ಒಟ್ಟು	9779.75	100.00

ಅನುಬಂಧ - II

(ಪ್ಯಾರಾ-156)

ಎ. ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ವಿನಾಯಿತಿಗೊಳ್ಳಲಾದ ಸರಕುಗಳು

ಕ್ರಮ ಸಂಖ್ಯೆ	ಸರಕುಗಳ ವಿವರ
1	2
1.	ಸ್ಪೆಷಲ್ ಬಾಯ್ಲಿಂಗ್ ಸ್ಪಿರಿಟ್ ಸೇರಿದಂತೆ ಪೆಟ್ರೋಲ್
2.	ಡೀಸೆಲ್
3.	ಏವಿಯೇಷನ್ ಟರ್ಬೈನ್ ಫ್ಯೂಯೆಲ್
4.	ಕಬ್ಬು
5.	ಲಾಟರಿ ಟಿಕೆಟ್‌ಗಳು
6.	ಕೈಯಿಂದ ನಡೆಸುವ ಅಥವಾ ಪ್ರಾಣಿಗಳಿಂದ ಎಳೆಯುವ ಕೃಷಿ ಉಪಕರಣಗಳು
7.	ಅಂಗವಿಕಲ ವ್ಯಕ್ತಿಗಳು ಉಪಯೋಗಿಸುವ ಸಹಾಯಕ ಸಾಧನಗಳು ಮತ್ತು ಉಪಕರಣಗಳು
8.	ಪಶು ಆಹಾರ ಮತ್ತು ಪೂರಕ ಆಹಾರಗಳು, ಎಂದರೆ: ಕೋಳಿ ಆಹಾರ, ಜಾನುವಾರು ಆಹಾರ, ಹಂದಿ ಆಹಾರ, ಮೀನಿನ ಆಹಾರ, ಫಿಷ್‌ಮೀಲ್, ಪ್ರಾನ್ ಫೀಡ್, ಸೀಗಡಿ ಆಹಾರವೆಂದು ಮಾರಾಟ ಮಾಡುವ ಸಂಸ್ಕರಿತ ವಸ್ತುಗಳು ಹಾಗೂ ಪೂರಕ ಆಹಾರಗಳು ಮತ್ತು ಆಹಾರ ಪೂರಕಗಳಾಗಿ ಉಪಯೋಗಿಸುವ ಉದ್ದೇಶವುಳ್ಳ ಖನಿಜ ಮಿಶ್ರಣಗಳ ಸಾಂದ್ರೀಕೃತ ವಸ್ತುಗಳು.
9.	ವೀಳ್ಯದೆಲೆ
10.	ಪುಸ್ತಕಗಳು, ನಿಯತಕಾಲಿಕಗಳು ಹಾಗೂ ಪತ್ರಿಕೆಗಳು
11.	ಚರಕ, ಅಂಬರಚರಕ, ಕೈಮಗ್ಗ ಬಟ್ಟೆಗಳು ಮತ್ತು ಗಾಂಧಿ ಟೋಪಿಗೆ
12.	ಇದ್ದಲು ಮತ್ತು ಉರುವಲು
13.	ಭತ್ತ, ಅಕ್ಕಿ ಹಾಗೂ ಗೋಧಿ ಹಾಗೂ ಅದರ ಹಿಟ್ಟನ್ನು ಹೊರತುಪಡಿಸಿ, ಒರಟು ಧಾನ್ಯಗಳು ಮತ್ತು ಅವುಗಳ ಹಿಟ್ಟು.
14.	ನಿರೋಧಕಗಳು ಮತ್ತು ಗರ್ಭನಿರೋಧಕಗಳು
15.	ಲಡಿಗಳಲ್ಲಿ ಹತ್ತಿ ಮತ್ತು ರೇಷ್ಮೆ ನೂಲು
16.	ಮೊಸರು ಮತ್ತು ಮಜ್ಜಿಗೆ
17.	ಮಣ್ಣಿನ ಪಾತ್ರೆಗಳು
18.	ವಿದ್ಯುಚ್ಛಕ್ತಿ
19.	ಮೀನಿನ ತಳಿ, ಪ್ರಾನ್ ತಳಿ, ಸೀಗಡಿ ತಳಿ, ಮೀನುಗಾರಿಕೆಯ ಬಲೆ ಮತ್ತು ದಾರ, ಟ್ರಾಲರ್‌ಗಳು ಹಾಗೂ ಇತರ ಯಾಂತ್ರಿಕ ದೋಣಿಗಳನ್ನು ಹೊರತುಪಡಿಸಿದಂತೆ ದೇಶೀಯವಾಗಿ ನಿರ್ಮಿಸಿದ ಯಾಂತ್ರಿಕವಲ್ಲದ ದೋಣಿಗಳು ಹಾಗೂ ಬಲೆ-ಚೀಲಗಳು ಮತ್ತು ಕಿವಿರು ಬಲೆಗಳು ಒಳಗೊಂಡಂತೆ ಮೀನುಗಾರಿಕೆ ಅವಶ್ಯಕತೆಗಳು.
20.	ತಾಜಾ ಹಾಲು ಹಾಗೂ ಪಾಶ್ಚೀಕೃತ ಹಾಲು
21.	ತಾಜಾ ಸಸಿಗಳು, ಎಳೆಸಸಿಗಳು, ತಾಜಾ ಹೂಗಳು, ಬಾಳೆ ಎಲೆಗಳು ಪತ್ರಾವಳಿ (ಊಟದ ಎಲೆ) ಹಾಗೂ ಅವುಗಳ ಉತ್ಪನ್ನಗಳು.
22.	ತಾಜಾ ತರಕಾರಿಗಳು ಹಾಗೂ ತಾಜಾ ಹಣ್ಣುಗಳು
23.	ಬೆಳ್ಳುಳ್ಳಿ, ಶುಂಠಿ, ಹಸಿಮೆಣಸಿನಕಾಯಿ, ಈರುಳ್ಳಿ, ಆಲುಗಡ್ಡೆ, ಗೆಣಸು, ಮರಗೆಣಸು ಮತ್ತು ಅದರ ಬೀಜಗಳು.
24.	ಗಾಜಿನ ಬಳೆಗಳು
25.	(ಹಸಿ ಅಥವಾ ಒಣಗಿದ) ಮೇವು

26. ಮಾನವ ರಕ್ತ ಹಾಗೂ ರಕ್ತ ಪ್ಲಾಸ್ಮ
27. ಕುಂಕುಮ, ಬಿಂದಿ ಹಾಗೂ ಸಿಂಧೂರ
28. ಸೀಲು ಮಾಡಿದ ಕಂಟೇನರುಗಳಲ್ಲಿ ಮಾರಾಟ ಮಾಡಿದಾಗ ಅವುಗಳನ್ನು ಹೊರತುಪಡಿಸಿದಂತೆ ಕೋಳಿ ಮಾಂಸ, ಮೀನು, ಪ್ರಾನ್, ಸೀಗಡಿ ಹಾಗೂ ಏಡಿಗಳನ್ನು ಒಳಗೊಂಡಂತೆ, ಮಾಂಸ; ಮೊಟ್ಟೆಗಳು, ಕೋಳಿಗಳನ್ನು ಒಳಗೊಂಡಂತೆ, ಆದರೆ ಕುದುರೆಗಳನ್ನು ಹೊರತುಪಡಿಸಿದಂತೆ ಜಾನುವಾರುಗಳು; ಕಚ್ಚಾ ಉಣ್ಣೆಯು ಒಳಗೊಂಡಂತೆ ಪ್ರಾಣಿಗಳ ಕೂದಲು.
29. ರಾಷ್ಟ್ರಧ್ವಜ
30. ಸಾವಯುವ ಗೊಬ್ಬರ, ಕಾಂಪೋಸ್ಟ್ ಗೊಬ್ಬರ, ಮೀನುಗೊಬ್ಬರ ಹಾಗೂ ಕೋಳಿ ಗೊಬ್ಬರ.
31. ಸರ್ಕಾರಿ ಖಜಾನೆಗಳಿಂದ ಮತ್ತು ಅಧಿಕೃತ ಮಾರಾಟಗಾರರಿಂದ ಮಾರಾಟ ಮಾಡಲಾದ ನಾನ್‌ಜುಡೀಶಿಯಲ್ ಸ್ಟಾಂಪ್ ಪೇಪರ್; ಸರ್ಕಾರದಿಂದ ಮಾರಾಟ ಮಾಡಲಾಗುವ ಲಕೋಟೆಗಳು, ಅಂಚೆ ಕಾರ್ಡುಗಳು ಒಳಗೊಂಡಂತೆ ಶುಭಾಶಯ ಪತ್ರಗಳು ಹಾಗೂ ಸ್ಟಾಂಪುಗಳಂಥ ಅಂಚೆ ವಸ್ತುಗಳು; ಭಾರತೀಯ ರಿಜರ್ವ್ ಬ್ಯಾಂಕಿಗೆ ಮಾರಾಟ ಮಾಡಿದ ರೂಪಾಯಿ ನೋಟು; ಬಿಡಿ ಅಥವಾ ಪುಸ್ತಕ ರೂಪದಲ್ಲಿಯ ಚೆಕ್‌ಗಳು.
32. ಘನೀಕೃತ ವೀರ್ಯವನ್ನು ಒಳಗೊಂಡಂತೆ ವೀರ್ಯ
33. ರೇಷ್ಮೆ ಹುಳು ಮೊಟ್ಟೆಗಳು, ರೇಷ್ಮೆ ಹುಳು ಮರಿಗಳು, ರೇಷ್ಮೆ ಗೂಡುಗಳು ಹಾಗೂ ಕಚ್ಚಾ ರೇಷ್ಮೆ ನೂಲು ಸೇರಿದಂತೆ ಆದರೆ ದೇಶದ ಹೊರಗಿನಿಂದ ಆಮದು ಮಾಡಿಕೊಂಡ ಕಚ್ಚಾ ರೇಷ್ಮೆಯನ್ನು ಹೊರತುಪಡಿಸಿ ಕಚ್ಚಾ ರೇಷ್ಮೆ.
34. ಸ್ಲೇಟುಗಳು, ಬಳಪ ಮತ್ತು ಸೀಮೆಸುಣ್ಣ, ಕ್ರೇಯಾನ್‌ಗಳು
35. ಎಳನೀರು
36. ಹೆಂಡ, ನೀರಾ ಹಾಗೂ ಸಾರಾಯಿ
37. ಸಂಸ್ಕರಿಸದ ಉಪ್ಪು
38. i) ಇಂಗಾಲಾಮ್ಲ ಮಿಶ್ರಿತ ನೀರು, ಖನಿಜ ನೀರು, ಭಟ್ಟಿ ಇಳಿಸಿದ ಡಿಸ್ಟಿಲ್ ನೀರು, ಔಷಧೀಯ ನೀರು, ಅಯೋನಿಕ್ ನೀರು, ಬ್ಯಾಟರಿ ನೀರು ಹಾಗೂ ಖನಿಜ ರಹಿತಗೊಳಿಸಿದ ನೀರು; ಮತ್ತು
    ii) ಸೀಲು ಮಾಡಿದ ಕಂಟೇನರುಗಳಲ್ಲಿ ಮಾರಾಟ ಮಾಡಿದ ನೀರು
    - ಇವುಗಳನ್ನು ಹೊರತುಪಡಿಸಿದ ನೀರು.
39. ಬೀರ್, ಫೆನ್ನಿ ಲಿಕ್ಕರ್ ಮತ್ತು ವೈನ್ ಒಳಗೊಂಡಂತೆ ಮದ್ಯ
40. ರೆಕ್ಟಿಫೈಡ್ ಸ್ಪಿರಿಟ್

ಬ. ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ಶೇಕಡಾ ಒಂದರ ದರದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳು

ಕ್ರಮ ಸಂಖ್ಯೆ	ಸರಕುಗಳ ವಿವರ
1	2
1.	ಚಿನ್ನ ಅಥವಾ ಬೆಳ್ಳಿ ಗಟ್ಟಿಗಳು ಹಾಗೂ ನಾಣ್ಯಗಳು
2.	ಅಮೂಲ್ಯ ಅಥವಾ ಅರೆ ಅಮೂಲ್ಯ ಹರಳುಗಳನ್ನು ಅಳವಡಿಸಿರುವ ಅಥವಾ ಇಲ್ಲದಿರುವ ಚಿನ್ನ, ಬೆಳ್ಳಿ ಮತ್ತು ಇತರ ಬೆಲೆಬಾಳುವ ಲೋಹಗಳ ಆಭರಣಗಳು ಮತ್ತು ವಸ್ತುಗಳು.

ಸಿ. ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ಶೇಕಡಾ ನಾಲ್ಕರ ದರದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳು

ಕ್ರಮ ಸಂಖ್ಯೆ	ಸರಕುಗಳ ವಿವರ
1	2
1.	ಕೈಯಿಂದ ನಡೆಸದಿರುವ ಅಥವಾ ಪ್ರಾಣಿಗಳಿಂದ ಎಳೆಸದಿರುವ ಕೃಷಿ ಉಪಕರಣಗಳು
2.	ಹಾರು ಬೂದಿ (ಫ್ಲೈಆ್ಯಷ್) ಇಟ್ಟಿಗೆಗಳು, ರಿಫ್ರಾಕ್ಟರಿ ಇಟ್ಟಿಗೆಗಳು ಮತ್ತು ಅಂತಹವುಗಳನ್ನು ಒಳಗೊಂಡಂತೆ ಎಲ್ಲ ಬಗೆಯ ಇಟ್ಟಿಗೆಗಳು; ಡಾಂಬರು ಲೇಪಿತ ಮೇಲ್ಛಾವಣಿ ಹಾಳೆಗಳು, ಮಣ್ಣಿನ ಹೆಂಚುಗಳು.
3.	ಲಡಿಗಳಲ್ಲಿರುವ ಹತ್ತಿ ಮತ್ತು ರೇಷ್ಮೆ ನೂಲುಗಳನ್ನು ಹೊರತುಪಡಿಸಿ, ಎಲ್ಲ ಬಗೆಯ ನೂಲು; ಹೊಲಿಗೆ ದಾರ.
4.	ಅಲ್ಯೂಮಿನಿಯಂ ಪಾತ್ರೆಗಳು ಹಾಗೂ ಎನಾಮೆಲ್ (ಗಾಜಿನ ಲೇಪನ ಇರುವ) ಪಾತ್ರೆಗಳು
5.	ಅಡಿಕೆ
6.	ಬಿದಿರು (ಬಂಬು)
7.	ಎಲ್ಲಾ ಬಗೆಯ ಬೇರಿಂಗ್‌ಗಳು
8.	ಬೀಡಿ ಎಲೆಗಳು
9.	ಪಟ್ಟಿ (ಬೆಲ್ಟಿಂಗ್) ಗಳು ಎಂದರೆ, ಟ್ರಾನ್ಸ್‌ಮಿಷನ್, ಕನ್ವೇಯರ್ ಅಥವಾ ಎಲಿವೇಟರ್ ಬೆಲ್ಟ್‌ಗಳು ಅಥವಾ ಯಾವುದೇ ಬಟ್ಟೆಗಳಂಥ ವಸ್ತುವಿನೊಂದಿಗೆ ಸೇರಿರಲಿ ಅಥವಾ ಅಲ್ಲದಿರಲಿ, ಅಂಥ ವಲ್ಕನೈಸ್ಡ್ ರಬ್ಬರಿನ ಬೆಲ್ಟಿಂಗ್.
10.	ಬೈಸಿಕಲ್‌ಗಳು, ಟ್ಯಾಂಡಮ್ ಸೈಕಲ್‌ಗಳು, ಸೈಕಲ್ ಜೋಡಣೆಗಳು, ಸೈಕಲ್ ರಿಕ್ಷಾಗಳು, ಪೆರ್ಯಾಂಬುಲೇಟರ್‌ಗಳು, ಮಕ್ಕಳ ತ್ರಿಚಕ್ರ ಸೈಕಲ್‌ಗಳು ಮತ್ತು ಅಂಥವೇ ವಸ್ತುಗಳು ಮತ್ತು ಟೈರ್‌ಗಳು, ಟ್ಯೂಬುಗಳು ಮತ್ತು ಫ್ಲಾಪ್‌ಗಳೂ ಒಳಗೊಂಡಂತೆ ಅವುಗಳ ಭಾಗಗಳು ಮತ್ತು ಉಪ-ಸಾಧನಗಳು.
11.	ಬಿಟ್ಯುಮೆನ್
12.	ಮೂಳೆಪುಡಿ
13.	ಬ್ರೆಡ್ ಮತ್ತು ಬನ್
14.	ಬಲ್ಕ ಡ್ರಗ್‌ಗಳು
15.	ಅಧಿಸೂಚಿಸಬಹುದಾದ ಬಂಡವಾಳ ಸರಕುಗಳು
16.	ರಾಸಾಯನಿಕ ಗೊಬ್ಬರಗಳು ಮತ್ತು ರಾಸಾಯನಿಕಗೊಬ್ಬರ ಮಿಶ್ರಣಗಳು; ಕೀಟ ನಾಶಕಗಳು, ಕ್ರಿಮಿನಾಶಕಗಳು, ದಂಶನಾಶಕಗಳು, ಶಿಲೀಂದ್ರನಾಶಕಗಳು, ಕಳೆನಾಶಕಗಳು, ಹರ್ಬಿಸೈಡ್‌ಗಳು, ಸಸ್ಯ ನಿಯಂತ್ರಕಗಳು ಮತ್ತು ಸಸ್ಯ ಬೆಳವಣಿಗೆ ಪೋಷಕಾಂಶಗಳು.
17.	ಕಾಫಿ ಬೀನ್ಸ್‌ಗಳು ಮತ್ತು ಬೀಜಗಳು (ಕಚ್ಚಾ ಅಥವಾ ಹುರಿದ); ಕೋಕೊ ಕಾಯಿ ಮತ್ತು ಬೀಜಗಳು; ಹಸಿ ಚಹ ಎಲೆಗಳು ಮತ್ತು ಚಿಕೋರಿ.
18.	ರಬ್ಬರಿನಿಂದ ಕೂಡಿದ ತೆಂಗಿನ ನಾರು ಉತ್ಪನ್ನಗಳನ್ನು ಹೊರತುಪಡಿಸಿ ತೆಂಗಿನ ನಾರು ಮತ್ತು ತೆಂಗಿನ ನಾರಿನ ಉತ್ಪನ್ನಗಳು.
19.	ಕಾಟನ್ ವೇಸ್ಟ್ ಮತ್ತು ಕಾಟನ್ ಯಾರ್ನ್ ವೇಸ್ಟ್
20.	ಕೇಂದ್ರ ಮಾರಾಟ ತೆರಿಗೆ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 74) 14ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂಥ ಘೋಷಿಸಲಾದ ಸರಕುಗಳು.
21.	ಖಾದ್ಯ ತೈಲಗಳು (ನಾನ್‌ರಿಫೈನ್ಡ್ ಮತ್ತು ರಿಫೈನ್ಡ್), ಎಣ್ಣೆ ಸಹಿತವಾದ ಮತ್ತು ಎಣ್ಣೆ ತೆಗೆದ ಹಿಂಡಿಗಳು

22. ನೋಟ್ ಪುಸ್ತಕಗಳು, ವಿದ್ಯಾರ್ಥಿ ನೋಟ್ ಪುಸ್ತಕಗಳು, ಗ್ರಾಫ್ ಪುಸ್ತಕಗಳು ಮತ್ತು ಪ್ರಯೋಗಾಲಯ ನೋಟ್ ಪುಸ್ತಕಗಳು
23. ಎಕ್ಸಿಮ್ ಸ್ಕ್ರಿಪ್‌ಗಳು, ಆರ್‌ಇಪಿ ಲೈಸೆನ್ಸ್‌ಗಳು, ವಿಶೇಷ ಆಮದು ಲೈಸೆನ್ಸ್‌ಗಳು (ಎಸ್‌ಐಎಲ್), ಮೌಲ್ಯಾಧಾರಿತ ಮುಂಗಡ ಲೈಸೆನ್ಸಿಗಳು (ವಿಎಬಿಎಲ್), ರಫ್ತು ಕೋಟಾಗಳು, ಕೃತಿ ಸ್ವಾಮ್ಯಗಳು, ಪೇಟೆಂಟ್‌ಗಳು ಮತ್ತು ಅಂಥವುಗಳು
24. ಎಲ್ಲಾ ಬಗೆಯ ಫೈಬರ್‌ಗಳು ಮತ್ತು ಫೈಬರ್ ವೇಸ್ಟ್
25. ಅಕ್ಕಿ, ಗೋಧಿ ಮತ್ತು ಮೆಕ್ಕೆ ಜೋಳದ ಹಿಟ್ಟು (ಆಟಾ), ಪೋಹಾ, ಮೈದಾ ಮತ್ತು ರವೆ; ದ್ವಿದಳ ಧಾನ್ಯಗಳ ಹಿಟ್ಟು.
26. ಹುರಿಗಡಲೆ
27. ಹ್ಯಾಂಡ್ ಪಂಪ್‌ಗಳು ಮತ್ತು ಅವುಗಳ ಭಾಗಗಳು
28. ಮೆದುನೀರ್ಕೊಳವೆಗಳು (ಹೋಸ್ ಪೈಪ್‌ಗಳು)
29. ಹೊಸ್ಯೆರಿ ಸರಕುಗಳು
30. ಆಹಾರ ಧಾನ್ಯಗಳ ಮತ್ತು ದ್ವಿದಳ ಧಾನ್ಯಗಳ ಸಿಪ್ಪೆ ಮತ್ತು ಹೊಟ್ಟು
31. ಐಸ್ (ಮಂಜುಗಡ್ಡೆ)
32. ಅಗರಬತ್ತಿ, ಧೂಪಕಡ್ಡಿ ಮತ್ತು ಧೂಪಬಾಮ್‌ನಂಥ ಸುಗಂಧ ಕಡ್ಡಿಗಳು
33. ಭಾರತೀಯ ಸಂಗೀತ ವಾದ್ಯಗಳು ಎಂದರೆ, ವೀಣೆ, ವೈಯೋಲಿನ್, ತಂಬೂರಿ, ಮೃದಂಗ, ಘಟಂ, ಖಂಜರ, ಹಾರ್ಮೋನಿಯಂ, ಕೊಳಲು, ಸ್ಟಾರ್, ಸರೋದ್, ಸಂತೂರ್, ದಿಲ್‌ರೂಬಾ, ನಾದಸ್ವರ, ಡೋಲು, ತಬಲಾವಾದ್ಯ, ಶಹನಾಯ್, ಪಕ್‌ವಾಜ್, ವಿಚಿತ್ರ ವೀಣೆ, ಗೋಟುವಾದ್ಯ, ಮೋರ್‌ಸಿಂಗ್, ಚಂಡೆ, ತ್ರೈಂಗಲ್, ರುದ್ರವೀಣಾ ಮತ್ತು ಸಾರಂಗಿ ಮತ್ತು ಅವುಗಳ ಭಾಗಗಳು ಮತ್ತು ಉಪಸಾಧನ ಸಾಮಗ್ರಿಗಳು.
34. ಕೈಗಾರಿಕಾ ಕೇಬಲ್‌ಗಳು ಎಂದರೆ, ಹೈ ವೋಲ್ಟೇಜ್ ಕೇಬಲ್‌ಗಳು, XLPE ಕೇಬಲ್‌ಗಳು, ಜೆಲ್ಲಿಯಿಂದ ತುಂಬಿದ ಕೇಬಲ್‌ಗಳು ಮತ್ತು ಆಪ್ಟಿಕಲ್ ಫೈಬರ್‌ಗಳು.
35. ಅಧಿಸೂಚಿಸಿರಬಹುದಾದ ಕೈಗಾರಿಕಾ ಕಚ್ಚಾವಸ್ತುಗಳು ಮತ್ತು ಪ್ಯಾಕಿಂಗ್ ವಸ್ತುಗಳು.
36. ಅಧಿಸೂಚಿಸಬಹುದಾದ ದೂರಸಂಪರ್ಕ ಸಲಕರಣೆಗಳೂ ಸೇರಿದಂತೆ ಮಾಹಿತಿ ತಂತ್ರಜ್ಞಾನ ಉತ್ಪನ್ನಗಳು.
37. ಬೆಲ್ಲ
38. ಸಾರ್ವಜನಿಕ ವಿತರಣಾ ಪದ್ಧತಿಯ (ಪಿಡಿಎಸ್) ಮೂಲಕ ಮಾರಾಟ ಮಾಡಿದ ಸೀಮೆಎಣ್ಣೆ.
39. ಒಂದನೇ ಅನುಸೂಚಿಯ ಅಡಿಯಲ್ಲಿ ಬರುವವುಗಳನ್ನು ಹೊರತುಪಡಿಸಿ ಇತರ ಎಲೆ ತಟ್ಟೆಗಳು ಮತ್ತು ಬಟ್ಟಲುಗಳು.
40. ಆಯುರ್ವೇದ ಔಷಧಿಗಳ ತಯಾರಿಕೆಯಲ್ಲಿ ಬಳಸುವ ಔಷಧೀಯ ಸಸ್ಯಗಳು, ಬೇರುಗಳು, ಗಿಡಮೂಲಿಕೆ ಮತ್ತು ಮರದ ತೊಗಟೆಗಳು.
41. ಮಂಡಕ್ಕಿ (ಅಕ್ಕಿಯನ್ನು ಹುರಿದ ಅಥವಾ ಹಬೆಯಿಂದ ತಯಾರಿಸಿದ್ದು) ಮತ್ತು ಅವಲಕ್ಕಿ.
42. ನಾನ್‌ಫೆರಸ್ ಕಾಸ್ಟಿಂಗ್‌ಗಳು
43. ನಾನ್‌ಫೆರಸ್ ಲೋಹಗಳು ಮತ್ತು ಮಿಶ್ರಲೋಹಗಳು; ಅಲ್ಯೂಮಿನಿಯಂ, ಹಿತ್ತಾಳೆ, ಕಂಚು, ತಾಮ್ರ, ಕ್ಯಾಡ್‌ಮಿಯಮ್, ಸೀಸ ಮತ್ತು ಸತುವಿನ ಗಟ್ಟಿಗಳು, ಸ್ಲಾಬ್‌ಗಳು, ಬ್ಲಾಕ್‌ಗಳು, ಬಿಲೆಟ್‌ಗಳು, ಶೀಟ್‌ಗಳು, ಸರ್ಕಲ್‌ಗಳು, ಹೂಪ್ಸ್‌ಗಳು, ಸ್ಟ್ರಿಪ್‌ಗಳು, ಬಾರ್‌ಗಳು, ರಾಡ್‌ಗಳು, ರೌಂಡ್ಸ್‌ಗಳು, ಸ್ಕ್ವೇಯರ್‌ಗಳು ಮತ್ತು ಫ್ಲಾಟ್‌ಗಳು.
44. ಗಟ್ಟಿ ಮತ್ತು ಪುಡಿಗಳು ಸೇರಿದಂತೆ ಅದಿರುಗಳು ಮತ್ತು ಖನಿಜಗಳು.

45. ಅಮೋನಿಯಾ ಕಾಗದ, ಬ್ಲಾಟಿಂಗ್ ಕಾಗದ, ಕಾರ್ಬನ್ ಕಾಗದ, ಸೆಲೋಫೇನ್, ಪಿ.ವಿ.ಸಿ. ಲೇಪಿತ ಕಾಗದ, ಸ್ಟೆನ್ಸಿಲ್ ಕಾಗದ, ವಾಟರ್ ಪ್ರೂಫ್ ಕಾಗದ, ಆರ್ಟ್‌ಬೋರ್ಡ್‌ಗಳು, ಕಾರ್ಡ್ ಬೋರ್ಡ್‌ಗಳು,. ಕಾರೋಗೇಟೆಡ್ ಬೋರ್ಡ್‌ಗಳು, ಡೂಪ್ಲೆಕ್ಸ್ ಬೋರ್ಡ್‌ಗಳು, ಪಲ್ಪ್ ಬೋರ್ಡ್‌ಗಳು, ಸ್ಟ್ರಾಬೋರ್ಡ್‌ಗಳು, ಟ್ರಿಪ್ಲೆಕ್ಸ್ ಬೋರ್ಡ್‌ಗಳು ಸೇರಿದಂತೆ ಅಂಥವೇ ಎಲ್ಲಾ ಬಗೆಯ ಕಾಗದಗಳು ಆದರೆ, ಫೋಟೋಗ್ರಾಫಿಕ್ ಕಾಗದಗಳನ್ನು ಹೊರತುಪಡಿಸಿ ಅನುಪಯುಕ್ತ (ವೇಸ್ಟ್) ಕಾಗದಗಳು, ಪೇಪರ್ ವೇಸ್ಟ್‌ಗಳು ಮತ್ತು ಮುದ್ರಣ ಕಾಗದ;

46. ಕೊಳವೆ (ಪೈಪ್)ಗಳು ಮತ್ತು ಅದರ ಜೋಡಣೆಗಳನ್ನು ಹೊರತುಪಡಿಸಿ ಪೈಪ್‌ಗಳು, ಟ್ಯೂಬ್‌ಗಳು ಮತ್ತು ಎಲ್ಲ ಬಗೆಯ ಜೋಡಣೆಗಳು.

47. ಪ್ಲಾಸ್ಟಿಕ್ ಪಾದರಕ್ಷೆಗಳು

48. ಓದುವ ಪುಸ್ತಕಗಳು, ಲೇಖನ ಸಾಮಗ್ರಿಗಳು ಎಂದರೆ, ಲೆಕ್ಕದ ಪುಸ್ತಕಗಳು, ಕಾಗದದ ಲಕೋಟೆ (ಎನ್‌ವೆಲಪ್) ಗಳು, ಡೈರಿಗಳು, ಕ್ಯಾಲೆಂಡರ್‌ಗಳು, ರೇಸ್‌ಕಾರ್ಡ್‌ಗಳು, ಕಾಟ್‌ಲಾಗ್‌ಗಳು, ಗ್ರೀಟಿಂಗ್ ಕಾರ್ಡ್‌ಗಳು, ಆಮಂತ್ರಣ ಕಾರ್ಡ್‌ಗಳು, ಹ್ಯೂಮರ್ ಪೋಸ್ಟ್ ಕಾರ್ಡುಗಳು, ಚಿತ್ರದಿಂದ ಕೂಡಿದ ಪೋಸ್ಟ್ ಕಾರ್ಡ್‌ಗಳು, ವಿಶೇಷ ಸಂದರ್ಭಗಳಿಗಾಗಿ ಕಾರ್ಡ್‌ಗಳು, ಫೋಟೋ ಮತ್ತು ಸ್ಟ್ಯಾಂಪ್ ಆಲ್ಬಮ್‌ಗಳು.

49. ಟೋನರ್ ಮತ್ತು ಕಾರ್ಟ್ರಿಜ್‌ಗಳನ್ನು ಹೊರತುಪಡಿಸಿ ಮುದ್ರಣ ಇಂಕ್

50. ಸಂಸ್ಕರಿಸಿದ ಮತ್ತು ಬ್ರ್ಯಾಂಡ್ ಇರುವ ಉಪ್ಪು

51. ಬಿದಿರಿನ ಮರದ ಮತ್ತು ಕಾಗದದ ತಿರುಳು

52. ರೈಲು ಬೋಗಿಗಳು, ಎಂಜಿನ್‌ಗಳು ಮತ್ತು ವ್ಯಾಗನ್‌ಗಳು

53. ಸಿದ್ಧ ಉಡುಪುಗಳು

54. ರಿನ್ಯೂವೆಬಲ್ ಎನರ್ಜಿ ಡಿವೈಸ್‌ಗಳು ಮತ್ತು ಅವುಗಳ ಭಾಗಗಳು

55. ಸುರಕ್ಷಿತ ಬೆಂಕಿಕಡ್ಡಿಗಳು

56. ಬೀಜಗಳು

57. ಹೊಲಿಗೆ ಯಂತ್ರಗಳು

58. ಹಡಗು ಮತ್ತು ಇತರೆ ಜಲ ಸಾರಿಗೆ ನಾವೆಗಳು

59. ಕೆನೆ ತೆಗೆದ ಹಾಲಿನ ಪುಡಿ

60. ಆರ್ಗ್ಯಾನಿಕ್ ದ್ರಾವಕ ತೈಲವನ್ನು ಹೊರತುಪಡಿಸಿ ಇತರೆ ದ್ರಾವಕ ತೈಲಗಳು

61. ಜೀರಿಗೆ, ಮೆಂತ್ಯಾ, ಕಸಕಸೆ, ದನಿಯಾ, ಜೀರಿಗೆ, ಸೋಂಪ್, ಕಾಚು (ಕತ್ತಾ) ಅಜವಾನ, ಕಬಾಬ್‌ಚೀನಿ, ಬೊಜರ್ ಪೂಲ್, ತೇಜ್‌ಪತ್, ಜಾಪತ್ರೆ, ಮರಾಠಮೊಗ್ಗು, ಕಲ್ಲುಹೂವು, ಸುಗಂಧ ಸಸ್ಯ ಬೀಜಗಳು, ಅರಿಸಿನ, ಏಲಕ್ಕಿ, ಮೆಣಸು, ಸಿನ್ನಾಮನ್, ದಾಲ್‌ಚಿನ್ನಿ, ಲವಂಗ, ಹುಣಸೇಹಣ್ಣು ಮತ್ತು ಒಣಮೆಣಸಿನ ಕಾಯಿ.

62. ದೇಹದಾರ್ಢ್ಯ ಸಲಕರಣೆಗಳು, ಸೇರಿದಂತೆ ಆದರೆ ಧರಿಸುವ ಉಡುಪುಗಳು ಮತ್ತು ಪಾದರಕ್ಷೆಗಳನ್ನು ಹೊರತುಪಡಿಸಿದಂತೆ ಕ್ರೀಡಾ ಸಾಮಗ್ರಿಗಳು (ಒಳಾಂಗಣ ಮತ್ತು ಹೊರಾಂಗಣ)

63. ಬಟ್ಟೆಗೆ ಹಾಕುವ ಗಂಜಿ (ಸ್ಟಾರ್ಚ್)

64. ಟ್ರಾಕ್ಟರ್ ಮತ್ತು ಪವರ್ ಟಿಲ್ಲರ್‌ಗಳು, ಅವುಗಳ ಭಾಗಗಳು ಮತ್ತು ಟ್ರೇಲರ್‌ಗಳೂ ಸೇರಿದಂತೆ ಸಾಧನ ಸಾಮಗ್ರಿಗಳು ಆದರೆ, ಬ್ಯಾಟರಿಗಳು, ಟೈರುಗಳು, ಟ್ಯೂಬ್‌ಗಳು ಮತ್ತು ಪ್ಲ್ಯಾಪ್‌ಗಳನ್ನು ಹೊರತುಪಡಿಸಿ.

65. ಟ್ರಾನ್ಸ್‌ಮಿಷನ್ ಟವರ್‌ಗಳು (ಎಲೆಕ್ಟ್ರಿಕಲ್)

66. ಉದ್ಯಾನವನ ಮತ್ತು ಕಡಲತೀರ-ಕೊಡೆಗಳನ್ನು ಹೊರತುಪಡಿಸಿ ಕೊಡೆಗಳು

67. ವನಸ್ಪತಿ (ಹೈಡ್ರೋಜನೇಟೆಡ್ ವನಸ್ಪತಿ ತೈಲ)

68. ಹತ್ತಿ ಬೀಜದಿಂದ ಮತ್ತು ಹೊಟ್ಟಿನಿಂದ ತಯಾರಿಸಿದ ಎಣ್ಣೆಯೂ ಸೇರಿದಂತೆ ವನಸ್ಪತಿ ತೈಲ ಆದರೆ, ಪ್ರಸಾಧನಗಳಿಗೆ ಬಳಸುವ ವನಸ್ಪತಿ ತೈಲವನ್ನು ಹೊರತುಪಡಿಸಿ.

69. ಎಲ್ಲಾ ಬಗೆಯ ವೆಲ್ಡಿಂಗ್ ಎಲೆಕ್ಟ್ರೋಡ್‌ಗಳು, ಎನೋಡ್‌ಗಳು, ವೆಲ್ಡಿಂಗ್ ರಾಡ್‌ಗಳು, ಸಾಲ್ಡರಿಂಗ್ ರಾಡ್‌ಗಳು ಮತ್ತು ಸಾಲ್ಡರಿಂಗ್ ವೈರ್‌ಗಳೂ ಸೇರಿದಂತೆ ಎಲ್ಲಾ ಬಗೆಯ ವೆಲ್ಡಿಂಗ್ ಎಲೆಕ್ಟ್ರೋಡ್‌ಗಳು.

70. ಪೆನ್‌ಗಳು, ಪೆನ್ಸಿಲ್‌ಗಳು ಮತ್ತು ಅಂಥಹವೇ ಲೇಖನ ಸಾಧನಗಳು

ಡಿ. ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ಶೇಕಡಾ ಇಪ್ಪತ್ತರ ದರದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳು

ಕ್ರಮ ಸಂಖ್ಯೆ	ಸರಕುಗಳ ವಿವರ
1	2
1.	ನಿದ್ರಾಜನಕಗಳು (ನಾರ್ಕೋಟಿಕ್ಸ್)
2.	ಕಾಕಂಬಿ

ಅನುಬಂಧ - III
(ಪ್ಯಾರಾ-158)

ಎ. ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ಶೇಕಡಾ ನಾಲ್ಕರ ದರದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳು

ಕ್ರಮ ಸಂಖ್ಯೆ	ಸರಕುಗಳ ವಿವರ
1	2
1.	ಕಚ್ಚಾ, ಶುದ್ಧೀಕೃತ ಅಥವಾ ಸಂಸ್ಕರಿಸಿದ ಪ್ರಾಣಿಗಳ (ಮೀನು ಸೇರಿ) ಕೊಬ್ಬು ಮತ್ತು ಎಣ್ಣೆಗಳು
2.	ಗ್ಲಿಸರೋಲ್, ಕ್ರೂಡ್, ಗ್ಲಿಸರೋಲ್ ವಾಟರ್ಸ್ ಮತ್ತು ಗ್ಲಿಸರೋಲ್ ಲೈಜ್
3.	ಶುದ್ಧೀಕರಿಸಿದ ಅಥವಾ ಬಣ್ಣ ಹಾಕಿದ ಅಥವಾ ಹಾಕಿರದ ವೆಜಿಟಬಲ್ ಮೇಣಗಳು (ಟ್ರಿಗ್ಲಿಸರೈಡ್ ಹೊರತುಪಡಿಸಿ) ಜೇನು ಮೇಣ, ಇತರೆ ಕೀಟಕಗಳ ಮೇಣಗಳು, ಸ್ಪೆರ್ಮಾಸಿಟಿ, ಡಿಗ್ರಾಸ್, ಕೊಬ್ಬು ಪದಾರ್ಥಗಳನ್ನು ಅಥವಾ ಪ್ರಾಣಿ ಅಥವಾ ಸಸ್ಯ ಮೇಣಗಳ ಸಂಸ್ಕರಣೆಯಲ್ಲಿ ಉಳಿದ ಶೇಷ ವಸ್ತುಗಳು.
4.	ಕುದಿಸಿದ ಆಮ್ಲಜನಕ ನಿಯುಕ್ತಗೊಳಿಸಿದ ಪ್ರಾಣಿಗಳ ಅಥವಾ ಸಸ್ಯ ಕೊಬ್ಬು , ಜಲಾಂಶ ತೆಗೆದ, ಗಂಧಕ ಸಂಯುಕ್ತ, ಒಣಗಿಸಿದ, ಶೂನ್ಯದಲ್ಲಿ ಅಥವಾ ನಿಷ್ಕ್ರಿಯ ಅನಿಲದ ವಾತಾವರಣದಲ್ಲಿ ಪಾಲಿಮರೈಸ್ ಮಾಡಲಾದ ಅಥವಾ ಇನ್ನಾವುದೇ ರಾಸಾಯನಿಕ ಮಾರ್ಪಾಡು ಮಾಡಿದ ಕೊಬ್ಬು ಮತ್ತು ತೈಲಗಳ ಖಾದ್ಯೇತರ ಸಂಮಿಶ್ರಣಗಳು ಅಥವಾ ತಯಾರಿಕೆಗಳು
5.	ಲಿಕ್ವಿಡ್ ಗ್ಲೂಕೋಸ್ (ಔಷದಿ ಅಲ್ಲದ)
6.	ಯಾವುದೇ ತೀಕ್ಷ್ಣತಯ ಡಿನೇಚರ್ಡ್ ಇಥೈಲ್ ಆಲ್ಕೋಹಾಲ್
7.	ಮ್ಯಾಂಗನೀಸ್ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್, ಫೆರುಜಿನಸ್ ಮ್ಯಾಂಗನೀಸ್ ಅದಿರು ಮತ್ತು ಶೇಕಡ 20 ಅಥವಾ ಹೆಚ್ಚಿನ ಮ್ಯಾಂಗನೀಸ್ ಪರಿಮಾಣವಿರುವ ಕಾಂನ್‌ಸನ್‌ಟ್ರೇಟ್ಸ್
8.	ತಾಮ್ರದ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್
9.	ನಿಕಿಲ್ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್
10.	ಕೋಬಾಲ್ಟ್ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್
11.	ಅಲ್ಯುಮಿನಿಯಂ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್
12.	ಸೀಸದ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್
13.	ಸತು ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್
14.	ತವರದ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್
15.	ಕ್ರೋಮಿಯಂ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್
16.	ಟಂಗ್‌ಸ್ಟನ್ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್
17.	ಯುರೇನಿಯಂ ಅಥವಾ ಥೋರಿಯಂ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್

18. ಮೋಲಿಬಡಿನಮ್ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್
19. ಟೈಟಾನಿಯಂ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್
20. ನಿಯೋಬಿಯಂ, ಟಂಟಾಲಮ್, ವನಡಿಯಂ ಅಥವಾ ಜಿರ್‌ಕೋನಿಯಂ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್
21. ಅಮೂಲ್ಯ ಲೋಹಗಳ ಅದಿರು ಮತ್ತು ಕಾಂನ್‌ಸನ್‌ಟ್ರೇಟ್ಸ್
22. ಇತರೆ ಅದಿರುಗಳು ಮತ್ತು ಕಾಂನ್‌ಸನ್‌ಟ್ರೇಟ್ಸ್
23. ಕಬ್ಬಿಣ ಅಥವಾ ಉಕ್ಕನ್ನು ತಯಾರಿಸುವಾಗ ದೊರೆವ ಗ್ರಾನ್ಯೂಲೇಟೆಡ್ ಸ್ಲ್ಯಾಗ್ (ಸ್ಲ್ಯಾಗ್ ಸ್ಯಾಂಡ್
24. ಬೆನ್‌ಜೋಲ್
25. ಟಾಲ್ಯೋಲ್
26. ಜೈಲೋಲ್
27. ನಾಫ್ತಾಲೀನ್
28. ಫೇನೋಲ್ಸ್
29. ಕ್ರಿಯೋಸೊಟ್ ಎಣ್ಣೆಗಳು
30. ನಾರ್ಮಲ್ ಫ್ಯಾರಾಫಿನ್
31. ಬ್ಯೂಟಾಡೀನ್
32. ಬಿಟ್ಯುಮಿನ್
33. ಫ್ಲೋರಿನ್, ಕ್ಲೋರಿನ್, ಬ್ರೋಮಿನ್ ಮತ್ತು ಐಯೋಡಿನ್
34. ಉತ್ಕರಿಷಿಸಿದ ಅಥವಾ ದ್ರವೀಭವಿಸಿದ ಗಂಧಕ, ಕೊಲೈಡಲ್ ಗಂಧಕ
35. ಇಂಗಾಲ (ಬೇರೆಡೆ ಸೇರಿಸಿದ ಅಥವಾ ಹೇಳಿದವುಗಳನ್ನು ಮಿಕ್ಕ ಕಾರ್ಬನ್ ಬ್ಲ್ಯಾಕ್ ಮತ್ತು ಇಂಗಾಲದ ಪದಾರ್ಥಗಳು ಸೇರಿದಂತೆ)
36. ಹೈಡ್ರೋಜೆನ್, ಇತರೆ ವಿರಳ ಅನಿಲಗಳು ಮತ್ತು ಇತರೆ ಅಲೋಹಗಳು
37. ಮಿಶ್ರಣಗೊಳಿಸಿದ ಅಥವಾ ಮಿಶ್ರಲೋಹಗಳಿಂದ ಅಲ್‌ಕಾಲಿ ಅಥವಾ ಅಲ್‌ಕಲಿಲೈನ್ ಅರ್ಥ್ ಮೆಟಲ್ಸ್ ರೇರ್ ಅರ್ಥ್ ಮೆಟಲ್ಸ್, ಸ್ಕಾಂಡಿಯಮ್ ಮತ್ತು ಯಟ್ರಿಯಂ, ಅಥವಾ ಇನ್‌ಟರ್ ಅಲಾಯಿಡ್ ಮರ್‌ಕ್ಯುರಿ
38. ಹೈಡ್ರೋಜನ್ ಕ್ಲೋರೈಡ್ (ಹೈಡ್ರೋಕ್ಲೋರಿಕ್ ಆಸಿಡ್) ಕ್ಲೋರೋಸಲ್‌ಫ್ಯೋರಿಕ್ ಆಸಿಡ್
39. ಸಲ್‌ಫ್ಯೋರಿಕ್ ಆಸಿಡ್ ಮತ್ತು ಅದರ ಅನಿಡ್ರೈಡ್ಸ್, ಓಲಿಯಂ
40. ನೈಟ್ರಿಕ್ ಆಸಿಡ್, ಸಲ್‌ಫ್ಯೋರಿಕ್ ಆಸಿಡ್
41. ಡಿಫೋಸ್ಪರಸ್ ಪೆಂಟಾಕ್ಸೈಡ್, ಪಾಸ್ಪರಿಕ್ ಆಸಿಡ್ ಮತ್ತು ಪಾಲಿಫಾಸ್ಪರಿಕ್ ಆಸಿಡ್ಸ್
42. ಬೋರಾನ್ ಆಕ್ಸೈಡ್ ಬೋರಿಕ್ ಆಸಿಡ್
43. ಅಲೋಹಗಳ ಹ್ಯಾಲೈಡ್ಸ್ ಮತ್ತು ಹ್ಯಾಲೈಡ್ ಆಕ್ಸೈಡ್ಸ್

44. ಅಲೋಹಗಳ ಸಲ್ಫೈಡ್ಸ್, ಕಾಮರ್ಸ್ ಪಾಸ್ಪರಸ್ ಟ್ರೈಸಲ್ಫೈಡ್

45. ಅನ್‌ಹೈಡ್ರಸ್ ಅಥವಾ ಅಕ್ಯುಯಸ್ ಸಲ್ಯೂಷನಲ್ಲಿಯ ಅಮೋಲಿಯಾ

46. ಸೋಡಿಯಂ ಹೈಡ್ರಾಕ್ಸೈಡ್ (ಕಾಸ್ಟಿಕ್ ಸೋಡಾ), ಪೋಟಾಸಿಯಂ ಹೈಡ್ರಾಕ್ಸೈಡ್ (ಕಾಸ್ಟಿಕ್ ಪೋಟಾಷ) ಪಹಾಕ್ಸೈಡ್ಸ್ ಆಫ್ ಸೋಡಿಯಂ ಅಥವಾ ಪೋಟಾಸಿಯಂ ಪರಾಕ್ಸೈಡ್

47. ಮ್ಯಾಂಗನೀಸಿಯಂ, ಹೈಡ್ರಾಕ್ಸೈಡ್ ಮತ್ತು ಪೆರೋಕ್ಸೈಡ್ ಸ್ಟ್ರಾಂಟಿಯಂ ಅಥವಾ ಬೇರಿಯಂನ ಆಕ್ಸೈಡ್, ಹೈಡ್ರಾಕ್ಸೈಡ್ ಮತ್ತು ಪರಾಕ್ಸೈಡ್

48. ಅಲ್ಯುಮಿನಿಯಂ ಹೈಡ್ರಾಕ್ಸೈಡ್

49. ಕ್ರೋಮಿಯಂ ಆಕ್ಸೈಡ್ ಮತ್ತು ಹೈಡ್ರಾಕ್ಸೈಡ್ಸ್

50. ಮ್ಯಾಂಗನೀಸ್ ಆಕ್ಸೈಡ್ಸ್

51. ಐರನ್ ಆಕ್ಸೈಡ್ಸ್ ಮತ್ತು ಹೈಡ್ರಾಕ್ಸೈಡ್ಸ್

52. ಕೋಬಾಲ್ಟ್ ಆಕ್ಸೈಡ್ಸ್ ಮತ್ತು ಹೈಡ್ರಾಕ್ಸೈಡ್ಸ್, ಕಮರ್ಷಿಯಲ್ ಕೋಬಾಲ್ಟ್ ಆಕ್ಸೈಡ್

53. ಟೈಟಾನಿಯಂ ಆಕ್ಸೈಡ್

54. ಹೈಡ್ರಾಜೈನ್ ಮತ್ತು ಹೈಡ್ರೋಕ್ಸಲ್‌ಮೈನ್ ಮತ್ತು ಅದರ ಐನೋರ್ಗ್ಯಾನಿಕ್ಸ್ ಸಾಲ್ಟ್ಸ್ ಇತರ ಐನೋರ್ಗ್ಯಾನಿಕ್ಸ್ ಬೇಸಗಳು, ಇತರ ಮೆಟಲ್ ಆಕ್ಸೈಡ್‌ಗಳು, ಹೈಡ್ರಾಕ್ಸೈಡ್ಸ್ ಮತ್ತು ಪರಾಕ್ಸೈಡ್ಸ್

55. ಫ್ಲೋರೈಡ್ಸ್, ಫೋರ್ರೋಸಿಲಿಕೇಟ್ಸ್, ಫ್ಲೋರೋಅಲುಮಿನೇಟ್ಸ್ ಮತ್ತು ಇತರ ಕಾಂಪ್ಲೆಕ್ಸ್ ಫ್ಲೋರಿನ್ ಸಾಲ್ಟ್ಸ್

56. ಕ್ಲೋರೈಡ್, ಕ್ಲೋರೈಡ್ ಆಕ್ಸಿಡ್ ಮತ್ತು ಕ್ಲೋರೈಡ್ ಹೈಡ್ರೋಕ್ಸೈಡ್, ಬ್ರೋಮೈಡ್ಸ್ ಮತ್ತು ಬ್ರೋಮೈಡ್ ಆಕ್ಸೈಡ್ ಐಯೋಡೈಡ್ ಮತ್ತು ಐಯೋಡೈಡ್ ಆಕ್ಸೈಡ್

57. ಕ್ಲೋರೇಟ್ಸ್ ಮತ್ತು ಪರ್‌ಕ್ಲೋರೇಟ್ಸ್, ಬ್ರೋಮೇಟ್ಸ್ ಮತ್ತು ಪರ್‌ಬ್ರೋಮೇಟ್ಸ್, ಐಯೋಡೇಟ್ಸ್ ಮತ್ತು ಪೆರಿಯೋಡೇಟ್ಸ್

58. ಸಲ್ಫೈಡ್, ಪಾಲಿಯೋಸಲ್ಫೇಟ್ಸ್

59. ಡಿತಿಯೋನೈಟ್ಸ್ ಮತ್ತು ಸಲ್‌ಪಾಕ್ಸಿನೇಲೇಟ್ಸ್

60. ಸಲ್ಫೈಡ್ಸ್ , ತೈಯೋಸಲ್ಫೈಡ್

61. ಕಾಪರ್ ಸಲ್‌ಫೇಟ್

62. ನೈಟ್ರೈಟ್ಸ್, ನೈಟ್ರೇಟ್

63. ಫಾಸ್ಪಿನೇಟ್ಸ್ (ಹೈಪೋಪಾಸ್‌ಫೈಟ್ಸ್), ಫಾಸ್‌ಪೋನೇಟ್ಸ್ (ಪಾಸ್‌ಪೇಟ್ಸ್) ಪಾಸ್‌ಪೇಟ್ಸ್ ಮತ್ತು ಪಾಲಿಪಾಸ್‌ಫೇಟ್ಸ್

64. ಕಾರ್ಬೋನೇಟ್ಸ್ ಪರಾಕ್ಸೋ ಕಾರ್ಬೋನೇಟ್(ಪರ್‌ಕಾರ್ಬೋನೇಟ್) ಅಮೋನಿಯಂ ಕಾರ್ಬೋನೇಟ್ಸ್ ಇರುವ ಕಮರ್ಷಿಯಲ್ ಅಮೋನಿಯಂ ಕಾರ್ಬೋನೇಟ್ಸ್

65. ಸೈಯನೈಡ್ಸ್, ಸೈಯನೈಡ್ಸ್ ಆಕ್ಸೈಡ್ ಮತ್ತು ಕಾಂಪ್ಲೆಕ್ಸ್ ಸೈಯನೈಡ್ಸ್

66. ಪಲ್‌ಮಿನೇಟ್ಸ್, ಸೈಯನೇಟ್ಸ್ ಮತ್ತು ತೈಯೋಸೈಯನೇಟ್ಸ್

67. ಬೋರೇಟ್ಸ್, ಫೆರೋಕ್ಸೋಬೋರೇಟ್ಸ್ (ಪರ್ಬರೇಟ್ಸ್)

68. ಸೋಡಿಯಂ ಡೈಕ್ರೋಮೇಟ್

69. ಪೊಟಾಸಿಯಂ ಡೈಕ್ರೋಮೇಟ್

70. ರೇಡಿಯೋ ಆಕ್ಟೀವ್ ಕೆಮಿಕಲ್ ಎಲಿಮೆಂಟ್ಸ್ ಮತ್ತು ರೇಡಿಯೋ ಆಕ್ಟೀನ್ ಐಸೋಟೋಪ್ಸ್ ಪಿಸ್ಸೈಲ್ ಅಥವಾ ಫಟೈಲ್ ಕೆಮಿಕಲ್ ಎಲಿಮೆಂಟ್ಸ್ ಮತ್ತು ಐಸೋಟೋಪ್ಸ್ ಸೇರಿ) ಮತ್ತು ಅವುಗಳಿರುವ ಆದರ ಕಾಂಪೌಂಡ್‌ಗಳು ಮಿಕ್ಸ್‌ಚರ್‌ಗಳು ಮತ್ತು ರೆಸಿಡ್ಯೂಸ್

71. ಕ್ರ.ಸಂ.70 ರಲ್ಲಿ ಇರುವುದನ್ನು ಬಿಟ್ಟು ಐಸೋಟೋಪ್ಸ್ ಇನಾರ್ಗಾನಿಕ್ ಅಥವಾ ಆರ್ಗಾನಿಕ್ ಆದ ಅಂತಹ ಐಸೋಟೋಪ್ಸ್,

72. ಕಾಂಪೌಂಡುಗಳು, ಇನ್‌ಆರ್ಗಾನಿಕ್ ಅಥವಾ ಆರ್ಗಾನಿಕ್ ರೇರ್ ಆರ್ತ್ ಮೆಟಲ್‌ಗಳ ಯೆಟ್ರಿಯಂ ಅಥವಾ ಸ್ಕಾಂಡಿಯಂ ಅಥವಾ ಅಂತಹ ಲೋಹಗಳ ಕಾಂಪೌಂಡುಗಳು

73. ಫೆರೋಪಾಸ್ಫರಸ್ ಬಿಟ್ಟು ಕೆಮಿಕಲಿ ಡಿಫೈನ್ಡ್ ಮಾಡಿದ ಫಾಸ್‌ಫೈಡ್

74. ಕ್ಯಾಲ್‌ಸಿಯಂ ಕಾರ್ಬೈಡ್

75. ಎಥಿಲಿನ್, ಪ್ರಾಪಿಲಿನ್

76. ಸೈಕ್ಲಿಕ್ ಹೈಡ್ರೋಕಾರ್ಬನ್ಸ್

77. ಹೈಡ್ರೋಕಾರ್ಬನ್‌ಗಳ ಹ್ಯಾಲೋಜನೇಟೆಡ್ ಡೆರಿವೇಟೀವ್ಸ್

78. ಹ್ಯಾಲೋಜಿನೇಟೆಡ್ ಅಥವಾ ಆಗಿರದ ಹೈಡ್ರೋಕಾರ್ಬನ್‌ಗಳ ಸಲ್ಫೋನೇಟೆಡ್, ನೈಟ್ರೇಟೆಡ್ ಅಥವಾ ನೈಟ್ರೋಸೇಟೆಡ್ ಡೆರಿವೇಟೀವ್ಸ್

79. ಮೆಥಾನೋಲ್

80. ಡೈ-ಇತಲಿನ್ ಗ್ಲೈಕಾಲ್, ಮೋನೋ ಇತಿಲೀನ್ ಗ್ಲೈಕಾಲ್, ಟ್ರಿ ಇತಿಲೀನ್ ಗ್ಲೈಕಾಲ್, ಇತಿಲೀನ್ ಗ್ಲೈಕಾಲ್, ಹೆವಿ ಇತಿಲೀನ್ ಗ್ಲೈಕಾಲ್,

81. ಸೈಕ್ಲಿಕ್ ಆಲ್‌ಕೋಹಾಲ್‌ಗಳ ಮತ್ತು ಅದರ ಹಲೋಜಿನೇಟೆಡ್, ಸಲ್‌ಫೋನೇಟೆಡ್ ನೈಟ್ರೇಟೆಡ್ ಅಥವಾ ನೈಟ್ರೋಸೇಟೆಡ್ ಡೆರಿವೇಟೀವ್‌ಗಳು

82. ಫೆನಾಲ್ಸ್ ಅಥವಾ ಫೆನಾಲ್ ಆಲ್ಕೋಹಾಲ್‌ಗಳ ಹ್ಯಾಲೋಜಿನೇಟೆಡ್, ಸಲ್‌ಫೋನೇಟೆಡ್ ನೈಟ್ರೇಟೆಡ್ ಅಥವಾ ನೈಟ್ರೋಸೇಟೆಡ್ ಡೆರಿವೇಟೀವ್ಸ್

83. ಈತರ್ಸ್ , ಈತರ್ ಆಲ್ಕೋಹಾಲ್, ಈತರ್ ಫೆನಾಲ್ಸ್, ಈತರ್ ಆಲ್ಕೋಫೆನಾಲ್ಸ್, ಆಲ್ಕೋಹಾಲ್ ಫೆರಾಕ್ಸೈಡ್ ಐದರ್ ಫರಾಕ್ಸೈಡ್ಸ್ ಕೆಟೋನೇ ಫೆರಾಕ್ಸೈಡ್ಸ್ (ಕೆಮಿಕಲಿ ಡಿಫೈನಡ್ ಅಥವಾ ಇಲ್ಲದಿರದ) ಮತ್ತು ಅದರ ಹಲೋಜಿನೇಟೆಡ್, ಸಲ್‌ಫೋನೇಟೆಡ್, ನೈಟ್ರೇಟೆಡ್ ಅಥವಾ ನೈಟ್ರೋಸೇಟೆಡ್ ಡೆರಿವೇಟೀವ್ಸ್

84. ತ್ರಿ ಮೆಂಬರ್ಡ್ ರಿಂಗ್ ಇರುವ ಎಪೋಕ್ಸೈಡ್ಸ್, ಎಪೋಕ್ಸಿ ಆಲ್ಕೋಹಾಲ್, ಎಪೋಕ್ಸಿ ಫೆನಾಲ್ಸ್ ಮತ್ತು ಎಪೋಕ್ಸಿ ಈಥರ್‌ಗಳ ಮತ್ತು ಅವುಗಳ ಹ್ಯಾಲೋಜಿನೇಟೆಡ್, ಸಲ್ಫೋನೇಟೆಡ್, ನೈಟ್ರೇಟೆಡ್ ಅಥವಾ ನೈಟ್ರೋಸೇಟೆಡ್ ಡೆರಿವೇಟೀವ್ಸ್

85. ಇಥಲೀನ್ ಆಕ್ಸೈಡ್

86. ಆಮ್ಲಜನಕ ಕಾರ್ಯವಿರುವ ಅಥವಾ ಇರದಿರುವ ಅಸಿಟಾಲ್ಸ್ ಮತ್ತು ಹೆಮಿಅಸಿಟಾಲ್ಸ್, ಮತ್ತು ಅದರ ಹಲೋಜಿನೇಟೆಡ್, ಸಲ್ಫೋನೇಟೆಡ್ ನೈಟ್ರೇಟೆಡ್ ಅಥವಾ ನೈಟ್ರೋಸೇಟೆಡ್ ಡೆರಿವೇಟೀವ್ಸ್

87. ಆಮ್ಲಜನಕ ಕಾರ್ಯವಿರುವ ಅಥವಾ ಇರದಿರುವ ಅಲ್ಡಿಹೈಡ್ಸ್ ಸೈಕ್ಲಿಕ್ ಪಾಲಿಮರ್ಸ್, ಅಲ್ಡಿಹೈಡ್‌ಗಳ ಘಾರ್ಮಾ

88. ಕ್ರ.ಸಂ.87ರ ಹ್ಯಾಲೋಜಿನೇಟೆಡ್, ಸಲ್ಫೋನೇಟೆಡ್, ನೈಟ್ರೇಟೆಡ್ ಅಥವಾ ನೈಟ್ರೋಸೇಟೆಡ್ ಡೆರಿವೇಟೀವ್ಸ್

89. ಸಾಟುರೇಟೆಡ್ ಅಸ್ಸೈಕ್ಲಿಕ್, ಮಾನೋಕಾರ್ಬೋ ಅಸಿಲಿಕ್ ಆಸಿಡ್ ಮತ್ತು ಅದರ ಅನ್ ಹೈಡ್ರೈಡ್ಸ್, ಹ್ಯಾಲ್ಯಾಡ್ಸ್ ಪಾರಾಕ್ಸೈಡ್ಸ್ ಮತ್ತು ಪಾರಾಕ್ಸಿಡ್ ಅದರ ಹ್ಯಾಲೋಜಿನೇಟೇಡ್, ಸಲ್ಫೋನೇಟೆಡ್, ನೈಟ್ರೇಟೆಡ್ ಅಥವಾ ನೈಟ್ರೋಸೇಟೆಡ್ ಡೆರಿವೇಟೀವ್ಸ್

90. ಅನ್ ಸಾಟುರೇಟೆಡ್ ಅಸ್ಸೈಕ್ಲಿ, ಮೋನೋಕಾರ್ಬೋ ಅಸ್ಸೈಕ್ಲಿಕ್ ಆಸಿಡ್ಸ್ ಸೈಕ್ಲಿಕ್ ಮೋನೋಕಾರ್ಬೋ ಅಸಿಲಿಕ್ ಆಸಿಡ್ಸ್ ಅದರ ಅನ್ ಹೈಡ್ರೈಡ್ಸ್, ಹ್ಯಾಲ್ಯಾಡ್ಸ್ ಪಾರಾಕ್ಸೈಡ್ಸ್ ಮತ್ತು ಪಾರಾಕ್ಸಿಡ್ಸ್ ಅದರ ಹ್ಯಾಲೋಜಿನೇಟೆಡ್, ಸಲ್ಫೋನೇಟೆಡ್ ನೈಟ್ರೇಟೆಡ್ ಅಥವಾ ನೈಟ್ರೋಸೇಟೆಡ್ ಡೆರಿವೇಟೀವ್ಸ್

91. ಪಾಲಿಕಾರ್ಬೋಆಕ್ಸಿಲಿಕ್ ಆಸಿಡ್ಸ್, ಅದರ ಅನ್ ಹೈಡ್ರೈಡ್ಸ್ ಹಾಲೈಟ್ಸ್ ಪರಾಕ್ಸೈಡ್ಸ್ ಮತ್ತು ಪೆರಾಕ್ಸಿ ಆಸಿಡ್ಸ್ , ಅದರ ಹ್ಯಾಲೋಜಿನೇಟೆಡ್, ಸಲ್ಫೋನೇಟೆಡ್ ನೈಟ್ರೇಟೆಡ್ ಅಥವಾ ನೈಟ್ರೋಸೇಟೆಡ್ ಡೆರಿವೇಟೀವ್ಸ್

92. ಆಮ್ಲಜನಕ ಕಾರ್ಯವಿರುವ ಕಾರ್ಬಾಕ್ಸಲಿಕ್ ಆಸಿಡ್ಸ್ ಮತ್ತು ಅದರ ಅನ್ ಹೈಡ್ರೈಡ್ಸ್ ಹ್ಯಾಲ್ಯಾಡ್ಸ್ ಪರಾಕ್ಸೈಡ್ಸ್ ಮತ್ತು ಪೆರಾಕ್ಸಿ ಆಸಿಡ್ಸ್ , ಅದರ ಹಲೋಜಿನೇಟೆಡ್, ಸಲ್ಫೋನೇಟೆಡ್ ನೈಟ್ರೇಟೆಡ್ ಅಥವಾ ನೈಟ್ರೋಸೇಟೆಡ್ ಡೆರಿವೇಟೀವ್ಸ್

93. ಫಾಸ್ಫಾರಿಕ್ ಈಸ್ಟರ್ಸ್ ಮತ್ತು ಅದರ ಲವಣಗಳು, ಲ್ಯಾಕ್ಟೋಪಾಸ್ ಫರ್ಟ್ ಸೇರಿ ಅದರ ಹ್ಯಾಲೋಜಿನೇಟೆಡ್, ಸಲ್ಫೋನೇಟೆಡ್ ನೈಟ್ರೇಟೆಡ್ ಅಥವಾ ನೈಟ್ರೋಸೇಟೆಡ್ ಡೆರಿವೇಟೀವ್ಸ್

94. ಹೈಡ್ರೋಜೆನ್ ಹ್ಯಾಲ್ಯಾಡ್ಸ್‌ನ ಈಸ್ಟರ್‌ಗಳನ್ನು ಬಿಟ್ಟು ಇತರ ಇನ್ ಆರ್ಗಾನಿಕ್ ಆಸಿಡ್ಸ್ ಮತ್ತು ಅದರ ಲವಣಗಳು, ಹ್ಯಾಲೋಜಿನೇಟೆಡ್, ಸಲ್ಫೋನೇಟೆಡ್ ನೈಟ್ರೇಟೆಡ್ ಅಥವಾ ನೈಟ್ರೋಸೇಟೆಡ್ ಡೆರಿವೇಟೀವ್ಸ್

95. ಅಮೈನ್ ಪಂಕ್ಷನ್ ಕಾಂಪೌಂಡ್ಸ್

96. ಆಕ್ಸಿಜನ್ ಪನ್‌ಕ್ಷನ್ ಅಮೈನೋ ಕಾಂಪೌಂಡ್ಸ್
97. ಕ್ವಾರ್ಟ್ ನರಿ ಅಮೋನಿಯಂ ಲವಣಗಳು ಮತ್ತು ಹೈಡ್ರಾಕ್ಸೈಡ್ಸ್ ಲೆಕ್ಟಿನ್ಸ್ ಮತ್ತು ಇತರ ಫಾಸ್ ಪೋ ಅಮಿನಾಲಿಪಿಡ್ಸ್
98. ಕಾರ್ಬಾಕ್ಸಿಮೈಡ್ ಪನ್‌ಕ್ಷನ್ ಕಾಂಪೌಂಡ್ಸ್, ಅಮೈಡ್ ಫಂಕ್ಷನ್ ಕಾಂಪೌಂಡ್ಸ್ ಅಥವಾ ಕಾರ್ಬಾನಿಕ್ ಆಸಿಡ್
99. (ಸ್ಯಾಕರಿನ್ ಮತ್ತು ಅದರ ಲವಣಗಳ ಸೇರಿದಂತೆ) ಕಾರ್ಬಾಕ್ಸಿಮೈಡ್ ಪನ್‌ಕ್ಷನ್ ಕಾಂಪೌಂಡ್ಸ್, (ಸ್ಯಾಕರಿನ್ ಮತ್ತು ಅದರ ಲವಣಗಳ ಜೊತೆಗೆ) ಮತ್ತು ಇಮಿನೆ ಪನ್‌ಕ್ಷನ್ ಕಾಂಪೌಂಡ್ಸ್
100. ನೈಟ್ರೈಲ್ ಪನ್‌ಕ್ಷನ್ ಕಾಂಪೌಂಡ್ಸ್
101. ಡೈಯಜೋ, ಅಜೋ, ಅಥವಾ ಅಜೋಕ್ಸಿ ಕಾಂಪೌಂಡ್ಸ್
102. ಆರ್ಗಾನಿಕ್ ಡಿರೈವಿಟೀವ್ಸ್ ಆಪ್ ಹೈಡ್ರೋಜೇಲ್ ಆರ್ ಹೈಡ್ರಾಕ್ಸಿಲೆಮೈನ್
103. ಆರ್ಗಾನೋ ಸಲ್‌ಪರ್ ಕಾಂಪೌಂಡ್ಸ್
104. ಇಥಿಲೈನ್ ಡಯಾಮೈನ್ ಟೆಟ್ರಾ ಅಸಿಟಿಕ್ ಆಸಿಡ್, ನೈಟ್ರಲ್ಲೋ ಟ್ರಿಯಾ ಅಸಿಟ್ರಿಕ್ ಆಸಿಡ್ ಮತ್ತು ಅದರ ಡಿರಿಯೇಟ್ವಿಸ್
105. ಆಕ್ಸಿಜನ್ ಹೆಟರೋ ಆಟಮ್ಸ್ ಮಾತ್ರ ಇರುವ ಹೆಟ್ರೋ ಸೈಕ್ಲಕ್ ಕಾಂಪೌಂಡ್ಸ್
106. ನೈಟ್ರೋಜನ್ ಹೆಟರೋ ಆಟಮ್ಸ್ ಮಾತ್ರ ಇರುವ ಹೆಟ್ರೋ ಸೈಕ್ಲಕ್ ಕಾಂಪೌಂಡ್ಸ್
107. ನ್ಯೂಕ್ಲಿಕ್ ಆಸಿಡ್ ಮತ್ತು ಅದರ ಲವಣಗಳು ಇತರ ಹೆಟರೋ ಸೈಕ್ಲಿಕ್ ಕಾಂಪೌಂಡ್ಸ್
108. ಸಲ್‌ಪೋನಮೈಡ್ಸ್
109. ಪ್ರಾಕೃತಿಕ ಅಥವಾ ಕೃತಿಮವಾಗಿ ತಯಾರಿಸಿದ ಗ್ಲೈಕೋಸೈಡ್ಸ್, ಮತ್ತು ಅದರ ಲವಣಗಳು, ಈತರ್ಸ್, ಈಸ್ಟರ್ಸ್ ಮತ್ತು ಇತರೆ ಡಿರೈವಿಟೀವ್ಸ್
110. ಪ್ರಾಕೃತಿಕ ಅಥವಾ ಕೃತಿಮವಾಗಿ ತಯಾರಿಸಿದ ಸಸ್ಯ ಆಲ್ಕಾಲಾಯಿಡ್ಸ್, ಮತ್ತು ಅದರ ಲವಣಗಳು, ಈತರ್ಸ್, ಈಸ್ಟರ್ಸ್ ಮತ್ತು ಇತರೆ ಡಿರೈವಿಟೀವ್ಸ್
111. ಈಥಲಿನ್ ಡಯಾಮಿನ್ ಟೆಟ್ರಾ ಅಸಿಟಿಕ್ ಆಸಿಡ್ ನಿಟ್ರೆಲೋ ಟ್ರಿಯಾ ಅಸಿಟಿಕ್ ಆಸಿಡ್ ಮತ್ತು ಅದರ ಡಿರೈವಿಟೀವ್ಸ್
112. ಸಸ್ಯಜನಿಕ ಟ್ಯಾನಿಂಗ್ ಎಕ್ಸ್‌ಟ್ರಾ ಕ್ಟ್ ಆಪ್ ಟ್ಯಾನಿಸ್ ಮತ್ತು ಅದರ ಲವಣಗಳು, ಈತರ್ಸ್, ಈಸ್ಟರ್ಸ್ ಮತ್ತು ಇತರೆ ಡಿರೈವಿಟೀವ್ಸ್
113. ಸಿಂತೆಟಿಕ್ ಆರ್ಗಾನಿಕ್ ಟ್ಯಾನಿಂಗ್ ವಸ್ತುಗಳ ಪ್ರಾಕೃತಿಕ ಟ್ಯಾನಿಂಗ್ ವಸ್ತುಗಳು ಇರುವ ಅಥವಾ ಇಲ್ಲದಿರುವ ಇನ್ ಆರ್ಗಾನಿಕ್ ಟ್ಯಾನಿಂಗ್ ವಸ್ತುಗಳ ಟ್ಯಾನಿಂಗ್ ಪ್ರಿಪರೇಷನ್ಸ್ ಪ್ರೀಟ್ಯಾನಿಂಗ್‌ಗೆ ಉಪಯೋಗಿಸುವ ಎನ್‌ಜಿಮಾಟಿಕ್ ಪ್ರಿಪರೇಷನ್ಸ್
114. ಕೆಮಿಕಲಿ ಡಿಫೈನ್ಡ್ ಅಥವಾ ಇರದ ಸಸ್ಯ ಅಥವಾ ಪ್ರಾಣಿಜನಕ ಕಲರಿಂಗ್ ಮ್ಯಾಟರ್‌ಗಳು

(ಡೈಯಿಂಗ್ ಎಕ್ಸ್ ಟ್ರಾಕ್ಸ್ ಸೇರಿ ಆದರೆ ಅನಿಮಲ್ ಬ್ಲಾಕ್ ಹೊರತುಪಡಿಸಿ)

115. ಸಿಂತೆಟಿಕ್ ಆರ್ಗಾನಿಕ್ ಕಲರಿಂಗ್ ಮ್ಯಾಟರ್ ಗಳು, ಸಿಂತೆಟಿಕ್ ಆರ್ಗಾನಿಕ್ ಕಲರಿಂಗ್ ಮ್ಯಾಟರ್ ಆಧಾರಿತ ಪ್ರಿಪರೇಶನ್‌ಗಳು, ಕೆಮಿಕಲಿ ಡಿಫೈನ್ಡ್ ಆಗಿರುವ ಅಥವಾ ಆಗದಿರುವ ಫ್ಲೋರಸಂಟ್ ಬ್ರೈಟನಿಂಗ್ ಏಜೆಂಟ್‌ಗಳು ಅಥವಾ ಲ್ಯುಮಿನೋ ಫೋರ್‌ಗಳು

116. ಕಲರ್ ಲೇಕ್ಸ್, ಕಲರ್ ಲೇಕ್ಸ್ ಆದಾರಿತ ಪ್ರಿಪರೇಷನ್‌ಗಳು

117. ಪೌಡರ್ ಅಥವಾ ಗ್ರಾನ್ಯುಯಲ್ಸ್ ಅಥವಾ ಫ್ಲೇಕ್ಸ್ ರೂಪದಲ್ಲಿರುವ ಗ್ಲಾಸ್ ಸ್ಲಿಟ್ ಮತ್ತು ಇತರೆ ಗ್ಲಾಸ್

118. ಇತರೆ ಗ್ಲಾಸ್

119. ಪ್ರಿಪೇರ್ಡ್ ಡ್ರೈಯರ್ಸ್

120. ಕಾನ್‌ಸನ್‌ಟ್ರೇಟೆಡ್ ಅಥವಾ ಸಾಲಿಡ್ ಪ್ರಿಂಟಿಂಗ್ ಇಂಕ್

121. ಕ್ಯಾಸಿನ್, ಕ್ಯಾಸಿನೇಟ್ಸ್ ಮತ್ತು ಇತರೆ ಕ್ಯಾಸಿನ್ ಡಿರೈವಿಟೀವ್ಸ್ ಕ್ಯಾಸಿನ್ ಗ್ಲೂಸ್

